BUDGET FOR 1958-59—GENERAL DISCUSSION.

(Debate continued.)

*ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಡ್ಜೆಟ್ಟನ್ನು ಕುರಿತು ದೀರ್ಘವಾದಂಥ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮ ಸ್ಪಷ್ಟವಾದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಆ ಬಗ್ಗೆ ಪೋಲೀಸ್ ಇಲಾಖೆಯ ಮಟ್ಟಿಗೆ ಸ್ವಲ್ಪ ಕಟುತರವಾದ ಟೀಕೆಗಳು ಸಭೆಯಲ್ಲಿ ನಡೆದುವು. ಅವುಗಳನ್ನು ನಾನು ಸಾವಕಾಶವಾಗಿ ಕೇಳಿ ಆ ವಿಷಯದ ಬಗ್ಗೆ ಕೆಲವು ವಿವರಣೆಗಳನ್ನು ಈ ಸಭೆಗೆ ಒಪ್ಪಿಸಬೇಕೆಂದು ನಾನು ಈಗ ಇಲ್ಲಿ ನಿಂತಿದ್ದೇನೆ. ಈ ಮೊದಲೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆನಡೆದಾಗ ಕೆಲವು ರೀತಿಯಲ್ಲಿ ಇವೇ ಟೀಕೆಗಳು ವ್ಯಕ್ತವಾದುವು. ಆ ಸಂದರ್ಭದಲ್ಲಿ ನಾನು ಉತ್ತರವನ್ನು ಹೇಳುತ್ತಾ ಮುಖ್ಯವಾಗಿ ಪೋಲೀಸ್ ಇಲಾಖೆಗೆ ಅದರ ಕೆಲಸಕಾರ್ಯಗಳನ್ನು ನಡೆಸುವಂಥಾದ್ದರಲ್ಲಿರ ತಕ್ಕಂಥ ಅಡಚಣೆಗಳನ್ನು ವಿವರಿಸಿದೆ. ಆ ವಿವರಣೆ ಮಾನ್ಯ ಸದಸ್ಯರಿಗೆ ಬಹುಶಃ ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲವೆಂದು ನನಗೆ ತಿಳಿಯುತ್ತದೆ. ಸದಸ್ಯರು ಈ ಇಲಾಖೆಯಲ್ಲಿರುವಂಥ ಕೆಲವು ತೊಡಕು ತೊಂದರೆಗಳನ್ನು ಇನ್ನೂ ಸರಿಯಾದ ರೀತಿಯಲ್ಲಿ ವಿಮರ್ಶೆಮಾಡಿ ತಿಳಿದುಕೊಳ್ಳುವುದಕ್ಕೆ ಆಸ್ಪದವಾಗಲಿಲ್ಲವೆಂಬ ಅಭಿಪ್ರಾಯ ಬಂದದ್ದರಿಂದ ಕೆಲವೊಂದು ವಿಷಯಗಳನ್ನು ಈಗ ಈ ಸಭೆಗೆ ಒಪ್ಪಿಸುತ್ತಿದ್ದೇನೆ. ಅದೇನೆಂದರೆ, ಹೊಸರಾಜ್ಯ ನಿರ್ಮಾಣವಾದನಂತರ ಪೋಲೀಸ್ ಇಲಾಖೆಗೆ ಬಹಳ ಮಟ್ಟಿನ ಎಡರುತೊಡರುಗಳು ಬಂದು ಐದು ವಿಭಾಗಗಳಲ್ಲಿರುವ ಕಾರ್ಯನೀತಿ, ಆ ಭಾಗಗಳ ಉದ್ಯೋಗಗಳು, ನೌಕರರುಗಳ ವಿಲೀನತೆ, ಪೋಲೀಸ್ ಆಕ್ಟ್‌ಗಳು, ಪೋಲೀಸ್ ಮ್ಯಾನ್ಯುಯಲ್‌ಗಳು ಎಲ್ಲವೂ ವ್ಯತ್ಯಾಸವಿದ್ದುದರಿಂದ ಪ್ರತಿಯೊಂದು ಆಕ್ಟನ್ನೂ ಒಂದೊಂದು ಪ್ರದೇಶಕ್ಕೆ ಪ್ರತ್ಯೇಕ ಸ್ವರೂಪದಲ್ಲಿ ಆಚರಣೆಮಾಡಿ, ಎಲ್ಲಾ ಪ್ರಾಂತಗಳ ಕಾನೂನುಗಳನ್ನೂ ರೂಪುಗೊಳಿಸುವ ಹಾಗೆ ವ್ಯವಸ್ಥೆಮಾಡಿ, ಅವುಗಳನ್ನು ಒಂದು ಹತೋಟಿಯಲ್ಲಿ ತರುವಂಥ ಕೆಲಸ ಬಹಳ ಕಷ್ಟದಾಯಕವಾಗಿತ್ತು. ಈ ಕೆಲಸವನ್ನು ಇನ್ನೂ ಪೂರ್ಣಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಈಗ ಬಹಳ ಮಟ್ಟಿಗೆ ತೊಂದರೆ ತೊಡಕುಗಳನ್ನು ನಾವು ನಿವಾರಿಸಿಕೊಂಡಿದ್ದೇವೆ, ಒಂದು ರೀತಿಯಲ್ಲಿ ಒಂದು ಹಿಡಿತದ ಆಡಳಿತಕ್ಕೆ ಪೋಲೀಸ್ ಇಲಾಖೆ ಬಂದಿದೆ ಎಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಏತಕ್ಕೆಂದರೆ, ಏಕೀಕೃತವಾದಂಥ ಕಾನೂನುಗಳು, ಪದ್ಧತಿಗಳು, ರೂಲ್ಸ್‌ಗಳು, ಆರ್ಡರುಗಳನ್ನು ಮಾಡುವಂಥ ಕೆಲಸ ಬಹಳ ಕಷ್ಟದಾಯಕವಾಗಿತ್ತು. ಉದಾಹರಣೆಗೆ ಹೇಳುವುದಾದರೆ, ಈಗಿರತಕ್ಕ ಪೋಲೀಸ್ ಮ್ಯಾನ್ಯುಯಲ್‌ಗಳನ್ನೆಲ್ಲಾ ಸೇರಿಸಿ ಸಂಸ್ಥಾನಕ್ಕೆಲ್ಲಾ ಒಂದೇ ಪೋಲೀಸ್ ಮ್ಯಾನ್ಯುಯಲ್ ಮಾಡಬೇಕಾದರೆ, ಪ್ರತಿಯೊಂದು ಭಾಗದ ಪೋಲೀಸ್ ಮ್ಯಾನ್ಯುಯಲ್ಲನ್ನೂ ಪರಿಶೀಲನೆಮಾಡಿ ಅದರ ಮುಖ್ಯಾಂಶಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡು ಒಂದು ಏಕೀಕೃತವಾದ ಪೋಲೀಸ್ ಮ್ಯಾನ್ಯುಯಲ್ ಮಾಡಬೇಕಾಗಿದೆ. ಇವತ್ತು ಅದು ಸಿದ್ಧವಾಗುತ್ತಿದೆ. ಅದು ಇಷ್ಟರಲ್ಲಿಯೇ ಜಾರಿಗೆ ಬರುವುದಾಗಿದೆ. ಅದು ಸಾವಿರ ಪುಟದ ಒಂದು ದೊಡ್ಡ ಗ್ರಂಥ. ಅದಕ್ಕೆ 14 ಅಪೆಂಡಿಸೀಸ್ ಇವೆ. ಬೇಕಾದಷ್ಟು ಪರಿಶಿಷ್ಟಗಳಿವೆ. ಪ್ರತಿಯೊಂದು ಅಂಶ ವನ್ನೂ ಚೆನ್ನಾಗಿ ವಿಮರ್ಶೆಮಾಡಿ ಒಂದು ಏಕೀಕೃತವಾದ ಪೋಲಿಸ್ ಮ್ಯಾನ್ಯುಯಲ್ ಮಾಡುವಂಥ ಕೆಲಸ ಬಹಳ ಜವಾಬ್ದಾರಿಯುತವಾದುದು. ವಿಶೇಷವಾದ ಕಾಲ ಹಿಡಿಯುತ್ತದೆ. ಈ ವಿಚಾರವನ್ನು ಮಾನ್ಯ ಸದಸ್ಯರು ಸ್ವಲ್ಪ ಬಿಚ್ಚು ಮನಸ್ಸಿನಿಂದ ಆಲೋಚನೆಮಾಡಬೇಕಾಗಿದೆ. ಅದು ಬಹಳ ಕಷ್ಟಕರವಾದ ಕೆಲಸವೆಂಬುದು ಅವರಿಗೆ ತಿಳಿದಿದೆ. ಆದರೂ ಇದನ್ನು ಬಹಳ ಶೀಘ್ರದಲ್ಲಿಯೇ ಜಾರಿಗೆ ತರುವವರಾಗಿದ್ದೇವೆ. ಪೋಲೀಸ್ ಆಕ್ಟ್, ಹ್ಯಾಬಿಚ್ಯುಯಲ್ ಅಫೆಂಡರ್ಸ್ ಆಕ್ಟ್, ಇವುಗಳನ್ನು ಎಷ್ಟುಮಟ್ಟಿಗೆ ಚರ್ಚೆ ಮಾಡಬೇಕು ಎಂಬುದನ್ನು ಮೊದಲು ಗಮನಿಸಬೇಕು. ಏಕೀಕೃತವಾದ ಪೋಲೀಸ್ ಕಾನೂನುಗಳನ್ನು ಸಮಾವೇಶಗೊಳಿಸಲು ಪೋಲೀಸ್ ಆಕ್ಟ್, ಸಟ್ಟಾ ಮತ್ತು ಗ್ಯಾಂಬ್ಲಿಂಗ್ ಕ್ಲಬ್ಸ್ ಇವುಗಳಮೇಲೆ ಅನೇಕ ಟೀಕೆಗಳು ಬಂದುವು. ಇವುಗಳನ್ನೆಲ್ಲಾ ಏಕೀಕೃತಮಾಡುವಂಥ ಕೆಲಸ ಒಂದು ಉಚ್ಚಮಟ್ಟದಲ್ಲಿರಬೇಕು. ಇದು ತುಂಬ ಪರಿಣತೆಯನ್ನು ಹೊಂದಿ ಅನುಭವಸ್ಥರಾದ ಅಧಿಕಾರಿಗಳುಮಾಡುವಂತಹ ಕೆಲಸ. ಇಂಥಾದ್ದನ್ನು ನೆರವೇರಿಸುವಂಥಾದ್ದು ಬಹಳ ಕಷ್ಟದಾಯಕವಾಯಿತು. ಅದನ್ನು ನಾವು ಒಂದು ರೀತಿಯಲ್ಲಿ ಈಗ ನೆರವೇರಿಸಿದ್ದೇವೆ. ಈಗ ಅನೇಕ ಏಕರೀತಿಯಾದ ಹೊರ ಕಾನೂನುಗಳು ಜಾರಿಗೆ ಬಂದು ಪೋಲೀಸ್ ಆಡಳಿತದ ವ್ಯವಸ್ಥೆ ಇನ್ನೂ ಚೆನ್ನಾಗಿ ನಡೆಯುತ್ತದೆಂದು ನನಗೆ ಭರವಸೆ ಇದೆ. ಏತನ್ಮಧ್ಯೆ ನಮ್ಮ ಮಾನ್ಯ ಅರ್ಥಸಚಿವರು ಕಳೆದ ವರ್ಷ ಬಡ್ಜೆಟ್ಟನ್ನು ಇಲ್ಲಿ ಮಂಡಿಸಿದಾಗ ನಮ್ಮ ಬಡ್ಜೆಟ್ಟಿನ ಸ್ವರೂಪ ಒಂದು ತರಹವಾಗಿತ್ತು. ಅಷ್ಟರೊಳಗೆ ದೇಶದಲ್ಲಿದ್ದಂಥ ತೆರಿಗೆ ಕಾನೂನುಗಳನ್ನು ಏಕೀಕೃತಮಾಡಿ ಯೂನಿಫಾರಂ ಟ್ಯಾಕ್ಸೇಷನ್ ಆಫ್ ಲಾಸ್ ಎನ್ನುವಂಥಾದ್ದನ್ನು ರೂಪುಗೊಳಿಸಿ, ಈ ಸಭೆಯ ಮುಂದಿಟ್ಟು ಆದಷ್ಟು ಜಾಗ್ರತೆ ಮಂಜೂರು ಮಾಡಿ, ಅದನ್ನೆಲ್ಲಾ ಒಂದು ಸ್ತಿಮಿತಕ್ಕೆ ತಂದು ಆದನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ನಮ್ಮ ಅನೇಕ ಸಮಸ್ಯೆಗಳನ್ನು ಇಂಡಿಯಾ ಸರ್ಕಾರದ ಮುಂದೆ ಇಟ್ಟೆವು. ಅದಕ್ಕೆ ಬೇಕಾದಷ್ಟು ಹಣಸಹಾಯವನ್ನು ಪಡೆಯುವವರಾಗಿದ್ದೇವೆ. ನಮ್ಮಲ್ಲಿ ಇವತ್ತು ಒಂದು ಬ್ಯಾಲೆನ್ಸ್‌ಡ್ ಬಡ್ಜೆಟ್ ಇದೆ. ಮಾನ್ಯ ಸದಸ್ಯರು ಈ ಅಂಕಿ ಅಂಶಗಳ ಜೋಡಣೆ ನೋಡಿ ಸಂಕಲನ ವ್ಯವಕಲನ ಮಾಡಿ ನಾವು ಇದನ್ನೂ ಒಪ್ಪಬಹುದೋ ಎಂಬ ಒಂದು ಶಂಕೆಯನ್ನು ಹೊಂದಿರಬಹುದು, ಆದರೆ ಆ ಮಾತು ಎಷ್ಟು ಸತ್ಯಾಂಶವುಳ್ಳದ್ದಾಗಿದೆಯೆಂಬುದನ್ನು ಮಾನ್ಯ ಸದಸ್ಯರು ಕಳೆದ ವರ್ಷ ತಮ್ಮ ಭಾಷಣಗಳನ್ನು ಈ ಬಡ್ಜೆಟ್ ವಿಷಯದ ಮೇಲೆ ಮಾಡಿರುವುದನ್ನು ಎತ್ತಿ ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ. ಜೋತಾ ಬಡ್ಜೆಟ್ಟನ್ನು ಮಂಡಿಸಿದ್ದಾರೆಂದು ಅನೇಕರು ಟೀಕೆಮಾಡಿದ್ದಾರೆ. ಇವತ್ತು ಸಮತೂಕದ ಬಡ್ಜೆಟ್ಟನ್ನು ಇಟ್ಟರೂ ಅದರಮೇಲೆಯೂ ತುಂಬ ಟೀಕೆಗಳಿವೆ. ಒಟ್ಟಿನಲ್ಲಿ ಯಾವುದಾದರೂ ಒಂದು ಕಾನೂನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರಬೇಕಾದರೆ, ಅದರಲ್ಲಿಯೂ ಹೊಸದಾಗಿ ರಚಿತವಾದ ಮೈಸೂರು ಸಂಸ್ಥಾನದ ಅಂಕಿ ಅಂಶಗಳನ್ನು ನೋಡುವುದಾದರೆ, ಇಂತಹ ಸಮಯದಲ್ಲಿ ಈ ಕಟುತರವಾದ ಸಮಸ್ಯೆಗಳನ್ನು ಬಗೆಹರಿಸುವುದು ನ್ಯಾಯವಾಗಿಯೂ ಬಹಳ ಕಷ್ಟ. ಅದಕ್ಕಾಗಿಯೇ ತುಂಬ ಅನುಭವವನ್ನು ಹೊಂದಿ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತು ಆ ವಿಷಯದಲ್ಲಿ ಸಾಮರ್ಥ್ಯವನ್ನುಳ್ಳಂಥ ಆಫೀಸರುಗಳನ್ನು ನಾವು ನೇಮಿಸಿದ್ದು. ಅಲ್ಲದೆ ಇಂತಹ ಕಷ್ಟಕರವಾದ ಕೆಲಸಗಳನ್ನು ಪೂರ್ಣಗೊಳಿಸು

(ಶ್ರೀ ಸಿ. ಎಂ. ಪೂಣಚ್ಚ)

ವುದಕ್ಕೋಸ್ಕರ ಒಂದು ವರ್ಷದ ಅವಧಿಯನ್ನು ಸಹ ಹೆಚ್ಚಿಗೆ ಕೊಟ್ಟಿದ್ದು. ಅದು ಬಹಳ ಅನಿವಾರ್ಯವಾಗಿತ್ತು ಮತ್ತು ಬಹಳ ಅವಶ್ಯಕವಿತ್ತು. ಸರ್ಕಾರದಲ್ಲಿ ರೂಲ್ಸ್‌ಗಳನ್ನು, ಕಾಯಿದೆ, ಕಾನೂನುಗಳನ್ನು ಸಮಂತೂಕದಲ್ಲಿಡದೆ ಮುಂದಿನ ಆಡಳಿತ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಸಮರ್ಪಕವಾದ ರೀತಿಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದೇ ಆದರೆ, ಮುಂದೆ ಆಡಳಿತವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ, ಸುಲಭವಾಗುತ್ತದೆ ಮತ್ತು ಸುಗಮವಾಗುತ್ತದೆ. ಈ ದೃಷ್ಟಿಯಿಂದ ಕೆಲಸಮಾಡುವ ಹಿರಿಯ ಮತ್ತು ಅನುಭವಸ್ಥರಾದ ಅಧಿಕಾರಿಗಳನ್ನು ಇಟ್ಟುಕೊಂಡು ಅನೇಕ ಕೆಲಸಗಳನ್ನು ಪರಿಪೂರ್ಣವಾಗಿ ಮತ್ತು ಸಮರ್ಪಕವಾಗಿ ಮಾಡಿ ಕೊಳ್ಳುತ್ತಿದ್ದೇವೆ. ಅನೇಕ ಕಷ್ಟತರವಾದ ಕೆಲಸಗಳು ಈಗಾಗಲೇ ನೆರವೇರಿವೆ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಮುಂದೆ ಇವುಗಳೆಲ್ಲಾ ಕಾರ್ಯರೂಪದಲ್ಲಿ ಬರುವ ಕಾಲಕ್ಕೆ ಪೋಲೀಸ್ ಆಡಳಿತ ಇನ್ನೂ ಹೆಚ್ಚಿನ ವ್ಯವಸ್ಥೆಯಿಂದ ಕೂಡಿ ಹೆಚ್ಚಿನ ಉತ್ಸಾಹದಿಂದ ಇಲ್ಲಿ ಕೆಲಸ ನಡೆಯುತ್ತದೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಈಗಲೂ ಕೂಡ ಪೋಲೀಸಿನವರು ಕೆಲಸಮಾಡಿದಂಥ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಅಂಕಿ ಅಂಶಗಳನ್ನು ನಾವು ಆಲೋಚನೆಮಾಡುವುದಾದರೆ ಕೆಲಸ ಚೆನ್ನಾಗಿ ನಡೆದಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಕೆಲವರು ಹೇಳಿದರು ಪೋಲೀಸ್ ಇಲಾಖೆಯಲ್ಲ ಯಾವುದೇ ರೀತಿಯಲ್ಲಿ ಲಂಚಗೂಳಿತನ ಇಲ್ಲ, ಯಾವುದೇ ರೀತಿಯಲ್ಲಿ ಅವ್ಯವಸ್ಥೆಯಿಲ್ಲ, ಎಲ್ಲಾ ವ್ಯವಸ್ಥೆಯಿಂದ ಕೂಡಿದೆ ಎಂದು ಮಂಗಮುಷ್ಟಿ ಹಿಡಿದು ವಾದ ಮಾಡುತ್ತಿದ್ದಾರೆಂದು ಹೇಳಿದರು. ಇಲ್ಲಿ ಹಾಗೆ ಹೇಳಲಿಲ್ಲ, ಕಳೆದ ವರ್ಷವೂ ಕೂಡ ಇದೇ ರೀತಿ ಬಡ್ಜೆಟ್ ಭಾಷಣದಲ್ಲಿ ನಾನು ಉತ್ತರ ಕೊಡುತ್ತಾ ಈ ಮಾತನ್ನು ಹೇಳಿದ್ದೇನೆ. ಪೋಲೀಸ್ ಇಲಾಖೆಯಲ್ಲಿ ಕೆಲವೊಂದು ಮಟ್ಟಿನ ಅವ್ಯವಸ್ಥೆ ಇದೆ. ಅದನ್ನು ಸರಿಪಡಿಸುವಂಥಾದ್ದು ನಮ್ಮ ಮುಖ್ಯವಾದಂತಹ ಉದ್ದೇಶ. ಆದರೆ ಅಂ' ಅವ್ಯವಸ್ಥೆಗಳನ್ನು ನಾವು ಟೀಕೆಯ ಸುರಿಮಳೆಯಿಂದ ಸರಿಪಡಿಸುತ್ತೇವೆಂದರೆ ಒಪ್ಪಲಿಕ್ಕಿಲ್ಲ. ಟೀಕೆ ಮಾಡಿ, ಬೇಕಾದಷ್ಟು ಟೀಕೆಮಾಡಿ, ಯಾವ ರೀತಿ ವ್ಯವಸ್ಥೆ ಮಾಡಬೇಕು, ಯಾವ ರೀತಿ ಅದನ್ನು ಸುಲಲಿತವಾಗಿ ನಡೆಸಬೇಕು ಯಾವ ರೀತಿ ಕ್ರಮ ಕೈಗೊಳ್ಳಬೇಕು ಎನ್ನುವ ರೀತಿಗೆ ಒಬ್ಬರಾದರೂ ಕೂಡ ಒಂದು ರಚನಾತ್ಮಕ ಸಲಹೆಯನ್ನಾಗಲೀ ಒಂದು ವ್ಯವಹಾರಿಕ ಅಭಿಪ್ರಾಯವನ್ನಾಗಲೀ ಇಟ್ಟಿಲ್ಲ. ಪ್ರತಿಯೊಂದು ಕಡೆಯೂ ಲಂಚ ಇದೆ, ಪ್ರತಿಯೊಂದು ಕಡೆಯೂ ಶಿಥಿಲತೆ ಇದೆ, ಕೆಲಸ ನಡೆಯುತ್ತಿಲ್ಲ ಎಂದು ಬಹಳ ಮಂದಿ ಹೇಳಿದರು.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ರಚನಾತ್ಮಕ ಸಲಹೆ ಯಾರೂ ಕೊಟ್ಟಿಲ್ಲವೆಂದು ಹೇಳಿದರು. ಈ ರೀತಿ ಮಾಡಬೇಕು ಎಂದು ನಾನೇ ಹೇಳಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಒಡೆದು ಹೋದ ಮಡಕೆಯನ್ನು ಸರಿಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಸಿ. ಎಂ ಪೂಣಚ್ಚ.—ಏತಕ್ಕೆ ನಾನು ಆ ಮಾತನ್ನು ಹೇಳಿದೆ ಎಂದರೆ, ಇದನ್ನು ಇನ್ನು ಸ್ವಲ್ಪ ಉದಾಹರಣೆಯ ಮೂಲಕ ಹೇಳಬೇಕಾಗುತ್ತದೆ. ಅದು ಏನೆಂದರೆ, ಬಹಳ ಮಾನ್ಯ ಸದಸ್ಯರು ಬಂದು ಎಷ್ಟೋ ವಿಷಯದಲ್ಲಿ ನನ್ನೊಡನೆ ಚರ್ಚೆಮಾಡಿದ್ದಾರೆ. ಎಷ್ಟೋ ವಿಷಯಗಳಲ್ಲಿ ಅವರ ಅಭಿಪ್ರಾಯವನ್ನು ತಿಳಿದುಕೊಂಡಿದ್ದೇನೆ. ಈವರೆಗೆ ಇಲ್ಲಿ ಹೇಳಿದಂಥಾ ಎಷ್ಟೋ ಟೀಕೆಗಳನ್ನು ಯಾರೊಬ್ಬರೂ ಬಂದು ನನಗೆ ಹೇಳಲಿಲ್ಲ. ನಮ್ಮ ಮಿತ್ರರು ಹೇಳಿದಹಾಗೆ, ಸದಸ್ಯರು ಮಾತ್ರ ಬಂದು ಒಬ್ಬ ಸಬ್ ಇನ್ಸ್‌ಪೆಕ್ಟರ ಟ್ರಾನ್ಸ್‌ಫರ್ ನಿಲ್ಲಿಸಬೇಕು. ಇನ್ನೊಂದು ಟ್ರಾನ್ಸ್‌ಫರ್ ಮಾಡಬೇಕು ಎನ್ನುವ ವಿಚಾರದಲ್ಲಿ ಹೇಳಿದರೇ ವಿನಾ ಈ ರೀತಿ ನ್ಯೂನತೆ ಇಂಥಾದ್ದರಲ್ಲಿ ಇದೆ, ಇಂಥಾದ್ದನ್ನು ಸರಿಪಡಿಸಬೇಕು ಎನ್ನುವುದನ್ನು ನನ್ನ ಮುಂದೆ ಹೇಳಲಿಲ್ಲ. ಕೆಲವರು ಹೇಳಿದ್ದಾರೆ. ಹೇಳಿದೊಡನೆಯೇ ತಕ್ಷಣ ನಾವು ಅದಕ್ಕೆ ಬೇಕಾದಂತಹ ಕಾರ್ಯವನ್ನು ತೆಗೆದುಕೊಂಡು ಆ ವಿಷಯವನ್ನು ಪರಿಶೀಲನೆ ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ನನ್ನ ಮಾನ್ಯ ಮಿತ್ರರಾದಂಥ ಶ್ರೀ ವೆಂಕಟರೆಡ್ಡಿಯವರು ಕೆಲವು ಸಮಯದ ಹಿಂದೆ ಬಂದು ನನಗೆ ಒಂದು ವಿಷಯ ತಿಳಿಸಿದರು.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಏನೂ ಸಲಹೆ ಇಡಲಿಲ್ಲ ಎಂದು ಹೇಳಿದರು. ರಚನಾತ್ಮಕವಾದ ಸಲಹೆಗಳನ್ನು ಅನೇಕ ಜನರು ಮಾಡಿದ್ದಾರೆ; ಸ್ಥಳ ಸನ್ನಿವೇಶ ಹೇಳುವುದಿಲ್ಲ. ಹೇಳತಕ್ಕದ್ದು ಸೂಕ್ತವಲ್ಲ. ಬೇಕಾದಷ್ಟು ಸಲಹೆ ಮಾಡಿದ್ದೇವೆ. ತಾವು ಯಾವುದೂ ಜಾರಿ ಮಾಡಿಲ್ಲ. I am not prepared to disclose the place where we approached him. But I believe it is not necessary to mention the place.

ಶ್ರೀ ಸಿ. ಎಂ. ಪೂಣಚ್ಚ.—ನಾನು ಹೇಳಿದ್ದೇನೆ, ಕೆಲವರು ಹೇಳಿದ್ದಾರೆ ಎಂದು. ಆದರೆ ಬಹುಮಟ್ಟಿಗೆ ನನ್ನ ಜೊತೆಯಲ್ಲಿ ಮಾತುಕತೆಯನ್ನು ಆಡುವಾಗ ಬೇರೆ ವಿಷಯ ಪ್ರಸ್ತಾಪ ಮಾಡಿದರೇ ವಿನಾ ಯಾವ ಯಾವ ನ್ಯೂನತೆಗಳು ಅವರವರ ಸ್ಥಳದಲ್ಲಿ, ಅವರವರ ಊರಿನಲ್ಲಿ ಇವೆ ಎನ್ನುವುದನ್ನು ಮಾತ್ರ ಹೇಳಲಿಲ್ಲ.

ಶ್ರೀ ಜಿ. ದುಗ್ಗಪ್ಪ (ಚಿತ್ರದುರ್ಗ-ಅನುಸೂಚಿತ ಜಾತಿಗಳು).—ತಾವು ಪ್ರವಾಸ ಬಂದಾಗ ಏನೇನು ನಡೆಯುತ್ತದೆ ಎಂಬುದನ್ನು ವಿಶದವಾಗಿ ಮನದಟ್ಟು ಆಗುವ ರೀತಿಯಲ್ಲಿ ಹೇಳಿ ರಚನಾತ್ಮಕ ಸಲಹೆ ಕೊಟ್ಟಿದ್ದೇವೆ. ತಮಗೆ ನೆನಪು ಇರಬಹುದು.

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ ಎಂದು ಹೇಳುವುದಿಲ್ಲ. ಮಾನ್ಯ ಶ್ರೀ ವೆಂಕಟರೆಡ್ಡಿಯವರು ಅತಿ ಮುಖ್ಯವಾದ ಕೆಲವು ವಿಷಯಗಳನ್ನು ತಿಳಿಸಿದರು. ಇಂಥ ಕಡೆಯಲ್ಲಿ ಇಂಥ ಕೆಲಸಕಾರ್ಯ ನಡೆಯುತ್ತದೆ, ಭಟ್ಟಿ ಸಾರಾಯಿ ಹೇಳಲಾಗದ ಪ್ರಮಾಣದಲ್ಲಿ ನಡೆಯುತ್ತದೆ, ಇವೊತ್ತು ನನಗೆ ಸಹಾಯಕೊಟ್ಟರೆ ಇವೊತ್ತು ರಾತ್ರಿ ಪರಿಪೂರ್ಣವಾಗಿ ವಿಶದೀಕರಿಸಿ ಸ್ಪಷ್ಟಮಾಡುತ್ತೇನೆ, ಅಲ್ಲಿರುವ ಪೋಲೀಸಿನವರ ಕೈಯ್ಯಿಂದ ಅದನ್ನು ತಡೆಗಟ್ಟಲು ಆಗುವುದಿಲ್ಲ, ಸ್ಪೆಷಲ್ ಪೋಲೀಸ್ ಸಹಾಯ ಕೊಡಬೇಕು ಎಂದು ಹೇಳಿದರು.

Sri K. H. VENKATA REDDY (Gowribidanur).—On a point of order. ಹೆಸರು ಹೇಳಬಾರದು ಎಂದು ತಾವೇ ಹೇಳಿದಿರಿ. ನಾವು ಅವರ ಚಿಕ್ಕಪ್ಪನವರ ಹೆಸರು ಹೇಳಿದರೆ ಎಷ್ಟು ಕೋಪಮಾಡಿಕೊಳ್ಳುತ್ತಾರೆ! ಈಗ ವೆಂಕಟರೆಡ್ಡಿ ಎಂದು ಹೌಸ್‌ನಲ್ಲಿ ಹೇಳುತ್ತಾರೆ.

ಅಧ್ಯಕ್ಷರು.—ಶ್ರೀ ವೆಂಕಟರೆಡ್ಡಿಗಳು ಸೂಚನೆ ಮಾಡಿದರು ಎಂದು ಹೇಳಿದರು.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಒಬ್ಬ ಸದಸ್ಯರು ಎಂದು ಏತಕ್ಕೆ ಹೇಳಲಿಲ್ಲ? ವೆಂಕಟರೆಡ್ಡಿ ಎಂದು ಹೆಸರು ಹೇಳಲು ಕಾರಣವೇನು ?

ಶ್ರೀ ಸಿ. ಎಂ. ಪೂಣಚ್ಚ.—ಯಾವ ರೀತಿ ಕೆಲಸ ನಡೆಯುತ್ತದೆ, ಪೋಲೀಸಿನವರ ಮೇಲಿರುವ ಆರೋಪಣೆಗೆ ಯಾವ ರೀತಿಯ ಕೆಲವು ಬೇರೆ ಕಾರಣಗಳ ಕೂಡ ಇವೆ ಎನ್ನುವ ವಿಷಯವನ್ನು ಸ್ಪಷ್ಟ ಮಾಡಲಿಕ್ಕೆ ನಾನು ಮಾನ್ಯ ಸದಸ್ಯರ ಎದುರಿಗೇ ಈಗ ಹೇಳುತ್ತಿದ್ದೇನೆ. ಬಟ್ಟಿ ಸಾರಾಯಿ ವಿಷಯ ಬಂತು. ನಾವು ಕಾರ್ಯಾಚರಣೆ ಮಾಡುವುದೇ ಇಲ್ಲ ಎಂದು ಸುಮ್ಮನೆ ಪುಕಾರು ಬಂತು. ಮಾನ್ಯ ಸದಸ್ಯರು ಗೌರವ ಸದಸ್ಯರು ಹೇಳಿದರೂ ಕೂಡ ಗಮನಕ್ಕೆ ತೆಗೆದುಕೊಳ್ಳದೆ ಕಾರ್ಯಚ್ಯುತಿ ಆಗುತ್ತಿದೆ ಎಂದು ಸಭೆಯ ಅಭಿಪ್ರಾಯ ಇದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಅವರು ಬಂದು ಇಂಥಾದ್ದು ನೋಡಿ ಎಂದು ಹೇಳಿದ ತಕ್ಷಣ ಅವರ ಸಲಹೆ ತೆಗೆದುಕೊಂಡು ಇಷ್ಟೇ ಸಮಯಕ್ಕೆ ಹೋಗಬೇಕು ಎನ್ನುವ ವಿವರಗಳನ್ನು ಪಡೆದುಕೊಂಡು ಇಲ್ಲಿಂದ ಜನರನ್ನು ಕಳುಹಿಸಿದೆವು. ಇಂಥ ಕಡೆ 11 ಘಂಟೆಗೆ ಸೂಚನೆ ಮಾಡುವಾಗ ಹೋಗಿ ಕಾರ್ಯಕ್ರಮ ಮಾಡತಕ್ಕದ್ದು ಎಂದು ಇಲ್ಲಿಂದಲೇ ಕಳುಹಿಸಿದೆವು. ಆಧಾರಯುತವಾಗಿ ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಪ್ರೈರ್‌ಲೆಸ್ ತಮ್ಮ ಇಲಾಖೆಯಲ್ಲಿ ಇದೆಯಲ್ಲವೇ ?

Sri C. M. POONACHA.—In that way anything is possible and everything could be doubted. ಅದರಿಂದ ಏನೂ ಪ್ರಯೋಜನವಾಗಿಲ್ಲ. ಅವರು ಹೇಳಿದ ದಿವಸ ಟೈಮಿಗೆ ಸರಿಯಾಗಿ ಇಲ್ಲಿಂದಲೇ ಸ್ಪೆಷಲ್ ಸ್ಕ್ವಾಡ್ ಹೋಗಿತ್ತು. ಏತಕ್ಕೋಸ್ಕರ ಹಾಗೆ ಆಯಿತು? ತಿಳಿಯುವುದಕ್ಕೆ ಪ್ರಯತ್ನ ಮಾಡಿದೆ. ಬಹಳ ಸೋಜಿಗದ ಮಾತು. ಯಾರ ವಿಷಯದಲ್ಲಿ ಆಪಾದನೆಯನ್ನು ಮಾನ್ಯ ಸದಸ್ಯರು ನನ್ನ ಸಮಕ್ಷಮ ಹೇಳಿದರೋ ಅವರೆಲ್ಲಾ ಟೆನೆಂಟ್ಸ್ ಬಡತನದ ಸ್ಥಿತಿಯಲ್ಲಿರುವವರು. ಅವರನ್ನು ಯಾವ ರೀತಿಯಿಂದಲಾದರೂ ಮನೆಯಿಂದ ಹೊರದೂಡಬೇಕೆಂದು ಆಲೋಸಿಚಿ ನಮಗೆ ಪುಕಾರುಕೊಟ್ಟು ನಮ್ಮಿಂದ ಅವರ ಮನೆಯನ್ನು ಜಫ್ತಿ ಮಾಡುವ ಸಲುವಾಗಿ ಹಾಗೆ ಮಾಡಿದರು.

Sri C. J. MUCKANNAPPA (Gubbi).—I rise to a point of order. It is an insinuation against a particular member of this House. If there is any complaint the tenants can go before the Amildar. The police need not go to the rescue of the tenants.

(Several members rose)

Mr. SPEAKER.—Order, order. If any Hon'ble Member wants to raise a point of order, he is free to do so. If Hon'ble Members at the same time raise several points of order, I warn them that is not the way that the Hon'ble Members should behave. I can understand one Hon'ble Member rising up and putting forth his point of view or point of order. But several members standing up and making noise is not in accordance with the dignity of the House.

I request once again that Hon'ble Members should not put such a behaviour which will not be in consonance with the dignity and decorum of the House. So far as the point of order raised by Sri Mukkannappa is concerned, I cannot agree with him because the Hon'ble Minister is not making any insinuation ; he is drawing only an inference.

Sri G. VENKATAI GOWDA (Palaiyam).—May I know whether inferences which affect a member could be drawn?

Mr. SPEAKER.—If the Hon'ble Member can speak against the Hon'ble Minister, the Minister may also make remarks against the member.

ಶ್ರೀ ಸಿ. ಎಂ. ಪೂಣಚ್ಚ.—ಈ ಪ್ರಕಾರವಾಗಿ ಏಕೆ ಇದನ್ನು ಹೇಳುತ್ತಾ ಇದ್ದೇನೆ ಎಂದರೆ ಸಾಧಾರಣವಾದಂಥ ಆಪಾದನೆಗಳನ್ನು ಇಲ್ಲಿ ಮಾಡುತ್ತಾರೆಯಲ್ಲಾ ಇದರಲ್ಲಿ ಹೆಚ್ಚಿನ ಮಟ್ಟಿಗೆ ಸತ್ಯಾಂಶವಿದೆಯೋ ಎಂಬುದನ್ನು ಪರಿಶೀಲನೆಮಾಡಿ ನೋಡುವಾಗ, ನಾನೇ ಖುದ್ದಾಗಿ, ಸ್ವಂತವಾಗಿ ನೋಡಿ, ತಿಳಿದಿದ್ದರಲ್ಲಿ ಇದರಲ್ಲಿ ಹೆಚ್ಚಿನಮಟ್ಟಿಗೆ ಉತ್ಪ್ರೇಕ್ಷೆ ಇರುತ್ತದೆ ಎಂಬುದನ್ನು ಸಭೆಗೆ ತೋರಿಸುತ್ತಾ ಇದ್ದೇನೆ. ಸಾಧಾರಣ ಅರ್ಜಿಗಳು ಬರುತ್ತವೆ, ಅವನ್ನು ಪರಿಶೀಲನೆ ಮಾಡುತ್ತೇವೆ. ಜವಾಬ್ದಾರಿಯುತ ಮಾನ್ಯ ಸದಸ್ಯರು ಹೇಳುವಂಥ ವಿಷಯದಲ್ಲಿ ನಾವು ತಕ್ಷಣ ಕಾರ್ಯಕ್ರಮವನ್ನು ಕೈಕೊಂಡು ಮುಂದೆ ಆ ಕಾರ್ಯಕ್ರಮವನ್ನು ಮುಂದುವರಿಸುವಂಥ ಕಾಲದಲ್ಲಿ ಈ ಪ್ರಕಾರವಾದರೆ ಹೇಗೆ ಈ ಪೋಲೀಸ್ ಇಲಾಖೆ ನಡೆಸಬೇಕು ಎನ್ನುವಂಥಾದ್ದನ್ನು ಸಭೆಗೆ ತೋರಿಸುತ್ತಾ ಇದ್ದೇನೆ. ಏಕೆಂದರೆ ಈ ವಿಷಯದಲ್ಲಿ ಹೇಳಿರುವಂಥ ಮಂಚೇನಹಳ್ಳಿ ಸಬ್ ಇನ್ಸ್‌ಪೆಕ್ಟರ್ ವಿಚಾರವಾಗಿ . . .

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಸದಸ್ಯರು ಈ ಸಮಾಚಾರ ಕೊಡುವಾಗ ಏಪ್ರಿಲ್ 1ನೆಯ ತಾರೀಖಿನ ದಿವಸ ಕೊಟ್ಟರೇ ! ಯಾವಾಗ ಕೊಟ್ಟರು ?

(ಸಭೆಯಲ್ಲಿ ನಗು !)

ಶ್ರೀ ಸಿ. ಎಂ. ಪೂಣಚ್ಚ.—ಅದನ್ನು ಅವರನ್ನೇ ಕೇಳಿ ! ಏಕೆ ಇದನ್ನು ಹೇಳುತ್ತಾ ಇದ್ದೇನೆ ಎಂದರೆ ಮಂಚೇನಹಳ್ಳಿ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ ಎಂದು ಕೆಲವು ಸದಸ್ಯರು ಆ ವಿಷಯ ಎತ್ತಿದರು. ಇದೆಲ್ಲಾ ಅದಕ್ಕೆ ಹೊಂದಿಕೊಂಡಿದೆ. ಏಕೆಂದರೆ ಮಂಚೇನಹಳ್ಳಿ ವೆಂಕಟರೆಡ್ಡಿಯವರ ಹಳ್ಳಿ. ಅಲ್ಲಿರುವಂತಹ ಪೋಲೀಸ್ ಇನ್ಸ್‌ಪೆಕ್ಟರ್ ಒಬ್ಬರನ್ನು ಟ್ರಾನ್ಸ್‌ಫರ್ ಮಾಡಲಿಲ್ಲ ಎಂದು ಅವರ ಮೇಲೂ ಕೂಡ ಬೇಕಾದಷ್ಟು ಇಲ್ಲಿ ಪುಕಾರು ಮತ್ತು ಟೀಕೆ ಬಂತು. ಅದಕ್ಕೇ ಹೇಳುತ್ತಾ ಇದ್ದೇನೆ. ಪೋಲೀಸ್ ಆಫೀಸರುಗಳಿಗೆ ಅದರಲ್ಲೂ ಕೆಳಮಟ್ಟದ ಆಫೀಸರುಗಳಿಗೆ ಕೆಲಸ ಮಾಡುವುದಕ್ಕೆ ಎಷ್ಟೋ ಕಷ್ಟ ಇದೆ. ಮಂಚೇನಹಳ್ಳಿ ಪೋಲೀಸ್ ಇನ್ಸ್‌ಪೆಕ್ಟರ ಮೇಲೆ ಇಷ್ಟು ದೊಡ್ಡ ಪ್ರತಿಭಟನೆ ಬರಬೇಕಾದರೆ ಮತ್ತು ಬಹಳವಾಗಿ ವಿಷಯ ಪ್ರತಿಪಾದಿಸಬೇಕಾದರೆ ಅದು ಏನಿತ್ತು ಎಂಬುದನ್ನು ಆಲೋಚನೆ ಮಾಡಿದೆ. ಸ್ಪಷ್ಟವಾಗಿ ಸಭೆಯ ಮುಂದೆ ವಿಷಯ ಇಡಬೇಕೆಂದು ಹೇಳಿ

(ಶ್ರೀ ಸಿ. ಎಂ. ಪೂಣಚ್ಚ)

ಬಂದಿದ್ದೇನೆ. ಏಕೆಂದರೆ ಬಹುಮಟ್ಟಿಗೆ ಉತ್ಪ್ರೇಕ್ಷೆಯ ಮಾತು ನಡೆಯುತ್ತಾ ಇದೆ, ಬಹುಮಟ್ಟಿಗೆ ನಿರಾಧಾರ ವಾದ ಟೀಕೆ ನಡೆಯುತ್ತಾ ಇದೆ. ಇದು ಸಲ್ಲದು. ಈ ಪ್ರಕಾರ ಮಾಡುತ್ತಾ ಹೋದರೆ, ತಾವೇ ಹೇಳು ತ್ತೀರಿ, ಈ ಸರ್ಕಾರದ ಆಡಳಿತ ಬಿಡಿ, ನಾವು ಆಳು ತ್ತೇವೆ ಎಂದು. ತಮಗೂ ಕೂಡ ಆಳುವುದಕ್ಕೆ ಸರ್ಕಾರ ಇರುವುದಿಲ್ಲ ಎಂಬುದನ್ನು ನಾನು ತೋರಿಸುತ್ತಾ ಇದ್ದೇನೆ. ಏಕೆಂದರೆ ಒಬ್ಬರು ಟ್ರ್ಯಾಕ್ಟರ್ ಡ್ರೈವ್ ಮಾಡುತ್ತಾ ಇದ್ದರು, ಅವರಿಗೆ ಲೈಸೆನ್ಸ್ ಇರಲಿಲ್ಲ, ಯಾವಾಗ ಆ ವಿಷಯ ಮಂಚೇನಹಳ್ಳಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರಿಗೆ ತಿಳಿದುಬಂತೋ ಆಗ ಅವರು ಕ್ರಮ ಜರುಗಿಸಿದರು. ಇಷ್ಟೇ ಸ್ವಾಮಿ ತಪ್ಪು. ಏಕೆ ! ಅವರು ಒಬ್ಬ ಮಾನ್ಯ ಪ್ರಮುಖ ವ್ಯಕ್ತಿಯ ಸಹೋದರರು, ಆ ಊರಲ್ಲಿ ಕಾನೂನು ಜಾರಿಮಾಡ ಬಾರದು. ಮಾಡಿಬಿಟ್ಟರೆ ಆ ಆಫೀಸರ ಗತಿ ಮುಗಿದು ಹೋಯಿತು. ಈ ಪ್ರಕಾರ ಅಸಹಾಯಕ ಪರಿಸ್ಥಿತಿ ಯಲ್ಲಿ ನಮ್ಮ ಆಫೀಸರುಗಳನ್ನು ಹಾಕಿ ಬಿಟ್ಟರೆ, ಅದ ರಲ್ಲೂ ಈ ನಮ್ಮ ಪೋಲೀಸ್ ಇಲಾಖೆಯ ಮೇಲೆ ಈ ಪ್ರಕಾರ ಅಸಹಾಯಕ ಪರಿಸ್ಥಿತಿಯನ್ನು ತಂದುಬಿಟ್ಟರೆ ದೇಶದಲ್ಲಿ ರಕ್ಷಣೆಯ ಮಾತೇ ಇರುವುದಿಲ್ಲ. ಎನ್ನು ವಂಥ ವಿಷಯವನ್ನು ಚೆನ್ನಾಗಿ ಸಭೆ ತಿಳಿದುಕೊಳ್ಳ ಬೇಕು ಎಂಬುದಕ್ಕೆ ಒಂದಲ್ಲ, ಎರಡಲ್ಲ ಬಹಳವಾಗಿ ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ. ನ್ಯೂನಾತಿ ರೇಕಗಳು ಇವೆ, ಇಲ್ಲವೆಂದು ಹೇಳು ಸಂಥಾದ್ದಲ್ಲ. ಇದು ರಾತ್ರಿ, ಬೆಳಗಾಗುವುದರಲ್ಲಿ ಬಂದದ್ದಲ್ಲ. ಪರಂಪರೆಯಿಂದ ಬಂದಿದೆ. ಬಡ್ಜೆಟ್ ಅಧಿವೇಶನ ಇದು. ಬಡ್ಜೆಟ್ ಇಟ್ಟಿದ್ದೇವೆ. ಇವತ್ತು ಪೋಲೀಸ್ ಇಲಾಖೆ ಶಿಥಿಲವಾಯಿತು ಎನ್ನುವಂಥಾ ಮಾತು, ಎಷ್ಟೋ ವರ್ಷಗಳಿಂದ ನಡೆದುಬರುತ್ತಾ ಇದೆ, ಅದನ್ನು ತಿದ್ದು ವಂಥಾ, ಸರಿಪಡಿಸುವಂಥಾ, ವ್ಯವಸ್ಥೆ ಮಾಡುವಂಥಾ ಕೆಲಸ ಬಹಳ ದೊಡ್ಡ ಕೆಲಸ. ಆದರೆ ಈ ಪ್ರಕಾರ ಮಾಡು ವಂಥಾದ್ದರಲ್ಲಿ ಸಾರ್ವಜನಿಕರ ಮತ್ತು ಈ ಸಭೆಯ ಸದಸ್ಯರ, ಸರ್ಕಾರದ ಎಲ್ಲರ ಜವಾಬ್ದಾರಿಯೂ ಕೂಡ ಇದೆ ಎಂಬುದನ್ನು ನಾವು ಮೊದಲನೆಯದಾಗಿ ತಿಳಿದು ಕೊಳ್ಳಬೇಕು. ಎಷ್ಟೋ ಜನ ಪೋಲೀಸಿನವರು ಇದ್ದಾರೆ, ಅಷ್ಟು ಜನ ಇರುವುದು ಸರಿಯಲ್ಲ ಎಂದು ಕೆಲವರು ಹೇಳಿದ್ದಾರೆ. ಈ ನಮ್ಮ ರಾಜ್ಯದಲ್ಲಿ ಒಟ್ಟು ಕಾನ್ಸ್‌ಟೇಬಲ್ಲೂ ಸೇರಿ ಇಪ್ಪತ್ತುಮೂರು ಸಾವಿರ ಜನ ಪೋಲೀಸ್ ಇಲಾಖೆಯಲ್ಲಿ ಇದ್ದಾರೆ. ಎಂದರೆ ದಾಮಾಷಾ ಲೆಕ್ಕ ಹಾಕಿದರೆ ಒಂಭೈನೂರು ಜನಸಂಖ್ಯೆಗೆ ಒಬ್ಬ ಪೋಲೀಸಿನವನು ಇದ್ದಹಾಗೆ, ಲೆಕ್ಕ ಇದೆ. ಅದರ ಅರ್ಥ ಏನೆಂದರೆ ದೇಶದಲ್ಲಿ ಕಾನೂ ನನ್ನು ಉಲ್ಲಂಘಿಸುವಂಥ ಜನ ಬಹಳ ಕಡಮೆ. ದೇಶ ದಲ್ಲಿ ಕಾನೂನನ್ನು ಮಾನ್ಯತೆ ಮಾಡುವಂಥ ಜನ ಬಹಳ ಜನ ಇದ್ದಾರೆ. ನೂರಕ್ಕೆ ಒಬ್ಬರು ಇಬ್ಬರು ಕಾನೂ ನನ್ನು ಉಲ್ಲಂಘಿಸುವವರು ಇರಬಹುದು. ಹೆಚ್ಚಿನ ಜನ ಕಾನೂನನ್ನು ಅನುಸರಿಸಿ ನಡೆಯುವಂಥ ಜನ. ಅದಕ್ಕೇ ಈ ಜನದ ಬೆಂಬಲವಿರುವಂಥ ಕಾಲದಲ್ಲಿ ಒಂಭೈನೂರು ಜನಸಂಖ್ಯೆಗೆ ಒಬ್ಬ ಪೋಲೀಸಿನವನು ಇದ್ದರೂ ಕೂಡ ನ್ಯಾಯವಾದ ರೀತಿಯಲ್ಲಿ ರಕ್ಷಣೆ ಯನ್ನು ಒದಗಿಸಬಲ್ಲ ಎಂಬ ಒಂದು ಅಭಿಪ್ರಾಯ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕೆಲವು ಮಾನ್ಯ ಸದಸ್ಯರೇನು ಈ ಇಲಾಖೆಯಲ್ಲಿ ಒಂದು ದೊಡ್ಡ ರಿಟ್ರೆಂಚ್‌ಮೆಂಟ್ ಮಾಡಬೇಕೆಂದು ಹೇಳಿದ್ದರೋ ಆ ಬಗ್ಗೆ ನಾನೀಗ ಈ ವಿಚಾರಗಳನ್ನೆಲ್ಲ ತಿಳಿಸುತ್ತಿದ್ದೇನೆ. ನಮ್ಮಲ್ಲಿರತಕ್ಕ ಈ ಇಲಾಖೆಯ ನೌಕರರ ಸಂಖ್ಯೆ ಬಹಳ ಕಡಮೆ. ಈ ಇಲಾಖೆಯು ನಡೆಸುತ್ತಿರುವ ಕಾರ್ಯ ಕ್ರಮಗಳಿಂದ ಜನರಿಗೆ ಒಂದು ಸಹಾಯ ದೊರೆಯ ತಕ್ಕ ಅಗತ್ಯ ಬಹಳವಾಗಿದೆ. ಆದರೆ ಇದರಲ್ಲಿ ಒಂದು ಮಾತನ್ನು ಹೇಳುವುದಾದರೆ ಈ ಪೋಲೀಸ್ ಇಲಾಖೆ ಯೊಂದರಿಂದಲೇ ದೇಶದ ಕ್ಷೇಮ ಲಾಭಗಳನ್ನೆಲ್ಲಾ ನೋಡಿಕೊಳ್ಳಲು ಸಾಧ್ಯವಿಲ್ಲ. ಪ್ರಪಂಚದಲ್ಲಿ ಯಾವ ದೇಶದಲ್ಲೂ ಈ ಪೋಲೀಸ್ ಇಲಾಖೆಯೊಂದರಿಂದಲೇ ದೇಶದ ನೆಮ್ಮದಿಯನ್ನು ಸಾಧಿಸಲಿಕ್ಕೆ ಶಕ್ಯವಾಗಿಲ್ಲ. ಆದುದರಿಂದ ಈ ಭಾಗದಲ್ಲಿ ಸಾರ್ವಜನಿಕರ ನೆರವು- ಬಹಳ ಅತ್ಯಗತ್ಯ. ದೇಶದ ಮಹಾಜನರ ವಿಶ್ವಾಸ ಮತ್ತು ನೆರವು ಇಲ್ಲದೇ ಹೋದರೆ ಸಾರ್ವಜನಿಕರ ಬೆಂಬಲ ಈ ಇಲಾಖೆಗೆ ಇಲ್ಲದೆ ಹೋದರೆ ಇದು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಈ ದಿವಸ ಜನತೆ ಅಂಥ ಒಂದು ಮನೋವೃತ್ತಿಯನ್ನು ಹೊಂದಬೇಕೆಂದು ನಾನು ಹೇಳುತ್ತಿದ್ದೇನೆ. ಆದರೆ ಕೆಲವು ಮಾನ್ಯ ಸದಸ್ಯರು ವಿನಾಕಾರಣ ಈ ಒಂದು ವರ್ಷದಲ್ಲಿ ದೇಶ ದಲ್ಲಿ ಏನೋ ಆಗಿಬಿಟ್ಟಿದೆ, ಆಡಳಿತ ಶಿಥಿಲವಾಗಿ ಹೋಗಿದೆ, ಸರ್ಕಾರದಲ್ಲಿ ಬಿಗಿ-ಬಿಕ್ಕಟ್ಟುಗಳಿಲ್ಲ ಎಂಬು ದಾಗಿ ಅನಾವಶ್ಯಕ ಟೀಕೆಗಳನ್ನು ಮಾಡಿದ್ದಾರೆ. ನಾನು ಪ್ರತಿಯೊಂದು ವಿಚಾರದಲ್ಲೂ ಸಾಕಷ್ಟು ಅಂಕಿ ಅಂಶಗಳನ್ನು ಕೊಟ್ಟು ಸಮಾಧಾನ ಹೇಳ ಬಲ್ಲೆ. ಅದೆಲ್ಲ ಬಹಳ ಸ್ಪಷ್ಟಕರವಾದ ಕೆಲಸವಲ್ಲ. ಮಾನ್ಯಸದಸ್ಯರು ಒಪ್ಪಿಕೊಳ್ಳುವಂಥ ಅಂಕಿ ಅಂಶಗಳನ್ನೇ ನಾನು ಕೊಡಬಲ್ಲೆ. ಆದರೆ ಮಾನ್ಯ ಸದಸ್ಯರು ಅಂಥ ಒಂದು ಅನುಮಾನ ಪ್ರಕೃತಿ ಗಳಿಂದ ಮಾತ್ರ ಅಂಕಿ ಅಂಶಗಳನ್ನು ಕೇಳಬಾರದೆಂದು ಹೇಳುತ್ತೇನೆ. ನನಗೆ ಯಾವ ಅಂಕಿ ಅಂಶಗಳನ್ನು ಒದಗಿಸುವುದಕ್ಕೂ ಕಷ್ಟವಿಲ್ಲ. ನಾವು ವಿನಾ ಕಾರಣ ದೇಶದಲ್ಲಿರತಕ್ಕ ಜನರನ್ನು ಮರುಳುಗೊಳಿಸು ವುದಕ್ಕಾಗಿ ಸಭೆಯ ಮುಂದೆ ಅಂಕಿ ಸಂಖ್ಯೆಗಳಿಂದ ಕೂಡಿದ ಅಂಶಗಳನ್ನಿಡುತ್ತಿಲ್ಲ. ಆದರೆ ಈ ಪೋಲೀಸ್ ಇಲಾಖೆಯು 1957-58ರಲ್ಲಿ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನ ನಡೆಸಿದೆ; ಮತ್ತು ಈಗ್ಲೂ ನಡೆಸಿ ಕೊಂಡು ಬರುತ್ತಿದೆಯೆಂಬ ವಿಚಾರದಲ್ಲಿ ಒಂದೆರಡು ಅಂಕಿ ಅಂಶಗಳನ್ನು ತಿಳಿಸುತ್ತೇನೆ. ನಾನೀಗ ಈ ಅಂಶಗಳನ್ನು ಹೇಳುವುದು ಪೋಲೀಸ್ ಇಲಾಖೆ ಯಲ್ಲಿ ನ್ಯೂನತೆಯೇನೂ ಇಲ್ಲವೇ ಇಲ್ಲ, ಸಡಿಲತೆ ಏನೂ ಇಲ್ಲವೇ ಇಲ್ಲ ಎನ್ನುವುದರ ಬಗ್ಗೆ ಹೇಳುತ್ತಿಲ್ಲ. ಅಲ್ಪ ಸ್ವಲ್ಪ ಇರಬಹುದು. ಆದರೆ ಅದೆಲ್ಲ ಬಹಳಕಾಲ ದಿಂದಲೂ ಬಂದಿರತಕ್ಕ ಒಂದು ಪದ್ಧತಿ. ನಮ್ಮ ಈ ಪೋಲೀಸ್ ಇಲಾಖೆಯಲ್ಲಿ ಕೆಲಸಕಾರ್ಯಗಳು ಎಷ್ಟರ ಮಟ್ಟಿಗೆ ಇತ್ತೀಚೆಗೆ ನಡೆಸಲ್ಪಡುತ್ತಿವೆಎಂಬ ಬಗ್ಗೆ, ನಾನೀಗ ಸೂಕ್ಷ್ಮವಾಗಿ ಎರಡೇ ಎರಡು ಅಂಶಗಳನ್ನು. ತಮ್ಮ ಮುಂದಿಡಲಿಚ್ಛಿಸುತ್ತೇನೆ. 1956ನೆಯ ಸಾಲಿಗೆ ಪೋಲೀಸಿನವರು ಪತ್ತೆಹಚ್ಚಿರುವ ಕೇಸುಗಳ ಸಂಖ್ಯೆ 26,657. ಈ ಅಂಶವನ್ನ ತಿಳಿಯದೆ ಕೆಲವು ಮಾನ್ಯ ಸದಸ್ಯರು ವಿನಾಕಾರಣ ಟೀಕೆ ಮಾಡಿದರೇನು ಫಲ ? 1957ನೇ ಸಾಲಿಗೆ ಪತ್ತೆಹಚ್ಚಿರುವ ಕೇಸುಗಳ ಸಂಖ್ಯೆ 54,829.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ಈ ಕೇಸುಗಳಲ್ಲಿ ಸಣ್ಣ ಸಣ್ಣ ಕೇಸುಗಳೂ ಸೇರಿವೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಎಲ್ಲಾ ಬಗೆಯ ಕೇಸು ಗಳೂ ಸೇರಿರುತ್ತವೆ. 1955-56ರಲ್ಲಿ ಪತ್ತೆ ಹಚ್ಚಿದ ಕೇಸುಗಳ ಸಂಖ್ಯೆ 26,657. ಇದ್ದಂಥಾದ್ದನ್ನು 1956-57ಕ್ಕೆ 54,829ಕ್ಕೆ ಏರಿಸಿದ್ದೇವೆ. ಹೀಗೆ ಒಂದು ವರ್ಷ ಕಾಲದಲ್ಲೇ ಇಷ್ಟೊಂದು ಹೆಚ್ಚು ಸಂಖ್ಯೆಯ

ಕೇಸುಗಳನ್ನು ಪತ್ತೆ ಹಚ್ಚಬೇಕಾಗಿದ್ದರೆ ಈ ಇಲಾಖೆಯಲ್ಲಿ ಈಗ ಯಾರೋ ಅಂಥ ಒಳ್ಳೆ ಕೆಲಸ ಮಾಡತಕ್ಕ ಜನರಿರಬೇಕೆಂದು ಅರ್ಥವಾಗುವುದಿಲ್ಲವೇ ?

ಶ್ರೀ ಜಿ. ಎಚ್. ಪುಟ್ಟಣ್ಣ.—ಈಗ ತಾವು ತಿಳಿಸಿರತಕ್ಕ ಕೇಸುಗಳಲ್ಲಿ ಖೂನಿ ಕೇಸುಗಳ ಸಂಖ್ಯೆಎಷ್ಟು ?

Sri C. M. POONACHA.—I will furnish figures for that also.

ಶ್ರೀ ಎಲ್. ಎಸ್. ವೆಂಕಾಜಿರಾವ್(ಬಸವನಗುಡಿ).—ತಾವು ಈಗ ಪತ್ತೆಹಚ್ಚಿದ ಕೇಸುಗಳ ಸಂಖ್ಯೆ ಮಾತ್ರ ಹೇಳಿದಿರಿ. ರಿಪೋರ್ಟಾದ ಕೇಸುಗಳೆಷ್ಟೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಮಾನ್ಯ ಸದಸ್ಯರು ಸಮಾಧಾನದಿಂದ ಕೇಳಿದರೆ ನಾನು ಪ್ರತಿಯೊಂದು ವಿಚಾರವನ್ನೂ ತಿಳಿಸುವೆನು. ಹೀಗೆಲ್ಲ ಗೊಂದಲ ವೆಬ್ಬಿಸುವುದಾಗಿದ್ದರೆ ಅವರಿಗೆ ಈ ಅಂಕಿ ಅಂಶಗಳ ಆಧಾರ ಸಹಿತವಾದ ವಿಚಾರ ತಿಳಿಯಲು ಇಷ್ಟವಿಲ್ಲದಿದ್ದರೆ ನಾನೇನೂ ಬಲವಂತದಿಂದ ಹೇಳಬೇಕೆಂಬ ಇಚ್ಛೆ ನನಗಿಲ್ಲ. ಆದರೆ ಈ ಅಂಶಗಳನ್ನು ಸಭೆಯ ಮುಂದಿಡತಕ್ಕದ್ದು ನನ್ನ ಕರ್ತವ್ಯ. ಆದುದರಿಂದ ಇಡಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).—ಪೋಲೀಸಿಗೆ ದಾಖಲಾದ ಕೇಸುಗಳ ಸಂಖ್ಯೆ ಇಷ್ಟು ಆ ಪೈಕಿ ಪೋಲೀಸಿನವರು ಪತ್ತೆಹಚ್ಚಿದ ಕೇಸುಗಳ ಸಂಖ್ಯೆ ಇಷ್ಟು ಎಂದು ತಿಳಿಸಿದರೆ ಅದಕ್ಕೆ ಅದಕ್ಕೆ ಮಾನ್ಯ ಸದಸ್ಯರು ಒಂದು ಹೋಲಿಕೆಹಾಕಿ ನೋಡಿಕೊಳ್ಳಲು ಅನುಕೂಲವಾಗುತ್ತದೆ. ಆ ರೀತಿ ತಾವು ಸಮಾಧಾನ ಕೊಟ್ಟರೆ ಆಗ ಎದುರು ಪಾರ್ಟಿಯವರು ತಾವು ಹೇಳುತ್ತಿರುವ ವಿಚಾರಗಳೆಲ್ಲ ಸರಿಯಾದವುಗಳೆಂದು ಒಪ್ಪಿಕೊಳ್ಳುತ್ತಾರೆ. ಹಾಗಿಲ್ಲದೆ ಹೋದರೆ ಪೋಲೀಸಿಗೆ ದಾಖಲಾಗಿರತಕ್ಕ ಕೇಸುಗಳ ಸಂಖ್ಯೆ ಕಳೆದ ವರ್ಷದ ಹಿಂದಿನ ವರ್ಷದ ಸಂಖ್ಯೆಗಿಂತ ಡಬ್ಬಲ್ಆಗಿದ್ದರೇನು ಮಾಡಬೇಕು ?

Sri C. M. POONACHA.—I have got all the figures. I shall certainly furnish those figures. I was just on the point of saying the number of cases detected. ಅದನ್ನೆಲ್ಲಾ ನಾನು ತಮಗೆ ವಿವರವಾಗಿ ಒಪ್ಪಿಸುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಈ ದಿವಸ ಕೆಲಸ ಕಾರ್ಯಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಎಂಬ ಬಗ್ಗೆ ಒಂದು ಸೂಕ್ಷ್ಮ ನಿದರ್ಶನ ಕೊಡೋಣವೆಂದು ತಿಳಿಸಲು ಯತ್ನಿಸಿದ್ದೆನು. ಇದೇರೀತಿಯಲ್ಲಿ ಅನೇಕ ಮಾನ್ಯ ಸದಸ್ಯರು ಟೀಕೆ ಮಾಡುತ್ತಿದ್ದಂಥ ಆ ಗ್ಯಾಂಬ್ಲಿಂಗ್ ಮತ್ತು ಸಟ್ಟ ಕೇಸುಗಳ ವಿಚಾರದಲ್ಲಿ ಈ ಒಂದು ಅವಧಿಯಲ್ಲಿ ಎಷ್ಟರಮಟ್ಟಿಗೆ ಈ ಪೋಲೀಸ್ ಇಲಾಖೆಯು ಕಾರ್ಯ ನಡೆಸಿದೆ ಎಂಬುದನ್ನು ತಿಳಿಸುವುದಾದರೆ ಕಳೆದ ವರ್ಷ ಒಂದರಲ್ಲೇ 4,684ಕೇಸುಗಳನ್ನು ಹಿಡಿದಿದ್ದಾರೆ. ಈ ವಿಧವಾದ ಕೇಸುಗಳಲ್ಲೂ ಪೋಲೀಸಿನವರು ಬಹಳ ಪರಿಶ್ರಮದಿಂದ ಕೆಲಸ ಮಾಡಿದ್ದಾರೆ. ಈ ವಿಚಾರ ಈ ದಿವಸ ಬೆಂಗಳೂರು ನಗರದ ಸಾರ್ವಜನಿಕರಿಗೇ ಗೊತ್ತಿದೆ. ಈ ಹಿಂದೆ ಬೆಂಗಳೂರು ನಗರದಲ್ಲಿ ಈ ಸಟ್ಟಾ ಗ್ಯಾಂಬ್ಲಿಂಗ್ ನಡೆಯುತ್ತಿತ್ತು ಈಗ ಯಾವ ಪರಿಸ್ಥಿತಿಯಲ್ಲಿದೆ ಇದು ಎಂಬುದನ್ನು ಬೆಂಗಳೂರಿನಲ್ಲಿರತಕ್ಕ ಮಹಾಜನರು ಹೇಳಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಈ ದಿವಸ ಇದು ಓಪನ್ ಆಗಿಯೇ ನಡೆಯುತ್ತಿದೆ. ಹಿಡಿಯುವುದು ಕಷ್ಟ. ಚಿತ್ರದುರ್ಗ ಟೌನ್ ಒಂದರಲ್ಲೇ 50 ಕ್ಲಬ್‌ಗಳಿವೆ. ಆ ಕ್ಲಬ್‌ಗಳಲ್ಲೆಲ್ಲಾ ಈ ಗ್ಯಾಂಬ್ಲಿಂಗ್ ನಡೆಯುತ್ತಿದೆ. ಅಲ್ಲೆಲ್ಲ ಓಪನ್‌ಆಗಿಯೇ ನಡೆಯುತ್ತಿದೆ. ಯಾರೂ ಕೇಳತಕ್ಕವರೇ ಇಲ್ಲ !

ಶ್ರೀ ಸಿ. ಎಂ. ಪೂಣಚ್ಚ.—ಈಗಾಗಲೇ ಈ ವಿಚಾರದಲ್ಲಿ ನಾವು ಈ ಗ್ಯಾಂಬ್ಲಿಂಗ್ ಮಟ್ಟಹಾಕಲು ಹೊಸದೊಂದು ಕಾನೂನನ್ನು ತಯಾರಿಸಿರುತ್ತೇವೆ, ಸದ್ಯದಲ್ಲೇ ಆ ಮಸೂದೆ ಈ ಸಭೆಯ ಮುಂದೆ ಬರಲಿದೆ. ಆದರೆ ಈಗ ನಡೆಯುತ್ತಿರುವ ವಿಚಾರಗಳನ್ನು ನಾವು ಮನಗಂಡಿಲ್ಲವೆಂದು ತಾವು ಯಾರೂ ಭಾವಿಸಬಾರದು. ಈ ಜೂಜನ್ನು ನಾವು ಕಾನೂನೊಂದಲ್ಲದೆ ಬೇರೊಂದು ಮಾರ್ಗದಿಂದ ತಪ್ಪಿಸಲು ಸಾಧ್ಯವಿಲ್ಲ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಗ್ಯಾಂಬ್ಲಿಗಿಗೂ ಸಟ್ಟಾಕ್ಕೂ ವ್ಯತ್ಯಾಸವಿಲ್ಲವೇ ? ಅದೇ ಬೇರೆ. ಇದೇ ಬೇರೆ ಅಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ನಾನೀಗ ಎರಡನ್ನೂ ಸೇರಿಸಿ ಹೇಳುತ್ತಿದ್ದೇನೆ. ಈ ವಿಚಾರಗಳನ್ನೆಲ್ಲ ನಾನೀಗ ಹೇಳಿದ್ದು ಈ ಮೊದಲೇ ತಮ್ಮಲ್ಲಿ ಅರಿಕೆ ಮಾಡಿಕೊಂಡಿರುವಂತೆ ಈ ಒಂದು ವರ್ಷದ ಅವಧಿಯಲ್ಲಿ ನಮ್ಮ ಪೋಲೀಸ್ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ನಡೆಸುತ್ತಿದೆ ಎಂಬುದನ್ನು ತಿಳಿಸಲು ಈ ಅಂಶಗಳನ್ನೆಲ್ಲ ಹೇಳಿದ್ದೇನೆ. ಆದರೆ ಇನ್ನು ಈ ಇಲಾಖೆಯಲ್ಲಿ ಕೆಲಕೆಲವು ನ್ಯೂನತೆಗಳಿವೆ ; ಕೊರತೆಗಳಿವೆ. ಅವುಗಳನ್ನು ಸಂಪೂರ್ಣವಾಗಿ ನಿವಾರಣೆ ಮಾಡತಕ್ಕದ್ದು ಅತ್ಯಗತ್ಯ. ಅದು ನಮ್ಮ ಮೇಲೆ ಬಿದ್ದಿರುವ ಜವಾಬ್ದಾರಿ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ರಿಪೋರ್ಟಾದ ಕೇಸುಗಳ ಸಂಖ್ಯೆ ಎಷ್ಟೆಂಬುದನ್ನು ತಾವು ಇಲ್ಲಿಯವರೆಗೂ ತಿಳಿಸಲೇ ಇಲ್ಲ.

Sri C. M. POONACHA.—I will take the earliest occassion to furnish the figures. Whether now or when the demands come up I shall certainly furnish those figures. ಇದರಲ್ಲೇನೂ ಅನುಮಾನವಿಲ್ಲ. ಇನ್ನು ಶ್ರೀವಾಜ್ ಪಡಕಿಯವರೊಂದು ಪ್ರಶ್ನೆ ಹಾಕಿದ್ದಾರೆ. ಬೊಂಬಾಯಿ ಕರ್ನಾಟಕದಲ್ಲಿ ಖೂನಿ ಖಟ್ಲೆಗಳ ಸಂಖ್ಯೆ ಬಹಳ ಅಧಿಕ ಪ್ರಮಾಣದಲ್ಲೇ ಇದೆ. ಆ ಬಗ್ಗೆ ಅಂಕಿ ಅಂಶಗಳನ್ನು ಶೇಖರಣೆ ಮಾಡುತ್ತಿದ್ದೇವೆ. ಬೆಳಗಾಂ ಜಿಲ್ಲೆಯಲ್ಲೂ ಅಷ್ಟೆ. ಬೆಳಗಾಂ ಜಿಲ್ಲೆಯಲ್ಲಿ 1955-56ನೆಯ ಸಾಲಿನಲ್ಲಿ 154 ಖೂನಿ ಕೇಸುಗಳು ರಿಪೋರ್ಟಾಗಿವೆ. 1956-57ರಲ್ಲಿ 127 ಕೇಸುಗಳು ರಿಪೋರ್ಟಾಗಿವೆ. 1957-58ಕ್ಕೆ 125 ಕೇಸುಗಳೂ ಅಲ್ಲಿಂದೀಚೆಗೆ ಇಲ್ಲಿಯವರೆಗೂ ಎಂದರೆ ಮಾರ್ಚಿ ಆಖೈರುವರೆಗೆ 26 ಕೇಸುಗಳು ದಾಖಲಾಗಿರುತ್ತವೆ. ಅಲ್ಲಿ ಈ ಪ್ರಕಾರ ಒಂದು ಪರಿಸ್ಥಿತಿಯಿದೆ.

Sri J. P. SARWESH (Serum-S.C.).—Is it a fact that crime and murders in the Hyderabad area are on the increase?

Sri C. M. POONACHA.—I am giving figures. ಬಿಜಾಪುರ ಜಿಲ್ಲೆಯಲ್ಲಿ ರಿಪೋರ್ಟ್‌ಆಗಿರತಕ್ಕ ಖೂನಿ ಕೇಸುಗಳ ಸಂಖ್ಯೆ ಈ ರೀತಿ ಯಾಗಿದೆ. 1954-55ರಲ್ಲಿ 77 ಕೇಸುಗಳು ; 1955-56ರಲ್ಲಿ 69 ಕೇಸುಗಳು, 1956-57ಕ್ಕೆ 87 ಕೇಸುಗಳು, ಅಲ್ಲಿಂದೀಚೆಗೆ ಇಲ್ಲಿಯವರೆಗೂ 24 ಕೇಸುಗಳು ರಿಪೋರ್ಟಾಗಿರುತ್ತವೆ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಈ ಪೈಕಿ (ಸಿ) ಮತ್ತು (ಬಿ) ರಿಪೋರ್ಟಾಗಿರತಕ್ಕ ಕೇಸುಗಳ ಸಂಖ್ಯೆ ಎಷ್ಟು ? ರಿಜಿಸ್ಟರ್ ಆಗಿ ಕೋರ್ಟಿಗೆ ಹೋದದ್ದರಲ್ಲಿ ಕನ್ವಿಕ್ಷನ್ ಆದ ಕೇಸುಗಳೆಷ್ಟು; ವಜಾ ಆದ ಕೇಸುಗಳೆಷ್ಟು ತಿಳಿಸುತ್ತೀರಾ ?

ಅಧ್ಯಕ್ಷರು.—ಈ ವಿವರಗಳನ್ನೆಲ್ಲಾ ಡಿಮ್ಯಾಂಡ್ ಬಗ್ಗೆ ಚರ್ಚೆ ಆಗುವ ಕಾಲದಲ್ಲಿ ತಿಳಿಸುತ್ತಾರೆ.

ಶ್ರೀ ಸಿ. ಎಂ. ಪೂಣಚ್ಚ.—ಬಳ್ಳಾರಿ ವಿಚಾರಕ್ಕೆ ಬಂದರೆ ಅಲ್ಲಿ 22ಕೇಸುಗಳು ರಿಪೋರ್ಟಾಗಿವೆ.

Sri C. K. RAJAIAH SETTY.—I want the number of cases reported for the year 1958-59.

Sri C. M. POONACHA. Only three months have elapsed now. The information is for the calendar year 1957.

Sri C. K. RAJAIAH SETTY.—May I know the number of reported cases for the calendar year 1957 ?

Mr. SPEAKER.—All the information may be furnished later on.

Sri F. H. MOHSIN (Hubli City).—May I know for what purpose ?

Mr. SPEAKER.—The Hon'ble Member will see that the Hon'ble Minister has promised to furnish the information.

ಶ್ರೀ ಸಿ. ಎಂ. ಪೂಣಚ್ಚ.—ನಾನು ಈವರೆಗೆ ಏನು ಹೇಳುತ್ತಿದ್ದೆನೆಂದರೆ ಒಂದೊಂದು ಪ್ರದೇಶದ ಪರಿಸ್ಥಿತಿ ಒಂದೊಂದು ರೀತಿಯಲ್ಲಿದೆ ಎನ್ನುವುದನ್ನು ತಿಳಿಸುತ್ತಿದ್ದೆ. ಹೊಸ ರಾಜ್ಯದ ಹೊಸ ಪ್ರದೇಶದಲ್ಲಿ ವರ್ಷಕ್ಕೆ 100-80 ಖೂನಿ ಕೇಸುಗಳು ರಿಪೋರ್ಟಾಗುತ್ತಿವೆ. ಹಳೆಯ ಮೈಸೂರಿಗೆ ಸೇರಿಗತಕ್ಕ ಹಾಸನ, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಗಳಲ್ಲಿ ಈ ಖೂನಿ ಕೇಸುಗಳ ಸಂಖ್ಯೆ ಬಹಳ ವಿರಳ. ದಕ್ಷಿಣ ಕನ್ನಡ ಜಿಲ್ಲೆ, ಕೊಡಗೂ ಈ ಪ್ರಾಂತಗಳಲ್ಲೂ ಬಹಳ ಕಡಮೆ, ಆದರೆ ಇದೆಲ್ಲ ಕೇವಲ ನಿನ್ನೆ ಮೊನ್ನೆಯ ವಿಚಾರಗಳಲ್ಲ. ಇವೆಲ್ಲ ಬಹಳ ಹಿಂದಿನಿಂದಲೂ ಬಂದಂಥವುಗಳು. ಆದರೆ ಇವುಗಳನ್ನೆಲ್ಲ ನಾವು ಯಾವುದಾದರೊಂದು ರೀತಿಯಲ್ಲಿ ಸರಿಪಡಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕಾಗಿ ಯೋಗ್ಯರಾದಂಥ ಪೋಲೀಸ್ ಅಧಿಕಾರಿಗಳನ್ನೂ ನೌಕರರನ್ನು ಈ ಹೆಚ್ಚು ಕ್ರೈಂಗಳು ರಿಪೋರ್ಟಾಗತಕ್ಕ ಏರಿಯಾಕ್ಕೆ ವರ್ಗಮಾಡುತ್ತಿದ್ದೇವೆ. ಆದರೆ ನಮ್ಮಲ್ಲಿ ಈ ವರ್ಗ ಮಾಡತಕ್ಕ ವಿಚಾರದಲ್ಲಿರುವ ತೊಂದರೆ ಅಷ್ಟಿಷ್ಟಲ್ಲ. ಆದರೆ ಆ ವಿಚಾರಗಳನ್ನೆಲ್ಲ ನಾನೀಗ ಸಭೆಯ ಮುಂದೆ ತಿಳಿಸುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಬಿ. ಪಡಕಿ (ಪರಾಸ್‌ಗಡ).—ಬ್ರಿಟಿಷರು ಆಳುವಾಗ, ಬಹಳ ದಿವಸಗಳಿಂದಲೂ—150 ವರ್ಷಗಳಿಂದಲೂ ಈ ರೀತಿ ಆಗುತ್ತಿತ್ತು ಎಂದು ಹೇಳಿದಿರಿ. ನಮ್ಮ ಸರ್ಕಾರ ಬಂದಮೇಲೆ ಆಗಿದ್ದಲ್ಲ ಅಂದರೆ ಬ್ರಿಟಿಷರ ಕಾಲದಲ್ಲೂ ಹೀಗೆಯೇ ಇತ್ತೆ ?

ಶ್ರೀ ಸಿ. ಎಂ. ಪೂಣಚ್ಚ.—ಆದ್ದರಿಂದ ಇದನ್ನು ವ್ಯವಸ್ಥೆಮಾಡುವ ವಿಷಯ ಬಹಳ ಕಷ್ಟಕರವಾದ್ದು. ಬೊಂಬಾಯಿನಲ್ಲಿ ಒಬ್ಬೊಬ್ಬರು ಇನ್‌ಸ್ಪೆಕ್ಟರು 12–14 ಸ್ಟೇಷನ್ನುಗಳ ಚಾರ್ಜಿನಲ್ಲಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಎರಡು-ಮೂರು ಹೆಚ್ಚೆಂದರೆ ನಾಲ್ಕು ಅಷ್ಟೆ.

ಈ ಕಾರಣದಿಂದ ಪೋಲೀಸ್ ಆಡಳಿತದ ವ್ಯವಸ್ಥೆಯನ್ನು ಒಂದು ಸ್ವರೂಪಕ್ಕೆ ತರುವುದರಲ್ಲಿ ಬಹಳ ಮಟ್ಟಿನ ಕಷ್ಟವಿದೆಯೆಂದು ನಾನು ಈ ಸಭೆಗೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಆದರೂ ಈಗ ರಿ-ಆರ್ಗನೈಸೇಷನ್‌ಮಾಡುವ ಕೆಲಸವನ್ನು ಕೈಕೊಂಡಿದ್ದೇವೆ. ಕಮಿಷನ್ ಆಗಲೇ ಬಂದಿದೆ, ಈ ಇಲಾಖೆಯನ್ನು ರಿ-ಆರ್ಗನೈಸ್ ಮಾಡಬೇಕು ಎಂದು. ಈ ಕೆಲಸವನ್ನೇ ನಾವೂ ಕೂಡ ಮಾಡುತ್ತಿದ್ದೇವೆ. ಕಳೆದ 20 ವರ್ಷಗಳ ಹಿಂದೆ Police Reorganisation ಆಗಿತ್ತು. ಈಚೆಗೆ ಆಗಿಲ್ಲ. ಆದ್ದರಿಂದ ಹೆಚ್ಚಿನ ಇನ್‌ಸ್ಪೆಕ್ಟರುಗಳು ಅಲ್ಲಿರತಕ್ಕವರನ್ನು ಇಲ್ಲಿಗೆ ಹಾಕಬಹುದು. ಆದರೆ, ಸಂಖ್ಯೆಯಲ್ಲಿ ವ್ಯತ್ಯಾಸವಿರುವುದಲ್ಲ. Disposition of Police ಮುಂತಾಗಿ ಪ್ರತಿಯೊಂದರಲ್ಲೂ ಭಾಗ ಭಾಗಕ್ಕೂ ವ್ಯತ್ಯಾಸವಿದೆ. ಈ ಏರುಪೇರುಗಳನ್ನು ತೆಗೆದು ಒಂದೇರೀತಿ ಮಾಡುವುದರಲ್ಲಿ ಈಗ ಅಷ್ಟು ಕೆಲಸಮಾಡಿಲ್ಲವೆಂದೂ, ಆದರೂ ದೈನಂದಿನ ಕೆಲಸವನ್ನು ಈ ಇಲಾಖೆ ಸರಿಯಾಗಿ ಮಾಡುತ್ತಿದೆಯೆಂದೂ ನಾನು ಹೇಳಬಲ್ಲೆ.

ಪ್ರೊಹಿಬಿಷನ್ ವಿಚಾರದಲ್ಲಿ ಒಂದು ಮಾತು. ಪ್ರೊಹಿಬಿಷನ್ನನ್ನು ಯಾವುದಾದರೂ ಸಮರ್ಪಕವಾದ ರೀತಿಯಲ್ಲಿ ನಡೆಸಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ; ಈ ಮಾನ್ಯ ಸಭೆಯ ಉದ್ದೇಶವೂ ಆಗಿದೆ. ಈ ಬಗ್ಗೆ ಕಳೆದ ಸಾರಿಯೂ ಒಂದು ಸೂಚನೆ ಕೊಟ್ಟಿತ್ತು. ಅದನ್ನು ಪರ್ಯಾಲೋಚನೆಮಾಡಿ ಒಂದು ನಿರ್ಣಯಕ್ಕೆ ಬಂದಿದ್ದಾಗಿದೆ. ಪ್ರೊಹಿಬಿಷನ್ ಸಂಬಂಧದಲ್ಲಿ ಒಂದು ಪ್ರತ್ಯೇಕ ದಳವನ್ನುಮಾಡಿ ಆ ಮೂಲಕ ಇದನ್ನು ಜಾರಿಗೆ ತರಬೇಕೆಂದು ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ. ಶೀಘ್ರವಾಗಿ ಈ ಸಂಬಂಧದಲ್ಲಿ ಒಂದು ತೀರ್ಮಾನವನ್ನು ಸರ್ಕಾರದವರು ಕೈಕೊಳ್ಳುತ್ತಾರೆ.

ಇನ್ನು ಮುಖ್ಯವಾಗಿ ಚರ್ಚೆಗೆ ಬಂದಂಥ ಒಂದು ವಿಷಯವೆಂದರೆ ಶ್ರೀಮತಿ ಮುನಿಯಮ್ಮನ ಮರಣಕ್ಕೆ ಸಂಬಂಧಿಸಿದ್ದು. ಈ ಬಗ್ಗೆ ಒಂದು ವಿಸ್ತೃತವಾದ ಹೇಳಿಕೆಯನ್ನು ಕೊಡುವೆನೆಂದು ನಾನು ವಾಗ್ದಾನ ಮಾಡಿದ್ದೆ. ಆದ್ದರಿಂದ ಈಗ ಆ ವಿಷಯದಲ್ಲಿ ಮಾತನಾಡಬೇಕೆಂದಿದ್ದೇನೆ. ಮಿಕ್ಕ ವಿಷಯಗಳ ಮೇಲೆ ಡಿಮ್ಯಾಂಡ್‌ಗಳು ಬಂದಾಗ ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಬಡ್ಜೆಟ್ ಭಾಷಣ ಮಾಡುವಾಗ ಮುನಿಯಮ್ಮನ ವಿಷಯ ತೆಗೆದುಕೊಂಡರಲ್ಲಾ ? While speaking on the Budget, we should not take away the time of the House by speaking on that matter. When the adjournment motion was tabled the Government were not prepared to answer. And now to take away the time of the House by speaking on Muniyamma's case, will not be correct.

Mr. SPEAKER.—Smt. Muniyamma's case had come up before the House. The Advocate-General and the Hon'ble Home Minister have already given a reply. But Muniyamma's case has again appeared very prominently during the present general debate on the Budget.

ಶ್ರೀ ಎ. ಭೀಮಪ್ಪನಾಯಕ್.—ನಾನು ಹೇಳುವುದು ಅದಲ್ಲ. ಒಬ್ಬೊಬ್ಬರ ಚರಿತ್ರೆಯನ್ನೂ ಹೇಳುತ್ತಾ ಮುನಿಯಮ್ಮನ ಕೇಸನ್ನು ಹೇಳುವುದರಿಂದ ಎಲ್ಲರಿಗೂ ಯಾವ ಪ್ರಯೋಜನವೂ ಇಲ್ಲ. Why should you take away much time of the House ?

ಅಧ್ಯಕ್ಷರು.—ಮುನಿಯಮ್ಮನ ವಿಷಯ ಈ ಸಭೆಯಲ್ಲಿ ಮತ್ತೆ ಮತ್ತೆ ಬರುತ್ತಿದೆ. ಅವರು ಅದಕ್ಕೆ ಉತ್ತರಕೊಡಬೇಕಾಗಿದೆ. ಆದ್ದರಿಂದ ಅವರೀಗ ಹೇಳುವವರಾಗಿದ್ದಾರೆ. ಈ ಬಗ್ಗೆ ಹೆಚ್ಚಿಗೆ ಸಮಯ ತೆಗೆದುಕೊಳ್ಳಕೂಡದೆಂಬುದನ್ನು ಲಕ್ಷ್ಯದಲ್ಲಿಟ್ಟು ಅವರು ಹೇಳುತ್ತಾರೆ.

Sri V. SRINIVAS SHETTY (Coondapoor).—Sir, several members have raised the issue. It is only an example of the system. It is not an individual case. Several cases are happening. We would like to know the correct facts. Everything is camouflaged. On this side of the House members want to know the correct facts known to the Government.

ಶ್ರೀ ಸಿ. ಎಂ. ಪೂಣಚ್ಚ.—ಶ್ರೀಮತಿ ಮುನಿಯಮ್ಮನ ಪ್ರಕರಣದಲ್ಲಿ ಬಹಳಮಟ್ಟಿಗೆ ತಪ್ಪು ಅಭಿಪ್ರಾಯಗಳು ಪ್ರಸಾರವಾಗಿವೆಯೆಂದು ನಾನು ಪ್ರಥಮತಃ ಹೇಳಬೇಕಾಗಿದೆ. ಏಕೆಂದರೆ ಈ ವಿಷಯದಲ್ಲಿ ಈ ಸಭೆಯಲ್ಲೇ ಅಲ್ಲ ಹೊರಗಡೆಯೂ ಕೂಡ, ಪತ್ರಿಕೆಗಳಲ್ಲೂ ಸಹ ಬಹಳ ಮಟ್ಟಿನ ಅಪಪ್ರಚಾರ ನಡೆದಿದೆ. ಇದರ ನಿಜಾಂಶವೇನೆಂದರೆ, ಫೆಬ್ರುವರಿ ತಾರೀಖು 15ರಲ್ಲಿ ಶ್ರೀಮತಿ ಮುನಿಯಮ್ಮ, ಸರೋಜ ಮತ್ತು ಅವಳ ಗಂಡ ಶ್ರೀರಾಮಪುರದಲ್ಲಿ ಒಂದು ಕಡೆ ಎಲ್ಲರೂ ಕೆಲಸಮಾಡುತ್ತಿದ್ದರು. ಅಲ್ಲಿ ಕೆಲಸಮಾಡುತ್ತಿದ್ದಾಗ ಸರೋಜಳ ಕಿವಿಯಲ್ಲಿದ್ದ ಓಲೆ ಬಿದ್ದುಹೋಯಿತು; ಅಲ್ಲಿ ಕಳೆದುಹೋಯಿತು. ಕೆಲಸಬಿಟ್ಟನಂತರ ಸರೋಜಳಿಗೆ ಕಿವಿಯ ಓಲೆ ಬಿದ್ದದ್ದು ಅರಿವಾಯಿತು. ಆಗ ಅವಳು ಮುನಿಯಮ್ಮನು ಅದನ್ನು ತೆಗೆದುಕೊಂಡಿರಬಹುದೆಂದು ಸಂಶಯಪಟ್ಟಳು. ಇದು ಅಲ್ಲಿನ ವಿಷಯ.

ಇತ್ತ ಮುನಿಯಮ್ಮನ ಜೀವನ ನೋಡುವುದಾದರೆ, ಆಕೆ ದೈನಂದಿನ ಕೆಲಸಮಾಡಿ ಜೀವನಮಾಡುವ ಒಂದು ವ್ಯಕ್ತಿ. ಮೂರು ವರ್ಷಕ್ಕೆ ಹಿಂದೆ ಮದುವೆಯಾಗಿತ್ತು. ಮದುವೆಯಾದ ಗಂಡ ಬಿಟ್ಟುಹೋದದ್ದರಿಂದ, ಅವಳ ರಕ್ಷಣೆಗೆ ಯಾರೂ ಇಲ್ಲದೆ ತನ್ನ ತಂಗಿಯ ಜೊತೆಯಲ್ಲಿ ಜೀವನಮಾಡುತ್ತಿದ್ದಳು. ತಂಗಿಯ ಗಂಡ ಇದ್ದ.

ಈ ಪ್ರಕಾರ ಅವಳು ಒಬ್ಬರ ಹಂಗಿನಲ್ಲಿ ಜೀವನ ಮಾಡುತ್ತಿದ್ದಳು. ಹೀಗಿರುವಾಗ ಆ ಕ್ಷಣದಲ್ಲಿ ಏನಾದರೊಂದು ಕಳವು, ಕಾಣೆಯಾಯಿತೆಂದರೂ ಸಾಮಾನ್ಯವಾಗಿ ಸಂಶಯ ಮುನಿಯಮ್ಮನ ಮೇಲೆ ಇರುತ್ತಿತ್ತು. ಈ ರೀತಿಯಾಗಿ ತನ್ನದೇ ಸಮಾಜದಲ್ಲಿ ನಾನಾ ರೀತಿಯಲ್ಲಿ ಕಾಡಲ್ಪಟ್ಟು ತೊಂದರೆಗೊಳಗಾಗಿದ್ದವಳು ಮುನಿಯಮ್ಮ. ಇನ್ನೊಬ್ಬ ಮನುಷ್ಯನ ಹಂಗಿನಲ್ಲಿ ಜೀವನಮಾಡುತ್ತಿದ್ದವಳು. . . .

Sri K. HANUMANTHAIYA (Ramanagaram).—May I rise to a point of order ? I do not know at what stage this case is pending. Anyway, the way in which the Hon'ble Minister is going on speaking shows as if he is before the witness box and not before the House.

Mr. SPEAKER.—I am also watching what the Hon'ble Minister is saying.

Sri K. HANUMANTHAIYA.—Sir, the detailed way in which the Hon'ble Minister is going on making allegations, casting aspersions against Muniyamma, the condition of her living, her character—these remarks are what is called evidence and not what is called justification. Muniyamma is not here, or her character is not concerned.

Mr. SPEAKER.—So far as I am able to understand, Hon'ble Minister is not casting any aspersions.

2 P.M.

Regarding the other point, that the Minister is speaking as if he is in the witness box and not as a member of this House or as a Minister, let us watch in what capacity he is speaking.

Sri K. HANUMANTHAIYA.—Sir, just now the Minister said that Muniamma was being accused for every crime committed in the locality and that her husband had left her and so on. All these are allegations.

Mr. SPEAKER.—That may or may not be the case. He is speaking from the knowledge he possesses. Let us see what he has to say.

Sri V. SRINIVAS SHETTY.—Has Muniyamma any previous convictions ?

Sri C. M. POONACHA.—As far as I am aware, no. I am only referring to the kind of propaganda being carried on here and outside. It is absolutely false. As Hon'ble Members have raised the issue, I would have to go into details of certain facts.

Sri K. HANUMANTHAIYA.—They cannot be facts, because the Minister cannot prove them. The Minister's statement of view is not proof. Proof has to be adduced before a court and when allegations are made against the character of Muniyamma or anyone else, it has to be decided by courts on the basis of evidence, proved documents and otherwise. That is why a Hon'ble Member asked whether there were any previous convictions. Mere statement of the Hon'ble Minister does not amount to proof.

Mr. SPEAKER.—There is no question of proof being produced here. Hon'ble Members simply quote what they know or what they believe to be true. There is no question of anyone proving any point in this House.

Sri K. S. SURYANARAYANA RAO (Mysore City).—At what stage is the investigation of the case just at the moment? When the Speaker had given the ruling it was not *subjudice*. We should be clear as to where we stand.

Mr. SPEAKER.—It is not *sub judice.*

Sri C. M. POONACHA.—It is not *subjudice*, according to the ruling of the Speaker.

Sri J. B. MALLARADHYA.—During question-hour, in answer to a certain question, the Minister was pleased to say that the Government had come to the conclusion that there was no need for an enquiry committee. Would any purpose be served by an elaborate statement like this. on which there is going to be very serious difference of opinion? After all, the Hon'ble Minister's information has been obtained through the officers, but the Members of the Legislature have various other sources of getting information. As against the two, if we weigh them in a balance it may be that the position of the Government will be weakend. It will be much better that the matter is simply set at rest. In fact, it is going to provoke a lot of discussion and cross-examination. I had asked earlier as to how the Governmet came to the conclusion that an enquiry was unnecessary, even before the magisterial investigation under Section 176 had not been concluded. In spite of this fact, the Government have given an answer that they do not propose to set up a committee. That means they have taken a decision even when they were not in possession of all the facts of the case. They could have waited till the enquiry of the Magistrate was over. There are many points involved in the case. I myself wondered as to what the jurisdiction of the Magistrate was in this case. In view of the decision of the Government what useful purpose would be served by making an elaborate statement at this juncture?

Mr. SPEAKER.—I am not concerned with whether the enquiry under section 176 has been concluded or not. I am not concerned with whether it was proper on the part of the Magistrate to go into and investigate the matter under Section 176 of the Cr.P.C. I am not a Court of Law. I am here just to hear the view-point of different members. Since Muniamma's case has been referred to by some of the Hon'ble Members and they made their own remarks, the Hon'ble Minister is also entitled to reply to the best of his knowledge. I have already stated that the source of information of the Hon'ble Minister must be the police department. It cannot be anything else. It is for the members to draw any conclusion they like. Of course, Hon'ble Members may have their own source of information. But then I am not concerned with them. I am only concerned with the freedom of speech in the House and if that freedom of speech can be available to private members, it must also be available to the Minister concerned. To that extent the Hon'ble Minister can make a statement.

Sri B. N. BORANNA GOWDA (Belur).—Sir, this is the third time, the matter has been referred to in this House. Is the Hon'ble Minister going to say anything more than what he has already stated?

Mr. SPEAKER.—That we will see later on. For the third time, Muniamma's case has entered the House. As one Hon'ble Member remarked, the ghost of Muniamma is haunting all of us here and I hope that this will be the last time when she will haunt us. (*Laughter*).

ಶ್ರೀ ಸಿ. ಎಂ. ಪೂಣಚ್ಚ.—ಈ ರೀತಿ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದೇ ವಿಷಯದ ಮೇಲೆ ವಿಧ ವಿಧವಾದ ಅಭಿಪ್ರಾಯವನ್ನು ವ್ಯಕ್ತಮಾಡಿ ಏನೋ ಒಂದು ಅನ್ಯಾಯವಾಗಿ ಬಿಟ್ಟಿದೆ ಇಂತಹ ಅನ್ಯಾಯಗಳು ನಡೆಯಬಾರದಾಗಿತ್ತು ಎನ್ನುವ ಪ್ರಶ್ನೆ ಇಲ್ಲಿ ಬಂದಿದ ರಿಂದ ನಾನು ನಿಜವಾದ ವಿದ್ಯಮಾನಗಳೇನು ಎನ್ನುವುದನ್ನು ಹೇಳಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಆ ವಿಷಯಗಳಿಗೆ ಕಾರಣಗಳನ್ನು ಹೇಳಬೇಕಾಗಿದೆ.

15ನೇ ತಾರೀಖಿನನಂತರ ಒಗ್ಗೊಗ್ಗೇ ಇವರಲ್ಲಿ ಸಂಭಾಷಣೆಗಳಾದುವು ಮತ್ತು ಸ್ವಲ್ಪ ಮಾತುಗಳು ನಡೆದವು. ಕೊನೆಯದಾಗಿ ಸರೋಜಳೆಂಬುವಳು ಮುನಿ

ಯಮ್ಮನನ್ನು "ನೀನು ಈ ಒಂದು ದಿನದೊಳಗೆ ಈ ಒಲೆಯನ್ನು ಕೊಡದೆಹೋದರೆ ನಾನು ಪೋಲೀಸಿಗೆ ಫಿರ್ಯಾದು ಮಾಡುತ್ತೇನೆ" ಎಂದು ಹೇಳಿದುದಕ್ಕೆ ಮುನಿಯಮ್ಮನು ಪೋಲೀಸಿಗೆ ಬೇಕಾದರೂ ಹೋಗಿ ಹೇಳಬಹುದು ಅಥವಾ ಇನ್ನೆಲ್ಲಿಗಾದರೂ ಕರೆದುಕೊಂಡು ಹೋಗಿ ಹೇಳಿದರೂ ನಾನು ಏನನ್ನೂ ತೆಗೆದುಕೊಂಡಿಲ್ಲ ಮತ್ತು ಅಪರಾಧವನ್ನು ಮಾಡಿಲ್ಲ ಮತ್ತು ನನಗೇನೂ ಭಯವಿಲ್ಲ ಎಂದು ಹೇಳಿದಳು. ಹಾಗಾದರೆ ಪೋಲೀಸು ಸ್ಟೇಷನ್ನಿಗೆ ಹೋಗಿ ನಾವು ಇದನ್ನು ವಿಚಾರ ಮಾಡೋಣ ಎಂದು ಮಾರನೆಯ ದಿನ ಬೆಳಿಗ್ಗೆ ಪೋಲೀಸು ಸ್ಟೇಷನ್ನಿಗೆ ಹೋಗಿ ಫಿರ್ಯಾದನ್ನು ಕೊಟ್ಟರು. ಈ ಪ್ರಕಾರ ಸಂಭವಿಸಿದ ವಿಚಾರದ ಮೇಲೆ ಈ ಸಭೆಯ ಮಾನ್ಯ ಸದಸ್ಯರಾದ ಡಾಕ್ಟರ್ ಟಿ. ಪಾರ್ಥಸಾರಥಿಯವರು ಹೇಳುತ್ತಾ ಬಹಳ ಸ್ಪಷ್ಟವಾಗಿ ತಮ್ಮ ಹೇಳಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. 17ನೆಯ ತಾರೀಖು ಮುನಿಯಮ್ಮನನ್ನು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ರಾತ್ರಿ ಆರು ಗಂಟೆಯಿಂದ ಹನ್ನೊಂದು ಗಂಟೆಯವರೆಗೆ ಪೋಲೀಸು ಸ್ಟೇಷನ್ನಿನಲ್ಲಿ ಇರಿಸಿಕೊಂಡು ಅತ್ಯಾಚಾರ ಮಾಡಿದರೆಂಬ ನಿಜವಲ್ಲದ ಆಧಾರಗಳ ಮೇಲೆ ಈ ರೀತಿಯಾದ ಒಂದು ತಪ್ಪು ಅಪರಾಧವನ್ನು ಮತ್ತು ಆಪಾದನೆಯನ್ನು ಹೊರಿಸಿದ್ದಾರೆ. ಆದರಿಂದ ಸಹಜವಾದ ವಿವರಗಳನ್ನೆಲ್ಲ ಕೊಡಬೇಕು ಎನ್ನುವ ಉದ್ದೇಶದಿಂದ ಈ ಸಭೆಗೆ ಕೊಡುತ್ತಿದ್ದೇನೆ. 18ನೆಯ ತಾರೀಖು ಬೆಳಗ್ಗೆ ಎಂಟು ಗಂಟೆಗೆ ಅವರುಗಳು ತಾವಾಗಿಯೇ ಹೋಗಿದ್ದರು. ಸ್ವಲ್ಪ ಮುಂಚಿತವಾಗಿಯೇ ಮುನಿಯಮ್ಮ ಮತ್ತು ಸರೋಜ ಸ್ಟೇಷನ್ನಿಗೆ ಬಂದಿದ್ದರು. ಅನಂತರ ಸರೋಜಮ್ಮನ ಗಂಡ ಕೂಡ ಪೋಲೀಸು ಸ್ಟೇಷನ್ನಿಗೆ ಹೋಗಿ ಎಲ್ಲ ಮಾತನಾಡಿ ಕರೆದುಕೊಂಡು ಹೋಗಿದ್ದಾರೆ. 17ನೆಯ ತಾರೀಖು ಕರೆದುಕೊಂಡು ಹೋಗಿದ್ದರೂಕೂಡ ಪೋಲೀಸು ಸ್ಟೇಷನ್ನಿನ ಡೈರಿಯಲ್ಲಿ ಎಂಟ್ರಿ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಇದು ತಪ್ಪು. 17ನೆಯ ತಾರೀಖಿನ ದಿವಸ ಶೇಷಾದ್ರಿಪುರಂ ಪೋಲೀಸು ಸ್ಟೇಷನ್ನಿನಲ್ಲಿ ಸಬ್ ಇನ್ಸ್‌ಪೆಕ್ಟರು ರಾತ್ರಿ ಒಂಭತ್ತು ಗಂಟೆಯಿಂದ 12 ಗಂಟೆಯವರಿಗೆ ಒಂದು ಕಳವಿನ ಕೇಸಿನ ಸಂಬಂಧದಲ್ಲಿ ಅಲ್ಲಿಯೇ ಇದ್ದರು ಮತ್ತು ಆ ಕೇಸಿಗೆ ಸಂಬಂಧಪಟ್ಟ ಕೈದಿಗಳನ್ನು ಲಾಕಪ್ಪಿನಲ್ಲಿರಿಸಿಕೊಂಡಿದ್ದರು. ಏಕೆಂದರೆ ಆ ಕೇಸಿನ ಫಿರ್ಯಾದು ಇನ್ನೂ ಪೂರೈಸಿರಲಿಲ್ಲ. ಪರಿಸ್ಥಿತಿ ಹೀಗಿರುವಲ್ಲಿ, ಯಾರೂ ಕೂಡ ಸ್ಟೇಷನ್ನಿನಲ್ಲಿರಲಿಲ್ಲ ಎಂದು ಮಾನ್ಯ ಸದಸ್ಯರು ಹೇಳಿರುವುದು ಸಂಪೂರ್ಣವಾಗಿ ನಿರಾಧಾರವಾದ ಮಾತು.

ಶ್ರೀ ಕೆ. ಹನುಮಂತಯ್ಯ.—ಇವರಿಬ್ಬರನ್ನೂ ಅವರೇ ಸ್ವತಃ ಕರೆದುಕೊಂಡು ಹೋದರೆಂದು ಹೇಳುತ್ತೀರೋ ಅಥವಾ ಮುನಿಯಮ್ಮನೇ ಸ್ವತಃ ಬಂದಳೆಂದು ಹೇಳುತ್ತೀರೋ?

ಶ್ರೀ ಸಿ. ಎಂ. ಪೂಣಚ್ಚ.—ಸರೋಜಮ್ಮನು ಪೋಲೀಸಿಗೆ ಹೋಗಿ ಪಿರ್ಯಾದು ಮಾಡುತ್ತೇನೆಂದು ಹೇಳಿದಾಗ ಮುನಿಯಮ್ಮನು ತಾನೇ ಬರುತ್ತೇನೆಂದು ಹೇಳಿದ್ದಳು. ಆಮೇಲೆ 18ನೆಯ ತಾರೀಖು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋದರು.

(Sri C. J. Muckannappa rose again).

Sri C. M. POONACHA.—I am not prepared to yield. He has interfered too much. The member had so many things to say and he must sit and hear me.

Sri C. J. MUCKANNAPPA.—I rise on a point of order, Sir. I challenge that Muniamma was not taken to the police station on the 17th but she was taken on the 18th morning, because the doctor in the Victoria Hospital showed a certificate dated the 18th. 9-15 A.M. is entered in it and the Magistrate who is holding the enquiry disputed this and the police have accepted it.

Mr. SPEAKER.—There is no point of order involved in it. It is rather very much surprising that a point of information becomes a point of order soon after. It is not fair on the part of any Hon'ble Member to use the floor of the House in order to convert a point of information into a point of order immediately. In my view it is not a good use of the right of a member of this House.

Sri J. H. SHAMSUDDIN (Honawar).—On a point of order, Sir. If an Hon'ble Member misuses his power of eliciting information when the Hon'ble Minister does not yield by rising on a point of order, is the Chair helpless? Is there any remedy or method by which the Chair can prevent it?

Mr. SPEAKER.—There are remedies no doubt, but the only remedy I would like to apply is to order the remarks made by the Hon'ble Member Sri Muckannappa to be erased from the records.

Sri C. J. MUCKANNAPPA.—The medico-legal certificate was issued at 9 A.M. on the 18th. Is that so?

Sri C. M. POONACHA.—Here I have got a photostat copy and I am going to quote an authority which my Hon'ble friend relies on. Here it is stated that the medical certificate was issued at 2-30 P.M. on the 18th and not at 9 A.M. on that day as stated by the Hon'ble Member Sri Muckannappa. The Hon'ble Member cannot fling a challenge without making verification and without knowing what he is saying on the floor of the House.

Sri J. B. MALLARADHYA.—The Minister is trying to rely on what is published in a newspaper. I would like him to assure us that it was issued

(SRI J. B. MALLARADHYA)

at 2-30 P.M. on the basis of the official document.

Sri C. M. POONACHA.—I wanted to quote from a paper which my Hon'ble friend would very much rely upon.

Sri J. B. MALLARADHYA.—I do not want the Hon'ble Minister to rely on newspaper reports. Why should he not rely on official documents ?

Mr. SPEAKER.—In the first place Hon'ble Member should not rely on newspaper reports. Secondly, if he is convinced about the truth of the whole matter that has appeared in the newspaper he can use it. But in no case should newspaper reports as such be quoted here unless an Hon'ble Member believes them to be true.

Dr. T. PARTHASARATHY (Malleswaram).—The conflict is about the time when the certificate was issued. Muniamma stayed in the hospital from 8 A.M. till 2-30 P.M. the same day and she cannot be both in the hospital and in the police station on the same day. It is the wrong statement of the police that is responsible for this confusion. She was taken to the police station on the 17th and I sent her to the hospital. The case diaries were not written on the 17th but were written only on the 18th. If they had been honest, all this confusion would not have arisen.

Sri V. SRINIVAS SHETTY.—Is it not a fact that it is the custom of the police to write up the diary for the previous day's work the next morning and since this whole thing happened on the 17th at 11 A.M. or 12 NOON, as usual the diary was written the next morning ?

Sri C. M. POONACHA.—Certainly not. ನಾನು ಏಕೆ ಹೇಳುತ್ತಿದ್ದೇನೆಂದರೆ ಇವರು 18ನೆಯ ತಾರೀಖು ಬೆಳಗ್ಗೆ ಪೋಲೀಸು ಸ್ಟೇಷನ್ನಿಗೆ ಹೋಗಿದ್ದಾರೆ. 18ನೆಯ ತಾರೀಖು ಅಲ್ಲಿಗೆ ಹೋದನಂತರ ಕಿವಿಓಲೆ ಕಳೆದುಕೊಂಡಿದ್ದುದನ್ನು ಮುನಿಯಮ್ಮ ತೆಗೆದುಕೊಂಡಿದ್ದಾಳೆನ್ನುವ ಆಪಾದನೆಯ ಮೇಲೆ ವಿಚಾರಣೆ ನಡೆಯಿತು. ಅವರು ಸಾಧಾರಣ 15 ನಿಮಿಷಗಳು ಮಾತ್ರ ಸ್ಟೇಷನ್ನಿನಲ್ಲಿದ್ದರು

Sri K. HANUMANTHAIYA.—Did they go voluntarily or were they arrested by the police and taken to the police station ?

Sri C. M. POONACHA.—They themselves went.

Sri T. SUBRAMANYA (Turuvekere).—I do not want to interrupt, but here is an Hon'ble Member of this House Dr. Parthasarathy who says that according to his knowledge Muniamma was in the hospital on the 18th from morning 8 to afternoon 2-30 and we have no reason to disbelieve him because he is a professional doctor. He also asserts that Muniamma did not go to the police station and that her statement was not recorded. I wish that the Hon'ble Members should allow the Hon'ble Minister to reply to those two points. I also request the Hon'ble Minister not to quote from the paper *Jwalamukhi* as an authority.

Sri C. M. POONACHA.—It is a photostat copy ; I am not quoting from it.

Sri T. SUBRAMANYA.—Another point I would like to know from the Hon'ble Minister is, how did the photostat copy go to hands of that editor. Who gave it to him ? I want to know whether he got it from the Government quarters or from private quarters. All these will become matter for discussion on the floor of this House if that newspaper is quoted. Therefore, I wish that the Hon'ble Minister avoids embarrassment to himself and to us also.

Mr. SPEAKER.—I have already prevented the Hon'ble Minister from quoting from the newspaper.

Sri A. BHEEMAPPA NAIK.—Have you proceeded against the offender under the Official Secrets Act for having furnished a copy to *Jwalamukhi* ? I also request the Hon'ble Minister not to quote from the newspaper.

Mr. SPEAKER.—I have already said that I have prevented the Hon'ble Minister from quoting from the newspaper and there the matter should end.

Dr. T. PARTHASARATHY.—That means the Minister has ample belief on such sources of information and on nobody else.

Mr. SPEAKER.—I have already made it clear that the source of information for the Hon'ble Minister is the police. Whether the information can be believed or not is a matter for the members and for the general public to consider. He cannot get information

from other sources and if he gets, he cannot make use of it here because he cannot have the same belief in it.

Sri J. P. SARWESH.—Let him not ask us to believe that as truth, Sir.

Sri C. M. POONACHA.—Facts will reveal as to what is the actual truth. If they will not believe facts, nobody can help them.

ಹದಿನೆಂಟನೆಯ ತಾರೀಖು ಪೋಲೀಸು ಸ್ಟೇಷನ್ನಿಗೆ ಹೋದನಂತರ ಮುನಿಯಮ್ಮನು ಪ್ರಥಮತಃ ಹೋದಂಥಾದ್ದು ಯಾರ ಹತ್ತಿರ ಎಂದರೆ, ಮಾನ್ಯ ಮಿತ್ರರಾದ ಶ್ರೀ ವಿ. ಆರ್. ನಾಯ್ಡುರವರ ಹತ್ತಿರ. ಅವರ ಹತ್ತಿರ ಇಂಥ ಘಟನೆ ಆಯಿತು ಎಂದು ಹೇಳಿದಾಗ, ಶ್ರೀ ವಿ. ಆರ್. ನಾಯ್ಡುರವರು ಡಾ|| ಪಾರ್ಥಸಾರಥಿಯವರಿಗೆ ಒಂದು ಪತ್ರ ಕೊಟ್ಟರು.

Sri C. J. MUCKANNAPPA.—I rise to a point of order. The name of a person who is not a member of this House should not be used on the floor of this House. How can Sri V. R. Naidu's name be mentioned in this House, Sir ? He is not a member of this House.

Mr. SPEAKER.—After all my ruling has not been properly understood by the Hon'ble Member. What I have said is that names of persons who cannot be here in order to make a reply to an insinuation should not be used. I have said that making statements of a character which could be termed as defamation was improper.

ಶ್ರೀ ಸಿ. ಎಂ. ಪೂಣಚ್ಚ.—ಆಮೇಲೆ ಹದಿನೆಂಟನೆಯ ತಾರೀಖು ಬೆಳಿಗ್ಗೆ ಬಹುಶಃ 8 ಅಥವಾ $8\frac{1}{2}$ ಘಂಟೆಗೆ ಮುನಿಯಮ್ಮನವರು ಡಾ|| ಪಾರ್ಥಸಾರಥಿಯವರ ಹತ್ತಿರ ಒಂದು ಮೆಡಿಕಲ್ ಸರ್ಟಿಫಿಕೇಟ್ (ಚೀಟಿ) ತೆಗೆದುಕೊಳ್ಳುವುದಕ್ಕೆ ಹೋದರು. ನಂತರ ತಮಗೆ ಗಾಯಗಳಾಗಿವೆ, ಸರ್ಟಿಫಿಕೇಟು ಬೇಕು ಎಂದು ಡಾ|| ಪಾರ್ಥಸಾರಥಿಯವರನ್ನು ಕೇಳಿದರು. ಡಾ|| ಪಾರ್ಥಸಾರಥಿಯವರು ಒಂದು ಚೀಟಿಯಲ್ಲಿ Patient directed to go to Malleswaram Hospital ಎಂದು ಬರೆದರು. ಈ ಚೀಟಿಯನ್ನು ತೆಗೆದುಕೊಂಡು.........

Sri A. BHEEMAPPA NAIK.—On a point of order, Sir. Can cross-examination be allowed on the floor of this House ? When a Minister is making a statement, cross-examination is being carried on.

Mr. SPEAKER.—Order, order. Dr. Parthasarathy, I expect better conduct from you. Please excuse me. Cross-examination cannot be carried on here. At the same time, Hon'ble Member Sri Bheemappa Naik should understand that I am trying to remove such ugly situations as far as possible.

ಶ್ರೀ ಸಿ. ಎಂ. ಪೂಣಚ್ಚ.—ಈ ಚೀಟಿಯನ್ನು ತೆಗೆದುಕೊಂಡು ಮಲ್ಲೇಶ್ವರಂ ಆಸ್ಪತ್ರೆಯ ಲೇಡಿ ಡಾಕ್ಟರಿಗೆ ತೋರಿಸಿ, ನನಗೆ ಸರ್ಟಿಫಿಕೇಟ್ ಬೇಕು ಎಂದು ಮುನಿಯಮ್ಮ ಕೇಳುತ್ತಾರೆ. ಇದು ಏನು ಫಿಟ್‌ನೆಸ್ ಸರ್ಟಿಫಿಕೇಟೋ ಎಂದು ಆ ಡಾಕ್ಟರು ಪ್ರಶ್ನಿಸಿ, ವ್ಯಾಕ್ಸಿನೇಷನ್ ಮಾಡಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಅದಕ್ಕೆ ಮುನಿಯಮ್ಮ, ನನಗೆ ನಮ್ಮ ನೇಬರ್, ಪಕ್ಕದ ಮನೆಯವರು ಏಟು ಹೊಡೆದಿರುವುದರಿಂದ ವೂಂಡ್ ಸರ್ಟಿಫಿಕೇಟ್ ಬೇಕು ಎಂದು ಕೇಳುತ್ತಾರೆ. ಅದಕ್ಕೆ ಲೇಡಿ ಡಾಕ್ಟರ್ ಹೇಳುತ್ತಾರೆ : ಮೆಡಿಕಲ್ ಆಫೀಸರ್ ಅಥವಾ ಆರ್. ಎಂ. ಓ. ಹತ್ತಿರ ಕೇಳಿ, ನಾವು ವೂಂಡ್ ಸರ್ಟಿಫಿಕೇಟ್ ಕೊಡುವುದಿಲ್ಲ, ಇಲ್ಲಿ ಮೆಟರ್ನಿಟಿ ಕೇಸಸ್ ಮಾತ್ರ ಟ್ರೀಟ್ ಮಾಡುತ್ತೇವೆ, ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುತ್ತೇವೆ, ಆದ್ದರಿಂದ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕು ಎಂದು. ಆಮೇಲೆ ಮುನಿಯಮ್ಮ ಡಾ|| ಪಾರ್ಥಸಾರಥಿಯವರ ಒಂದು ಪತ್ರ ತೆಗೆದುಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಅಲ್ಲಿ ಆ ಪತ್ರವನ್ನು ತೋರಿಸುತ್ತಾರೆ. ಡಾ|| ಪಾರ್ಥಸಾರಥಿಯವರ ಕಾಗದದಲ್ಲಿ ಏನಿದೆ ಅಂದರೆ : " ಪೇಷಂಟಿಗೆ ಒಂದು ಸರ್ಟಿಫಿಕೇಟ್ ಬೇಕು ಎಂದು ಕಾಣುತ್ತದೆ. ಆಕೆಯನ್ನು ಪರೀಕ್ಷೆಮಾಡಿ ನ್ಯಾಯವಾದಂಥ, "needful action be taken " ಎಂದು ಇದೆ. ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರು ಪರೀಕ್ಷೆಮಾಡಿದರ . ಪರೀಕ್ಷೆಮಾಡುವಾಗ ಆಕೆ ಹೇಳಿದಳು : ಪೋಲೀಸರು ಏಟು ಹೊಡೆದಿದ್ದಾರೆ, ಆದ್ದರಿಂದ ನನಗೆ ಈ ಸರ್ಟಿಫಿಕೇಟ್ ಬೇಕು ಎಂದು. ಮುನಿಯಮ್ಮ ಪ್ರಥಮತಃ ಪೋಲೀಸಿನವರಮೇಲೆ ಹೇಳಿದ್ದು ಅಲ್ಲಿ. ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ನನಗೆ ಹೊಡೆದಿದ್ದಾನೆ, ಅದಕ್ಕೋಸ್ಕರ ನನಗೆ ಸರ್ಟಿಫಿಕೇಟ್ ಬೇಕು ಎಂದು ತಿಳಿಸಿದಳು. ಡಾಕ್ಟರು ಪರೀಕ್ಷೆ ಮಾಡಿದರು. ಗಂಡಸು ಡಾಕ್ಟರು ಪರೀಕ್ಷೆ ಮಾಡಿದರು. ಒಂದು ಸರ್ಟಿಫಿಕೇಟ್ ಬರೆದು ಇನ್‌ಪೇಷಂಟ್ ಆಗುವ ಅವಶ್ಯಕತೆ ಇಲ್ಲ ಎಂದು ಹೇಳಿದರು. ಡಾಕ್ಟರು ಕೇಳುತ್ತಾರೆ: ಪೋಲೀಸಿನವರು ಹೊಡೆದಿದ್ದಾರೆ ಎಂದು ಹೇಳುತ್ತೀರಿ. ಲೇಡಿ ಡಾಕ್ಟರು ಏನಾದರೂ ಪರೀಕ್ಷೆಮಾಡಬೇಕಾಗಿದೆಯೆ ಎಂದು. ಅದಕ್ಕೆ ಮುನಿಯಮ್ಮ ಹೇಳುತ್ತಾಳೆ : ಲೇಡಿ ಡಾಕ್ಟರು ಪರೀಕ್ಷೆಮಾಡುವ ಪ್ರಮೇಯವಿಲ್ಲ. ನನಗೆ ಸರ್ಟಿಫಿಕೇಟ್ ಮಾತ್ರ ಬೇಕಾಗಿತ್ತು ; ಸರ್ಟಿಫಿಕೇಟ್ ಕೊಡಬೇಕು ಎಂದು. ಡಾ|| ಪಾರ್ಥಸಾರಥಿಯವರು ಕಳುಹಿಸಿದ ಚೀಟಿಯಮೇಲೆ ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರು ಈ ರೀತಿ ಬರೆಯುತ್ತಾರೆ.

" Examined. Minor bruises ಇವೆ. Lady Doctor examine ಮಾಡಬೇಕೇ ಎಂದಾಗ ಬೇಡ ಎಂದು ಹೇಳುತ್ತಾಳೆ.

ಈ ನೋಟ್ ಡಾಕ್ಟರು ಬರೆದು ಆಕೆಯ ಕೈಯಲ್ಲಿ ಕಳುಹಿಸಿದರು.

Sri C. K. RAJAIAH SETTY.—One small information, Sir. When somebody goes to the hospital for a certificate, will there be any entry in the Accidents Register, Sir ?

ಶ್ರೀ ಸಿ. ಎಂ. ಪೂಣಚ್ಚ.—ಇದನ್ನು ಈ ಮಾನ್ಯ ಸಭೆ ಗಮನಿಸಬೇಕು. ಡಾ|| ಪಾರ್ಥಸಾರಥಿಯವರು ಪತ್ರವನ್ನು ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರಿಗೆ ಕಳುಹಿಸಿದರು. ಡಾಕ್ಟರು ಒಡನೆ ಪರೀಕ್ಷೆಮಾಡಿದರು. ಡಾ|| ಪಾರ್ಥಸಾರಥಿಯವರ ಚೀಟಿಯಮೇಲೆ needful action ತೆಗೆದುಕೊಂಡು certificate ಕೊಟ್ಟಿದ್ದಾರೆ. ಈ ಚೀಟಿಯಲ್ಲಿ ತಮ್ಮ ಅಭಿಪ್ರಾಯವೇನು ಎನ್ನುವುದನ್ನು ಡಾಕ್ಟರು ಹೇಳಿ ಅದನ್ನು ಕಳುಹಿಸಿದ್ದಾರೆ. ಇದನ್ನು ಕೊಟ್ಟಿರುವುದು 18ನೆಯ ತಾರೀಖು 2½ ಘಂಟೆಗೆ ಅನಂತರ ಏನೇನೂ ವರ್ತಮಾನವಿಲ್ಲ. ಇಂತಹ ವಿಷಯ ಉದ್ಭವಿಸಬಹುದು ಎಂಬ ಊಹೆಯೂ ಯಾರ ಮನಸ್ಸಿಗೂ ಹೊಳೆಯಲಿಲ್ಲ. ಅಲ್ಲಿಂದ 21ನೆಯ ತಾರೀಖಿನಲ್ಲಿ ನಮಗೆ ಒಂದು ಅರ್ಜಿ ಬಂತು. ಅದಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿತ್ತು. Probably it was posted on the 20th. It was posted at Bangalore. ಆ ಅರ್ಜಿಯಲ್ಲಿ ಪೋಲೀಸಿನವರನೇಕರು ಅತ್ಯಾಚಾರ ಮಾಡಿದರು, ಅಲ್ಲದೆ ನನಗೆ ಮಾನಭಂಗ ಮಾಡಿದರು, ಕೇಡು ಮಾಡಿದರು, ಹೊಡೆತ ಹೊಡೆದಿದ್ದಾರೆ, ಇದನ್ನು ಒಡನೆ ಚೆನ್ನಾಗಿ ತನಿಖೆಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ವಿಶದವಾಗಿ ಬರೆದಿದ್ದಾರೆ. ಅದನ್ನೂ ಕೂಡ ಒಡನೆ ತನಿಖೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ವಿಚಾರ ಮಾಡಲಾಯಿತು; ಅಂಥಾದ್ದೇನೂ ನಡೆದಿಲ್ಲವೆಂದು ತಿಳಿಯಬಂತು.

ಆಮೇಲೆ ಶೇಷಾದ್ರಿಪುರದ ಪೋಲೀಸು ಸ್ಟೇಷನ್ ವಿಚಾರ ತಿಳಿದುಕೊಳ್ಳಬೇಕು. ಶೇಷಾದ್ರಿಪುರಂ ಪೋಲೀಸು ಸ್ಟೇಷನ್ ನಮ್ಮ ಪಟ್ಟಣದ ಒಂದು ಮುಖ್ಯ ಸೆಂಟರ್‌ನಲ್ಲಿ ಒಂದು ಬಾಡಿಗೆಮನೆಯಲ್ಲಿದೆ. ಅದು ಪಟ್ಟಣದ ಜನ ನಿಬಿಡವಾದ ಒಂದು ಪ್ರದೇಶದಲ್ಲಿರುವುದು. ಅಲ್ಲಿ ನಾಲ್ಕು ಜನ ಆಫೀಸರುಗಳು ಕೆಲಸಮಾಡುತ್ತಾರೆ. ಕ್ರೈಂ ಬ್ರಾಂಚ್, ಲಾ ಅಂಡ್ ಆರ್ಡರ್ ಬ್ರಾಂಚ್ ಮತ್ತು ಇನ್ನೊಂದು ಇವೆ, ಇನ್ಸ್‌ಪೆಕ್ಟರಿದ್ದಾರೆ, ನಾಲ್ಕು ರೂಮುಗಳಿವೆ, ಪ್ರತಿಯೊಂದು ಕಡೆಯೂ ಆಫೀಸರುಗಳು ಕೆಲಸಮಾಡುತ್ತಿರುತ್ತಾರೆ, ಯಾವ ಸಮಯದಲ್ಲಾದರೂ ಕಡಮೆಯೆಂದರೆ 10-17 ಕಾನ್ಸ್‌ಟೇಬಲ್ಲುಗಳು ಇದ್ದೇ ಇರುತ್ತಾರೆ, ಕೆಲವರು ಬರುತ್ತಲೂ ಹೋಗುತ್ತಲೂ ಇರುತ್ತಾರೆ, ಬಹಳ busy place, ಬಸ್‌ಸ್ಟ್ಯಾಂಡ್ ವಗೈರೆ ಸುತ್ತಾ ಆವರಿಸಿಕೊಂಡಿವೆ. ಅಲ್ಲಿ ಕ್ರೈಂ ಬ್ರಾಂಚ್ ಸಬ್ ಇನ್ಸ್‌ಪೆಕ್ಟರು ಮತ್ತು ಲಾ ಅಂಡ್ ಆರ್ಡರ್ ಬ್ರಾಂಚ್ ಸಬ್ ಇನ್ಸ್‌ಪೆಕ್ಟರು ಇರುತ್ತಾರೆ. ಮಧ್ಯೆ ಒಂದು ಸೆಂಟ್ರಲ್‌ಹಾಲ್ ಇದೆ. ಅಂಥಕಡೆ ಇಂಥ ಒಂದು ಅತ್ಯಾಚಾರ ನಡೆಯುವ ಪ್ರಮೇಯಕೂಡ ಅಸಂಭವ ಎಂದು ಆ ಪೋಲೀಸ್‌ಸ್ಟೇಷನ್ ನೋಡಿದವರೇ ಹೇಳಬಹುದು. It is one of the busiest centres. ಟ್ರಾಫಿಕ್, ಲಾ ಅಂಡ್ ಆರ್ಡರ್, ಕ್ರೈಂ—ಇವುಗಳಿಗೆ ಸಂಬಂಧಪಟ್ಟ ಬ್ರಾಂಚುಗಳು ಬೇರೆ ಇದ್ದು, ಅದಕ್ಕೆ ಸಂಬಂಧಪಟ್ಟ ಕ್ಲಾರ್ಕುಗಳು, ದಫೇದಾರರು ಫರ್ಮಾನೆಂಟಾಗಿ ಕೆಲಸಮಾಡುತ್ತಿರುತ್ತಾರೆ.

ಡಾ|| ಟಿ. ಪಾರ್ಥಸಾರಥಿ.—24 ಗಂಟೆ ಹೊತ್ತೂ ಮಾಡುತ್ತಲೇ ಇರುತ್ತಾರೆಯೆ!

ಶ್ರೀ ಸಿ. ಎಂ. ಪೂಣಚ್ಚ.—ಆ ದಿವಸ particularly on the 17th ಸಬ್-ಇನ್ಸ್‌ಪೆಕ್ಟರು ರಾತ್ರಿ 12 ಗಂಟೆಯವರೆಗೂ ಇದ್ದರು. ಆಮೇಲೆ ಸಬ್-ಇನ್ಸ್‌ಪೆಕ್ಟರಮೇಲೆ ಆಪಾದನೆ ಹೇಳಿದರು, ಅವರಿಗೆ ಕೆ. ಜಿ. ಎಫ್. ನಲ್ಲಿ ಶಿಕ್ಷೆಆಗಿ ಡಿಮೋಟ್ ಮಾಡಿ ಕಳುಹಿಸಿದ್ದಾರೆ ಎಂದು ಅದನ್ನು ವಿಚಾರಮಾಡಲಾಯಿತು. ಕೋರಾರದಲ್ಲಿ ಅವರಿರುವಾಗ ಒಂದು ಕೇಸು ಬಂತು. ಕೇಸು ರಿಜಿಸ್ಟರಾಗಲಿಲ್ಲ. ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಿ ಇನ್‌ವೆಸ್ಟಿಗೇಷನ್ ಆಗಿ 176ನೆಯ ಸೆಕ್ಷನ್ ಪ್ರಕಾರ ಮಾಡಬೇಕೆಂದು ಕೋರ್ಟಿಗೆ ಹೋಯಿತು. ಆ ಆಪಾದನೆಯಮೇಲೆ ಆ ಸಬ್-ಇನ್ಸ್‌ಪೆಕ್ಟರನ್ನು ಜವಾಬ್ದಾರರನ್ನಾಗಿ ಮಾಡಿದರು. ನಿಜ. ಹಾಗೆ ಶಿಕ್ಷೆ ಮಾಡಿದ ಮೇಲೆ ಪುನಃ ಅಪೀಲನಲ್ಲಿ ಆ ಶಿಕ್ಷೆ ವಜಾಆದುದರ ಮೇಲೆ ಅವರನ್ನು ಮತ್ತೆ ಸಬ್-ಇನ್ಸ್‌ಪೆಕ್ಟರ್ ಮಾಡಿದರು. ಏಕೆ ಅದನ್ನು ಹೇಳುವುದು ಎಂದರೆ, ಆ ಸಬ್-ಇನ್ಸ್‌ಪೆಕ್ಟರು ಬಹಳ ಭಯಸ್ತರು, ಒಂದುಸಲ ಶಿಕ್ಷೆ ಅನುಭವಿಸಿರುವುದರಿಂದ, ಮೊನ್ನೆತಾನೆ ಶಿಕ್ಷೆ ಆಗಿದ್ದುದರಿಂದ ಭಯದಿಂದ ಇರುತ್ತಾರೆ. ಒಂದುಸಲ ಪೆಟ್ಟಾಗಿರುವುದರಿಂದ ಅವಿವೇಕದಿಂದ ವರ್ತಿಸುವ ಮನೋಪ್ರವೃತ್ತಿ ಅವರಿಗಿರುವುದು ಸ್ವಲ್ಪ ದುರ್ಲಭ. ಇದನ್ನು ಆಲೋಚನೆಮಾಡಬೇಕು. ಅಲ್ಲದೆ ಸಬ್-ಇನ್ಸ್‌ಪೆಕ್ಟರಮೇಲೆ ಅತ್ಯಾಚಾರಮಾಡಿದರೆಂದು ಪುಕಾರು ಎಲ್ಲೂ ಇಲ್ಲ. ಆ ಸಬ್-ಇನ್ಸ್‌ಪೆಕ್ಟರು ರಾತ್ರಿ 12 ಗಂಟೆಯವರೆಗೂ ಅಲ್ಲಿದ್ದರು. ರಾತ್ರಿ 12 ಗಂಟೆಯವರೆಗೂ ವಿಚಾರಣೆ ನಡೆದಿರುವಾಗ, ಅಲ್ಲಿ ಬೇಕಾದಷ್ಟು ಸಿಬ್ಬಂದಿಯಿರುವಾಗ ಮುನಿಯಮ್ಮನನ್ನು ಕರೆದುಕೊಂಡುಹೋಗಿ ಪ್ರತ್ಯೇಕವಾಗಿ ಅತ್ಯಾಚಾರ ಅಲ್ಲಿ ನಡೆಸಿದರೆಂದು ಹೇಳುವುದು ನಿಜವಾಗಿಯೂ ಸತ್ಯಕ್ಕೆ ಬಹಳ ದೂರವಾದ ವಿಷಯ, ಅಸಾಧ್ಯವಾದ ವಿಷಯ. ಮಾನ್ಯ ಸದಸ್ಯರಿಗೆ ಸ್ವಲ್ಪ ಅರಿವಿದ್ದರೆ, ನಿಧಾನವಾಗಿ ಆಲೋಚಿಸಿದರೆ ಮನವರಿಕೆಯಾಗುತ್ತದೆ. 21ನೆಯ ತಾರೀಖು ಅರ್ಜಿ ಬಂದು ಅದನ್ನು ಪರಿಶೀಲಿಸಲಾಯಿತು. ಪರಿಶೀಲಿಸಿ ನೋಡುವಾಗ ಏನೇನೂ ಆಪಾದನೆಯಲ್ಲಿ ತಿರುಳಿಲ್ಲವೆಂದು ಗೊತ್ತಾಯಿತು, 17ನೆಯ ತಾರೀಖಿನಲ್ಲಿ ಹರಡಿದ ಸುದ್ದಿ ಶುದ್ಧ ಸುಳ್ಳು. ಯಾವ ಉದ್ದೇಶದಿಂದ ಹೀಗೆ ಸುಳ್ಳು ಸುದ್ದಿ ಪ್ರಚಾರ ನಡೆಯಿತೆಂಬುದು ಹೇಳುವುದಕ್ಕೆ ಬರುವುದಿಲ್ಲ.

ಡಾ|| ಟಿ. ಪಾರ್ಥಸಾರಥಿಯವರು ಈ ವಿಷಯದಲ್ಲಿ ಬಹಳ ಆಸಕ್ತಿ ವಹಿಸಿದ್ದಾರೆ, ಕನಿಕರಪಟ್ಟು ಹೆಂಗಸಿನ ಸಂಕಟನೋಡಿ ಮನಸೊಂದು ಚೀಟಿ ಕೊಟ್ಟಿದ್ದಾರೆ. ಬಹುಶಃ ಅವರು ಪರೀಕ್ಷೆ ಮಾಡಬಹುದಾಗಿತ್ತು ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಏನೋ ಸ್ವಲ್ಪ ಅನುಕೂಲಸ್ಥಿತಿಯಲ್ಲಿ ಇದ್ದಿದ್ದರೆ ಅವರು ಸರಿಯಾಗಿ ಪರೀಕ್ಷೆಮಾಡುತ್ತಿದ್ದರು, ಪಾಪ, ಮುನಿಯಮ್ಮ ಬಡವಳಾದ್ದರಿಂದ ಚೀಟಿಮಾತ್ರ ಕೊಟ್ಟು ಕಳುಹಿಸಿದರೋ ಏನೋ ಎಂದು ಜನ ಅಂದುಕೊಳ್ಳುತ್ತಿದ್ದರು. ಅದು ಹಾಗೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ.

Dr. T. PARTHASARATHY.—It is an allegation against me and it should be expunged.

Sri J. B. MALLARADHYA.—I am one of those families in Bangalore who is under the protection of Dr. Parthasarathy. My Hon'ble friend has built up a hightype of reputation as a Doctor in the whole of Bangalore City. He is known to be the friend of the poor and the rich alike. There are thousands of patients on whom he attends day and night. I know even of instances where he has paid for medicine and food. To make an allegation against such a

person, I am sorry to say that—possibly the Hon'ble Minister is misinformed. I should like the Home Minister to withdraw his remarks. The Doctor's character and professional integrity are of a high order. To make an allegation against such a person is, I think, very inappropriate and we from this side make a strong protest.

Sri G. VENKATAI GOWDA (Palaiyam).—The Hon'ble Minister says that 'other people say'. What other people say is only a hearsay and it should not find a place in on the record.

Sri T. SUBRAMANYA.—I have personally known Dr. T. Parthasarathy. I know his method of practice. I know the number of patients he treats. All that I submit to this House is, the Minister has been very uncharitable in believing a statement which he has heard from others.

Mr. SPEAKER.—So far as the record is concerned, I am sorry I cannot do anything. But I can understand the feelings of the Hon'ble Member including that of the Doctor. I uphold what the Hon'ble Member Sri T. Subramanya has stated just now. That is a very relevant statement and that should be borne in mind by the Hon'ble Minister. Beyond that I cannot help because the statement made by the Hon'ble Minister is not such as to order for its elimination.

Sri J. B. MALLARADHYA.—I request him to at least withdraw it.

ಅಧ್ಯಕ್ಷರು.—ಅದನ್ನು withdraw ಮಾಡುವುದು, ಬಿಡುವುದು ಅವರ ಕರ್ತವ್ಯ, ಅದನ್ನು ನಾನು ಹೇಳಲಾರೆ. ಈಗ protest ಮಾಡಿದ್ದಾರೆ, misinformed ಎಂದು ಹೇಳಿದ್ದಾರೆ, ಅಷ್ಟು ಸಾಕು.

Sri J. B. MALLARADHYA.—I appeal to him.

Sri K. KENCHAPPA (Hiriyur).—I believe that the statement made by the Hon'ble Minister amounts to an insinuation in the sense that when the Minister stated that because Smt. Muniamma happened to be a woman with not sufficient means, the doctor could not have given a certificate. That is how the statement goes to show. That means the doctor who is an Hon'ble Member of this House is not in the habit of helping the poor people and even though the doctor has seen a laudable cause. This amounts to insinuation and has to be removed from the records.

Mr. SPEAKER.—I have given a ruling. ನಾನು ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಕೇಳಿದ್ದೇನೆ. ಮತ್ತೆ ಯಾರೂ ಪ್ರಶ್ನೆ ಮಾಡಬೇಕಾದ ಆವಶ್ಯಕತೆಯಿಲ್ಲ. ರಿಕಾರ್ಡಾಗಿರುವ ವಿಷಯದ ಬಗ್ಗೆ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಶ್ರೀ ಟಿ. ಸುಬ್ರಹ್ಮಣ್ಯರವರು ವಿಚಾರ ಹೇಳಿದ್ದಾರೆ, ಇನ್ನು ಕೆಲವರು ಪ್ರೊಟೆಸ್ಟ್ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ಮೇಲೆ ಮೇಲೆ ಈರೀತಿ ಅನೇಕರು ಕೇಳುವುದು, ಅದಕ್ಕೆ ಪ್ರತ್ಯುತ್ತರ ಹೇಳುವುದು ಇಲ್ಲಿಗೆ ಬಿಡಬೇಕು.

Dr. T. PARTHASARATHY.—If he is a sportsman, he must yield to me.

Sri C. M. POONACHA.—I am sorry I cannot yield. What I was mentioning was: 21ನೆಯ ತಾರೀಖಿನ ದಿವಸ ಒಂದು ಪಿಟಿಷನ್ ಬಂತು. ಹಾಗು ಅದನ್ನು ವಿಚಾರಮಾಡಲಾಯಿತು. 17ನೆಯ ತಾರೀಖಿನ ದಿವಸ ಪೋಲೀಸ್ ಸ್ಟೇಷನ್‌ನಲ್ಲಿ ಯಾವ ರೀತಿ ಕೆಲಸ ನಡೆಯಿತು ಎಂಬುದಕ್ಕೆ ನನ್ನ ಹತ್ತಿರ ದಾಖಲೆ ಇದೆ. ಈ ಆಪಾದನೆ ಸರಿಯಾಗಿಲ್ಲವೆಂದು ವಿಚಾರಣೆ ಮಾಡಿದ ಮೇಲೆ ತಿಳಿಯಿತು. 24ನೆಯ ತಾರೀಖಿನವರೆಗೆ ಯಾವುದೇ ತರದ ಮಾತುಗಳೂ ನಡೆಯಲಿಲ್ಲ. ಇಂಥ ಒಂದು ಸಂದರ್ಭವಿರುವಾಗ ನಾನು ಡಾಕ್ಟರ್ ಪಾರ್ಥಸಾರಥಿಯವರನ್ನು ಕೇಳುತ್ತೇನೆ. ಈ ವಿಷಯ ಗಮನಕ್ಕೆ ಬಂದ ನಂತರ 18ನೆಯ ತಾರೀಖಿನಿಂದ 21ನೆಯ ತಾರೀಖಿನವರೆಗೆ ಅವರು ಈ ವಿಷಯ ತಿಳಿದಿದ್ದರು,- ಅವರು ಚೀಟಿ ಕೊಟ್ಟಿದ್ದರು, ಪರಿಶೀಲನೆ ಮಾಡಿದ್ದರು— ಆ ಕಾಲದಲ್ಲಿ ಕ್ರೌರ್ಯ ನಡೆದದ್ದನ್ನು ನನಗೂ ಒಂದು ಮಾತು ಅವರು ತಿಳಿಸಬೇಕಾಗಿತ್ತು. ಇನ್ನೊಂದು ವಿಷಯ ಹೇಳುತ್ತೇನೆ. ಏಕೆಂದರೆ ಆಗ್ಗೆ ಏನೇನೂ ಆಗಿಲ್ಲ. ಇಂಥ ದುಷ್ಟ ಕ್ರೌರ್ಯ ನಡೆದಿದ್ದರೆ ಫೋನ್ ಮುಖಾಂತರವಾಗಲಿ ಅವರು ನನಗೆ ತಿಳುವಳಿಕೆ ಕೊಟ್ಟಿದ್ದರೆ ಸೂಕ್ತ ಕ್ರಮ ತಗೆದುಕೊಳ್ಳಲು ಅನುಕೂಲವಾಗುತ್ತಿತ್ತು. 24ನೆಯ ತಾರೀಖಿನ ದಿನ ಜ್ವರ ಹೆಚ್ಚಾಗಿ ಮುನಿಯಮ್ಮ ವಿಕ್ಟೋರಿಯಾ ಆಸ್ಪತ್ರೆಗೆ ಹೋದಳು.

ಡಾ॥ ಟಿ. ಪಾರ್ಥಸಾರಥಿ.—18ನೆಯ ತಾರೀಖಿನ ದಿನ ಆಸ್ಪತ್ರೆಗೆ ಕಳುಹಿಸಿದ ಮೇಲೆ ನನ್ನ ಬಳಿಗೆ ಅವಳು ಮತ್ತೆ ಬರಲೇ ಇಲ್ಲ. ಸರ್ಟಿಫಿಕೇಟ್ ನನಗೆ ಕೊಡಲು ಬರುವುದಿಲ್ಲವೆಂದು ನಾನು ಮ್ಯಾಜಿಸ್ಟ್ರೇಟರ ಮುಂದೆ ಸಹ ಆ ರೀತಿ ಹೇಳಿದ್ದೇನೆ. 28ನೆಯ ತಾರೀಖಿನ ದಿನ ಅಸೆಂಬ್ಲಿಗೆ ಬಂದಾಗ ಅವಳು ಸತ್ತದ್ದು ನನಗೆ ಗೊತ್ತಾಯಿತು. ಮೈಸೂರಿನಲ್ಲಿ ಕಾನೂನಿಗೆ ಅನುಗುಣವಾದ ಆಡಳಿತವಿದೆಯಲ್ಲ ಎಂದು ನಾನು ಮಂತ್ರಿಗಳಿಗೆ ಹೇಳಬೇಕಾದ್ದಿಲ್ಲ ಎಂದುಕೊಂಡು ಹೇಳಲಿಲ್ಲ. ಇನ್ನು ನಾನು ಆಕೆಯನ್ನು ಪರೀಕ್ಷಿಸಿ ಸರ್ಟಿಫಿಕೇಟ್ ಕೊಡುವ ವಿಷಯ. ನಾನು ಪ್ರೈವೇಟ್ ಡಾಕ್ಟರ್ ಆದ್ದರಿಂದ ಕ್ರಿಮಿನಲ್ ಅಸಾಲ್ಟ್ ಸರ್ಟಿಫಿಕೇಟ್ ಕೊಡುವಂತಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ಆ ರೀತಿ ಮೆಡಿಕಲ್ ಸರ್ಟಿಫಿಕೇಟ್ಸ್ ಕೊಡಲು ಬರುವುದಿಲ್ಲ ಎಂಬುದನ್ನು ನಾನೂ ತಿಳಿದುಕೊಂಡಿದ್ದೇನೆ.

Sri V. P. DEENADAYALU NAIDU (Cubbonpet).—I rise to a point of order. Dr. Parthasarathy said just now that while quoting something, he had said the same thing before some Magistrate. The enquiry is not completed. Can we allow such a statement to be made on the floor of the Assembly as to what he said before the Magistrate when the enquiry is not completed ?

Mr. SPEAKER.—I could not understand what the point of order is at all. There is no point of order.

Sri V. P. DEENADAYALU NAIDU.—Can he make such a statement here when the enquiry before the Magistrate is not completed ?

Mr. SPEAKER.—He is not a trial Magistrate; he is not a court at all. That ruling has been given. When he makes an enquiry under section 176 of the Cr.P.C. it is not a court and there is no adjudication involved in that. The Hon'ble Member may refer to it. I do not see any fault.

ಶ್ರೀ ಸಿ. ಎಂ. ಪೂಣಚ್ಚ.—ನಾನು ಈ ಮೊದಲೇ ಹೇಳಿದ ಹಾಗೆ 18ನೆಯ ತಾರೀಖಿನಿಂದ 24ನೆಯ ತಾರೀಖಿನವರೆಗೆ ಏನೇನೂ ವರ್ತಮಾನವಿಲ್ಲ. ಪ್ರಥಮ ದಿವಸದಲ್ಲಿಯೇ ಇಂಥಾ ದುಷ್ಟ ಕಾರ್ಯ ನಡೆದದ್ದೇ ಆಗಿದ್ದರೆ 24ನೆಯ ತಾರೀಖಿನಿಂದ 28ರ ವರೆಗೆ ಏನೇನೂ ವರ್ತಮಾನವಿಲ್ಲ. ಯಾರೂ ಹೇಳಲಿಲ್ಲ ದುಷ್ಟ ಕಾರ್ಯ ನಡೆದದ್ದನ್ನು ಡಾಕ್ಟರ್ ಪಾರ್ಥಸಾರಥಿಯವರಿಗೆ ಮೊರೆ ಇಟ್ಟದ್ದನ್ನು ಅನಂತರ ಯಾರೂ ಏನೂ ಹೇಳಲಿಲ್ಲ, ಯಾವ ರೀತಿಯ ಪಾತಕತೆಯೂ ನಡೆಯಲಿಲ್ಲ. ಯಾವ ಆಪಾದನೆಯೂ ಇರಲಿಲ್ಲ. ಡಾಕ್ಟರ್ ಪಾರ್ಥಸಾರಥಿಯವರಿಗೂ ಸಹ ಈ ವಿಷಯ 28ನೆಯ ತಾರೀಖಿನ ದಿನ ತಿಳಿದದ್ದು. 24ನೆಯ ತಾರೀಖಿನ ದಿನ ಜ್ವರ ಬಂದದ್ದರಿಂದ ಆಸ್ಪತ್ರೆಗೆ ಹೋಗಲು ಜ್ವರ ಜಾಸ್ತಿ ಇದ್ದುದರಿಂದ indoor patient ಆಗಿರಬೇಕೆಂದು ಡಾಕ್ಟರರ ಸಲಹೆ ಪ್ರಕಾರ ಆಸ್ಪತ್ರೆಯಲ್ಲಿ admit ಮಾಡಿದರು. ಒಬ್ಬ ವಯಸ್ಸಾದ ಹೆಂಗಸು, ಬಹುತರವಾಗಿ ಅವಳ ತಾಯಿಯಾಗಿರಬಹುದು, ಅವಳ ಹತ್ತಿರ ಚಿಕಿತ್ಸೆ ನಡೆದಾಗ ಸಹಾಯ ಮಾಡಲು ವಾರ್ಡಿನಲ್ಲಿದ್ದಳು. 24 ಮತ್ತು 25—ಎರಡೂ ದಿವಸ ಮುನಿಯಮ್ಮನಿಗೆ ಸರಿಯಾಗಿ ಪ್ರಜ್ಞೆ ಇತ್ತು. 102 ರಿಂದ 103ರ ವರೆಗೆ ಜ್ವರ ಏರುತ್ತಾ ಇತ್ತು. ಅವಳ ತಾಯಿಯವರಾಗಲಿ ಮುನಿಯಮ್ಮ ಆಗಲಿ ಈ ಆಪಾದನೆಯ ವಿಷಯದ ಬಗ್ಗೆ ಪಿಟ್ಟೆಂದು ಮಾತನಾಡಲಿಲ್ಲ. 26 ಮತ್ತು 27ನೆಯ ತಾರೀಖಿಗೆ ಜ್ವರ ಜಾಸ್ತಿಯಾಗಿ ಅವಳು ಡಿಲಿರಿಯಸ್ ಕಂಡೀಷನ್‌ನಲ್ಲಿ ಇದ್ದಳು. 28ನೆಯ ತಾರೀಖಿನ ದಿನ ರಾತ್ರಿ ಅವಳು ಮೃತಪಟ್ಟಳು. 28ನೆಯ ತಾರೀಖಿನ ದಿನ ಈ ಸಭೆ ಸೇರುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಡಾಕ್ಟರ್ ಪಾರ್ಥಸಾರಥಿಯವರು ಒಂದು ಅರ್ಜಿಯನ್ನು ನನಗೆ ಕೊಟ್ಟರು. ಪೋಲೀಸರ ಅತ್ಯಾಚಾರದ ಮೂಲಕ ಮುನಿಯಮ್ಮ ಸತ್ತಿದ್ದಾಳೆಂದು ಹೇಳಿ, ಡಾಕ್ಟರ್ ಪಾರ್ಥಸಾರಥಿಯವರು, 'ಪೋಸ್ಟ್ ಮಾರ್ಟಮ್' ನಡೆಸಬೇಕು, ಜನತೆಯಲ್ಲಿ ಅವಳ ಮರಣದ ವಿಷಯದಲ್ಲಿ ತುಂಬ ಅಸಮಾಧಾನ ಉಂಟಾಗಿದೆ' ಯೆಂದು, ಬಂದು ಹೇಳಿದರು. ನಾನು ತತ್‌ಕ್ಷಣ ಈ ವಿಷಯಕ್ಕೆ ಗಮನ ಕೊಟ್ಟೆ. ಅವರು ಅರ್ಜಿ ಬರೆದು ಕೊಟ್ಟ ಮುಕ್ಕಾಲು ಗಂಟೆಯೊಳಗಾಗಿಯೇ ನಾನು ಇಲ್ಲಿಯೇ ಇರುವಾಗಲೇ ನನಗೆ ವರ್ತಮಾನ ಬಂತು; ಇಂಕ್ವೆಸ್ಟ್ ಮಾಡುತ್ತಾರೆ, ಪೋಸ್ಟ್ ಮಾರ್ಟೆಮ್ ಆಗುತ್ತದೆಂದು ನನಗೆ ತಿಳಿದು ಬಂತು. ಕಾನೂನು ಅನುಸಾರವಾಗಿ ಕ್ರಮ ನಡೆಸುತ್ತಾರೆಂದು ನನಗೆ ಪೋಲೀಸರಿಂದ ವರ್ತಮಾನ ಬಂತು.

Sri K. HANUMANTHAIYA.—May I know from the Minister as to what the doctors say with regard to the cause of death, namely, the name of the disease ?

Sri C. M. POONACHA.—That they have already given in their statement. They say that it is due to *toximia* that is caused by enteric type of fever. That is their report.

Dr. T. PARTHASARATHY.—You may take an expert opinion. If a doctor can diagnose enteric fever even in three days, I shall certainly leave off my profession.

Sri C. M. POONACHA.—He may claim to give an expert opinion because he is in the line. I cannot say; but however, I am basing my argument on the authority of the medical report I have with me and treatment given. ಪೋಸ್ಟ್ ಮಾರ್ಟೆಮ್ ಆಗಬೇಕೆಂದು ಹೇಳಿದರು. ಪೋಸ್ಟ್‌ಮಾರ್ಟೆಮ್ ಎಗ್ಜಾಮಿನೇಷನ್ ಆಗಿದೆ. ಡಾಕ್ಟರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅವರು ಒಳ್ಳೆ ಅನುಭವಪಡೆದಂಥಾ ಡಾಕ್ಟರುಗಳು. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಯಪಡಿಸುತ್ತೇನೆ. 28ನೆಯ ತಾರೀಖಿನ ದಿನ ಡಾಕ್ಟರ್ ಪಾರ್ಥಸಾರಥಿಯವರು ನನಗೆ ಅರ್ಜಿ ಒಪ್ಪಿಸಿದರು. ಇಂಕ್ವೆಸ್ಟ್ ಮಾಡಬೇಕು, ಪೋಸ್ಟ್ ಮಾರ್ಟೆಮ್ ಮಾಡಬೇಕು, ಪರಿಶೀಲನೆ ಮಾಡಬೇಕು ಎಂದು ನಾನು ತಿಳಿಸಿದೆ. ಏಕೆಂದರೆ ಮನಸ್ಸಿನಲ್ಲಿ ಯಾವುದೇ ತರದ ಸಂಶಯ ಉಳಿಯಬಾರದು. ಸಾಧಾರಣವಾಗಿ 3 ಅಥವಾ 3½ ಗಂಟೆಯ ಸುಮಾರಿಗೆ ಡಾಕ್ಟರ್ ಪಾರ್ಥಸಾರಥಿ, ಮಾನ್ಯ ಮಿತ್ರರಾದ ಜಾರ್ಜ್ ಹೂವರ್ ಮತ್ತು ನರಸಿಂಹನ್—ಇವರು ಆಸ್ಪತ್ರೆಗೆ ಹೋಗಿ ಎಲ್ಲಾ ವಿಷಯ ನೋಡಿದ್ದಾರೆ. ಇಂಕ್ವೆಸ್ಟ್ ಆಗಬೇಕು, ಪೋಸ್ಟ್‌ಮಾರ್ಟೆಮ್ ಆಗಬೇಕು ಎಂದು ಅರ್ಜಿ ಕೊಟ್ಟು, ಅದಕ್ಕೆ ಕ್ರಮ ತೆಗೆದುಕೊಂಡು ಮುಂದುವರಿಸಿ, ಡಾಕ್ಟರ ಏರ್ಪಾಡು ನಡೆದು, ಮ್ಯಾಜಿಸ್ಟ್ರೇಟರ ಏರ್ಪಾಡು ನಡೆದಿರುವಾಗ ಎಲ್ಲ ವಿಷಯವನ್ನೂ ಅವರು ಆ ಸ್ಥಳಕ್ಕೆ ಹೋಗಿ ನೋಡಿದ್ದಾರೆ. ಒಂದೇ ಒಂದು ವಿಷಯದಲ್ಲಿ ನನಗೆ ಸ್ವಲ್ಪ ಮನಸ್ಸಿಗೆ ಸಂಶಯ ಬಂತು. ನಾಲ್ಕು ಗಂಟೆಯ ಸಮಯಕ್ಕೆ ಡಿ.ಎಸ್.ಪಿ. ರೇವಣ್ಣನವರ ಕಡೆಗೆ ಅಲಸೂರಿಗೆ, ಈ ಮೂರು ಜನರೂ ಹೋದರು. ಅವರು "ಇದು ಸಾಧಾರಣವಾದ ವಿಷಯ. ಇದಕ್ಕೆ ಏತಕ್ಕೆ ಪೋಸ್ಟ್‌ಮಾರ್ಟಮ್; ಅವರ ಸಂಬಂಧಿಕರು ಬಹಳ ದುಃಖದಲ್ಲಿದ್ದಾರೆ, ಇದೆಲ್ಲಾ ಆಗಿ

ಮುಗಿಯುವ ಹೊತ್ತಿಗೆ ಶವ ವಾಸನೆ ಬರುತ್ತದೆ. ಪೋಸ್ಟ್ ಮಾರ್ಟಮ್ ಏತಕ್ಕೆ ? ಶವವನ್ನು ಕೊಟ್ಟು ಬಿಡಬಹುದು '' ಎಂದು ಹೇಳಿದರು.

ಡಾ|| ಟಿ. ಪಾರ್ಥಸಾರಥಿ.—ನಾವಲ್ಲ ; ಅವರು ಸಲಹೆ ಕೊಟ್ಟಿದ್ದಾರೆ.

ಒಬ್ಬ ಸದಸ್ಯರು.—ಮೂರು ಜನರೂ ಜೊತೆಯಲ್ಲೇ ಇದ್ದರು.

ಶ್ರೀ.ಸಿ. ಎಂ. ಪೂಣಚ್ಚ.—ಕ್ರಿಮಿನಲ್ ಲಾಯರ್ ಆಗಿರುವ ಸದಸ್ಯರು ಇದ್ದಾರೆ; ಅವರಿಗೇ ಒಪ್ಪಿಸ ಬೇಕಾಗುತ್ತದೆ. ಈ ವಿಷಯ ಬಹಳ ಮುಖ್ಯ ವಾದದ್ದು. ಒಂದು ಕಡೆ, ಜನ ಮನಸ್ಸಿನಲ್ಲಿ ಬಹಳ ನೊಂದುಕೊಂಡಿದ್ದಾರೆ, ಪೋಸ್ಟ್‌ಮಾರ್ಟಂ ಆಗ ಬೇಕು ಎಂದು ಪ್ರಬಲವಾಗಿ ಒತ್ತಾಯ ಮಾಡು ವುದು, ಮತ್ತೊಂದು ಕಡೆ ಮಾನ್ಯಮಿತ್ರರು ಮಾತು ಕತೆ ಆಡಿ, ಅದೆಲ್ಲಾ ಬೇಡಿ ಎಂದು ಹೇಳುವುದು. ಇದರಲ್ಲಿ ಏನೋ ಅಂತರ್ಯವಿದೆ. ಇದು ಬಹಳ ಚೋದ್ಯ ವಿಷಯ. ಇದನ್ನು ಸಾರ್ವಜನಿಕರು ತಿಳಿಯ ಬೇಕು. ಏತಕ್ಕೆಂದರೆ ಈ ಪ್ರಕಾರವಾಗಿ ಉದ್ದೇಶ ಪೂರ್ವಕವಾಗಿ ಪೋಲೀಸಿನವರ ಮೇಲೆ ಆರೋಪಣೆ ಯನ್ನು ಹೊರಿಸಬೇಕೆಂದು ನಡೆದಿದೆಯೋ ಏನೋ ಎಂದು ನನಗೆ ಸಂಶಯವಾಗಿದೆ. ಪೋಲೀಸ್ ಸೂಪರಿಂಟೆಂಡೆಂಟ್ ಹೇಳುತ್ತಾರೆ. 'ಕೊಡುವುದಕ್ಕೆ ಆಗುವುದಿಲ್ಲ, ಆರ್ಡರ್ಸ್ ಬಂದಿದೆ; ಪೋಸ್ಟ್ ಮಾರ್ಟಮ್ ಎಗ್ಜಾಮಿನೇಷನ್ ಆಗಿ ಮುಗಿದ ಮೇಲೆಯೇ ಶವವನ್ನು ಕೊಡುವುದು ' ಎಂದು.

ಶ್ರೀ ಟಿ. ಸುಬ್ರಮಣ್ಯ.—ಶ್ರೀ ರೇವಣ್ಣನವರು ಯಾವಾಗ ರಿಪೋರ್ಟ್ ಮಾಡಿದ್ದಾರೆ ? ಡಾ|| ಪಾರ್ಥ ಸಾರಥಿಯವರು ಮತ್ತು ಹೂವರ್ ಬಂದು ಏತಕ್ಕೋ ಸ್ಕರ ಪೋಸ್ಟ್‌ಮಾರ್ಟಮ್ ಮಾಡುತ್ತೀರಿ ಎಂದು ಕೇಳಿ ದರೆನ್ನುವುದನ್ನು ಯಾವಾಗ ರಿಪೋರ್ಟ್ ಮಾಡಿದರು ?

ಶ್ರೀ ಸಿ. ಎಂ. ಪೂಣಚ್ಚ.—ಖಚಿತವಾಗಿದೆ. ಲಿಖಿತ ಮೂಲಕ ಕೊಟ್ಟಿದ್ದಾರೆ, ನೋಡಬೇಕು.

ಡಾ|| ಟಿ. ಪಾರ್ಥಸಾರಥಿ.—ಪೋಲೀಸಿನವರು ಹರಿಶ್ಚಂದ್ರರೆಂದು ಹೇಳಿದರೆ ಹೇಗೆ ಸಾಧ್ಯ ?

ಶ್ರೀ ಸಿ. ಎಂ. ಪೂಣಚ್ಚ.—ಶ್ರೀ ಹೂವರ್ ಅವರು ಹಾಗೆ ಕೇಳಿದ್ದಾರೆಂದು ಒಪ್ಪಿದ್ದಾರೆ. ನಾನು ಈ ವಿಷಯವನ್ನು ಮಾನ್ಯ ಸಭೆಗೆ ಒಪ್ಪಿಸಿಬಿಡುತ್ತೇನೆ. ಯಾರೊಬ್ಬರ ಮೇಲೆ ಆಕ್ಷೇಪಣೆಯನ್ನು ಹೇಳುವ ಹಾಗಿಲ್ಲ. ಇಷ್ಟೊಂದು ಪ್ರಚೋದನೆಯನ್ನು ಉದ್ರೇಕ ರೂಪದಲ್ಲಿ ಹೊರಡಿಸಿ, ಅನಂತರ ಈ ಪ್ರಕಾರ ವಿದ್ಯ ಮಾನಗಳು ಸಭಾ ಸದಸ್ಯರಿಂದ ನಡೆಯಬೇಕಾದರೆ, ನನಗೆ ದುಃಖವಾಗುತ್ತದೆ. ಏತಕ್ಕೆಂದರೆ ಇದು ಪ್ರತಿ ಯೊಬ್ಬರ ಮನಸ್ಸನ್ನೂ ಕೆರಳಿಸಿದೆ. ಈ ವಿಷಯವನ್ನು ಬಹಳ ಶಾಂತತೆಯಿಂದ ಪ್ರಶಾಂತತೆಯಿಂದ ಆಲೋ ಚನೆ ಮಾಡಬೇಕು. ನನಗೆ ಮನಸ್ಸಿನಲ್ಲಿ ದುಃಖ ಇದೆ. ಏನೋ ಒಂದು ತರಹ ನಡೆದಿದೆ. ಪೋಲೀಸ್ ಸೂಪ ರಿಂಟೆಂಡೆಂಟ್‌ರು ಬಹುಶಃ ಶವ ಕೊಟ್ಟಿದ್ದರೆ ಏನು ಆಗಬಹುದಾಗಿತ್ತು ?

Sri T. SUBRAMANYA.—Before the Hon'ble Minister proceeds, there is a point of difference and it is this. The Hon'ble Minister said that Sri Revanna, District Superintendent of Police, wrote to him. On what date he wrote is not clear. I would like to request the Hon'ble Minister to search for that letter. It must be in that file. My information is that Sri Revanna wrote to the Minister or the authority concerned immediately. Therefore, it would be helpful for us to come to certain conclusions and definite conclusions if the letter is found out and read out to us.

Sri C. M. POONACHA.—I do not have the letter. But I have information on record. That particular point is not disputed.

ಆಮೇಲೆ ನಾಲ್ಕು ಗಂಟೆಯಮೇಲೆ ಶ್ರೀ ರೇವಣ್ಣ ನವರಲ್ಲಿಗೆ ಮೂವರು ಮಾನ್ಯ ಸದಸ್ಯರು ಹೋದರು.

ಡಾ|| ಟಿ. ಪಾರ್ಥಸಾರಥಿ.— ಪೋಸ್ಟ್‌ಮಾರ್ಟಮ್ ಮಾಡಿ ಎಂದು ಹೇಳುವುದಕ್ಕೆ ಹೋಗಿದ್ದರು. ಈ ತರಹ ತರೆಕೆಳಕು ಮಾಡುತ್ತಾರೆಂದು ನಂಬಿರಲಿಲ್ಲ. ನಾನು ಖಚಿತವಾಗಿ ಹೇಳುತ್ತೇನೆ, ಆ ತರಹ ವ್ಯವಹಾರ ಮಾಡಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ನೀವು ಏತಕ್ಕೆ ಹೋದಿರಿ ?

ಡಾ|| ಟಿ. ಪಾರ್ಥಸಾರಥಿ.— ಪೋಸ್ಟ್‌ಮಾರ್ಟಮ್ ಮಾಡಿ ಎಂದು ಹೇಳಿದ್ದಕ್ಕೆ. ತಾವೇ ಹೇಳಿದಿರಿ, 'ಡಿ.ಎಸ್. ಪಿ. ಕಾಂಟ್ಯಾಕ್ಟ್ ಮಾಡಿ' ಎಂದು.

Sri N. G. NARASIMHE GOWDA.—I raise a point of order.

Mr. SPEAKER.—You may raise a point of order. It may or may not be a point of order.

ಒಬ್ಬರು ಮಾತನಾಡುವ ಹೊತ್ತಿಗೆ ಇನ್ನೊಬ್ಬರು ಎದ್ದುಬಿಟ್ಟರೆ ಕನ್ಫ್ಯೂಷನ್ ಆಗುತ್ತದೆ. ಅವರು ಕುಳಿತಮೇಲೆ ಪಾಯಿಂಟ್ ಆಫ್ ಆರ್ಡರ್ ಆಗಲಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಪೋಸ್ಟ್‌ಮಾರ್ಟಂ ವಿಷಯ ದಲ್ಲಿ ಮೆಡಿಕಲ್ ಒಪಿನಿಯನ್ ಏನೆಂಬುದನ್ನು ಹೇಳಿ ದರು. ಈಗ ಮಂತ್ರಿಗಳು ಹೇಳುವ ರೀತಿಯಲ್ಲಿ ಆ ಮೆಡಿಕಲ್ ಒಪಿನಿಯನ್ ಪ್ರಕಾರ ಈ ಕೇಸು ಮರ್ಡರ್ ಆಗುವುದಿಲ್ಲ. ಮರ್ಡರ್ ಆಗದೆ ಇರುವುದರಿಂದ ಯಾವ ಆಧಾರದ ಮೇಲೆ, ಕ್ರಿಮಿನಲ್ ಕೋಡಿನ ಯಾವ ಸೆಕ್ಷನ್ ಪ್ರಕಾರ, ಎನ್‌ಕ್ವೈರಿ ಮಾಡುವುದಕ್ಕೆ ಅಧಿಕಾರ ಕೊಟ್ಟರು ?

ಅಧ್ಯಕ್ಷರು.—ಈಗ ನಮ್ಮ ಮುಂದೆ ಯಾವುದಾದರೂ ಪಾಯಿಂಟ್ ಆಫ್ ಆರ್ಡರ್ ಎತ್ತಬೇಕಾದರೆ ಅದು ಸಂಬಂಧಿಸಿದ ವಿಷಯದ ಮೇಲೆ ಇರಬೇಕು. ಈ ತರಹ ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಸ್ವಲ್ಪ ಸೀರಿಯಸ್ ನೋಟೀಸ್ ತೆಗೆದುಕೊಳ್ಳಬೇಕಾಗು ತ್ತದೆ. ಏನೋ ಒಂದು ವಿಷಯವನ್ನು ಕೇಳುವುದು ಇದ್ದರೆ ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

Sri K. PUTTASWAMY (Mysore).—Usually points of order are raised with reference to rules of procedure. Now I find points of order are raised somehow and anyhow and the time of the House is taken.

Mr. SPEAKER.—Points of order are raised with reference to certain subjects and certain matters which are going on here. I want the Hon'ble Members not to waste the time of the House like this and if they do it, I will have to take serious notice of it.

ಶ್ರೀ ಜಿ. ಎನ್. ಪುಟ್ಟಣ್ಣ.—ಡಿ.ಎಸ್. ಪಿ. ಗೋ ಮೇಲ್ಪಟ್ಟ ಅಧಿಕಾರಿಗಳಿಗೋ ಪೋಸ್ಟ್‌ಮಾರ್ಟಮ್ ಮಾಡಬೇಕು ಎಂದು ತಾವು ಹೇಳಿದಿರಿ ಎಂದು ಹೇಳಿದಂತೆ ಜ್ಞಾಪಕವಿದೆ. ಹಾಗಿದ್ದಮೇಲೆ ಅವರು ಈ ಮೆಂಬರುಗಳನ್ನು ಏತಕ್ಕೆ obey ಮಾಡಬೇಕು ?

ಶ್ರೀ ಸಿ. ಎಂ. ಪೂಣಚ್ಚ.—ಬಹುಶಃ obey ಮಾಡಿಬಿಟ್ಟಿದ್ದರೆ ಪರಿಸ್ಥಿತಿ ಏನು ಆಗುತ್ತಿತ್ತು ? ಶವವನ್ನು ತೆಗೆದುಕೊಂಡು ಹೋಗಿ ದಫನ್ ಮಾಡಿದ್ದರೆ ಏನಾಗುತ್ತಿತ್ತು ಎಂದು ನನ್ನಲ್ಲಿ ಪ್ರಶ್ನೆ ಹಾಕಿಕೊಂಡು ಆಲೋಚನೆ ಮಾಡುತ್ತಾ ಇರುವುದು. ಡಿ.ಎಸ್.ಪಿ. ಕಾರ್ಯಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಆರ್ಡರ್ ಆಗಿರುವುದು ಪ್ರತಿಯೊಬ್ಬರಿಗೂ ಗೊತ್ತಿದೆ. ಮೂರು ಜನಗಳು ಹೋಗಿರುವುದು ಈ ವಿಷಯದಲ್ಲಿ ನನಗೆ ಸಂಶಯ ಇದೆ. ನನಗಂತೂ ಸತ್ಯಾಂಶವನ್ನು ಬಯಲಿಗೆ ತರಬೇಕು ಎನ್ನುವ ದೃಷ್ಟಿಯಿಂದ ಇದು ಮಾಡಿದ್ದಲ್ಲ. ಯಾವುದಾದರೂ ಒಂದು ದೃಷ್ಟಿಯಿಂದ ಸಮಯವನ್ನು ಉಪಯೋಗಿಸಿ ಯಾವುದಾದರೂ ರೀತಿಯಲ್ಲಿ ಪೋಲಿಸಿನವರ ಮೇಲೆ ಆರೋಪಣೆಯನ್ನು ಹೊರಿಸಬೇಕು ಎಂದು ಮಾಡಿದಂಥ ವಿಷಯ ಎಂದು ತಿಳಿದುಕೊಂಡಿದ್ದೇನೆ.

3 P.M.

ಖಂಡಿತವಾಗಿ ಯಾವುದೇ ರುಜುವಾತು ತೆಗೆದುಕೊಂಡರೂ, ಯಾವುದೇ ದಾಖಲು ತೆಗೆದು ಕೊಂಡರೂ, ಪ್ರತಿಯೊಂದರಲ್ಲೂ ಸ್ಪಷ್ಟವಾಗಿ ಕಾಣುತ್ತದೆ, ಇದನ್ನು ಕೆಲವರು ಉದ್ದೇಶಪೂರ್ವಕವಾಗಿ ಪೋಲೀಸಿನವರ ಮೇಲೆ ಆಪಾದನೆ ಹೊರಿಸಬೇಕೆಂಬ ದೃಷ್ಟಿಯಿಂದ ಮಾಡಿದ್ದಾರೆ ಎಂದು. ಆ ದೃಷ್ಟಿಯಿಂದ ಸರ್ಕಾರದವರು ಬಹಳ ವ್ಯಸನಪಟ್ಟಿದ್ದಾರೆ. ಇದು ಹೇಗೆ ಬೆಳೆದು ಬಂದಿದೆ ಮತ್ತು ಯಾವರೀತಿ ಇಷ್ಟು ಪ್ರಚಾರಕ್ಕೆ ಬಂದಿದೆ ಎಂಬುದನ್ನು ತಿಳಿಯುವುದೇ ಕಷ್ಟವಾಗಿದೆ. ಮಾನ್ಯಸದಸ್ಯರು ಯಾವ ರೀತಿ ಇಲಾಖೆಯನ್ನೇ ದೂರಿದರು ಎಂಬ ವ್ಯಥೆ ನನಗೆ ಬಹಳವಾಗಿದೆ. ಸರ್ಕಾರದಲ್ಲಿ ಅಂಥಾದ್ದು ನಡೆಯಲಲ್ಲ. ಕೆಲವುವೇಳೆ ಏನಾದರೂ ಪೋಲೀಸಿನವರ ಮೇಲೆ ಆಪಾದನೆಗಳು ಬಂದುದರ ಸಲುವಾಗಿ ಅಂತಹ ಜನಗಳ ಮೇಲೆ ಎಷ್ಟೋಸಾರಿ ಸೂಕ್ತಕ್ರಮವನ್ನು ತೆಗೆದುಕೊಂಡಿದ್ದೇವೆ. ಹಿರಿಯ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಎಂದೂ ಹಿಂಜರಿದಿಲ್ಲ. ಇಲ್ಲದೇ ಇದ್ದುದನ್ನೆಲ್ಲಾ ಹೇಳಿ, ಇದನ್ನು ಇನ್ನೂ ದೀರ್ಘವಾಗಿ ವಿಚಾರಣೆ ಮಾಡಬೇಕೆಂದು ಹೇಳುವುದು ಬಹಳ ವ್ಯಸನಕರವಾದ ಸಂಗತಿ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಾನು ಮುಂಚಿತವಾಗಿಯೇ ಎಲ್ಲಾ ವಿಷಯಗಳನ್ನೂ ಸಭೆಯ ಮುಂದಿಡಬೇಕೆಂಬ ಉದ್ದೇಶವುಳ್ಳವನಾಗಿದ್ದೆ. ಆದರೆ ಕೆಲವು ನಿಬಂಧನೆಗಳಿಂದ ಮತ್ತು ಕೆಲವು ನಿಯಮಾವಳಿಗಳಿಂದ ಆ ವಿಷಯದಲ್ಲಿ ಮತ್ತೆ ಪುನಃ ಸ್ಪೀಕರ್ ಅವರ ರೂಲಿಂಗ್ ಆಗಬೇಕೆಂಬ ದೃಷ್ಟಿಯಿಂದ, ಈ ವಿಚಾರದ ಚರ್ಚೆಯನ್ನು ಮುಂದೆಹಾಕಲಾಯಿತು. ನಿಜವಾಗಿ ಮಾನ್ಯ ಸದಸ್ಯರಿಗೆ ನಾನು ದೈನ್ಯದಿಂದ ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಅಂತಹ ಅಕ್ರಮ, ಅಂತಹ ದೌರ್ಜನ್ಯ, ಅಂತಹ ದುಷ್ಟಕಾರ್ಯ ಯಾವುದೂ ನಡೆದಿಲ್ಲ. ಮಾನ್ಯ ಶ್ರೀಮಾನ್ ಹನುಮಂತಯ್ಯನವರು ಈ ವಿಚಾರವನ್ನು ಚೆನ್ನಾಗಿ ಪರಿಶೀಲನೆ ಮಾಡಬೇಕು ಎಂದು ಹೇಳುತ್ತಾರೆ.

ಒಬ್ಬ ಸದಸ್ಯರು.—ಇಲ್ಲದಿದ್ದರೆ, ಮುನಿಯಮ್ಮನ ಆತ್ಮ ತಮ್ಮನ್ನೇನಾದರೂ ಮಾಡೀತು !

ಶ್ರೀ ಸಿ. ಎಂ. ಪೂಣಚ್ಚ.—ನಾನು ಈ ವಿಚಾರದಲ್ಲಿ ಪ್ರತಿಯೊಂದು ಅಂಶವನ್ನೂ ಎಳ್ಳಷ್ಟೂ ಬಿಡದೆ ಆಲೋಚನೆಮಾಡಿದ್ದೇನೆ.

Sri K. HANUMANTHAIYA.—May I explain the matter ? Hon'ble Minister is under the impression that all of us are making personal allegation against him. I have a little experience of the administration. If he takes over all the responsibility of the Police Department from the Constable to the I.G., it is a responsibility which he cannot digest and which cannot be shouldered by anybody. Hon'ble Members of this House are asking for an impartial judiciary enquiry. The point is, the Police Department is under fire and if he depends upon the Department, it will not help to come to any conclusion. It is not he who is subject to the allegation. Therefore, all his speeches, very sincerely made, I grant, will not satisfy. It is that impartial judgment, where police will not sit in judgment but somebody else, which will satisfy your conscience as well as ours.

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ಪೋಲೀಸ್ ಜುಡಿಷಿಯಲ್ ಎನ್‌ಕ್ವೈರಿಗೆ ಏನಾದರೂ ಒಂದು ತರಹ ಆಧಾರ ಬೇಕು. ಆಧಾರವಿಲ್ಲದೆ ಸುಮ್ಮನೆ ಆರೋಪಣೆ ಹೊರಿಸುವುದಕ್ಕೋಸ್ಕರ ಜುಡಿಷಿಯಲ್ ಎನ್‌ಕ್ವೈರಿಗೆ ಹೋಗಬೇಕೆಂದು ಹೇಳಿದರೆ, ಅದರಲ್ಲಿ ತಿರುಳಿಲ್ಲ. ತಾವೆಲ್ಲರೂ ಅನುಭವವುಳ್ಳವರು. ಅಂಥಾದ್ದಕ್ಕೆ ಸಾಧ್ಯ ಕೊಡಕೂಡದು.

ಒಬ್ಬ ಸದಸ್ಯರು.—ಇಲ್ಲೇನಾದರೂ ಪ್ರೈಮಾಫೇಸಿ ಕೇಸಿರಬೇಕು.

Sri K. HANUMANTHAIYA.—There is. Please listen to us patiently. I asked, what was the name of the disease from which Muniamma died. You said it was enteric fever. Dr. Parthasarathy immediately stated that it was impossible in the medical history for any doctor to prove that a person could die within three days or diagnose within three days. That is a serious statement. It is enough for you to think over whether this should not be investigated.

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ನಾವು ವೈದ್ಯಕೀಯ ಸಲಹೆಯನ್ನು ಸಾಕಷ್ಟು ತೆಗೆದುಕೊಂಡಿದ್ದೇವೆ ಮತ್ತು ಡಾ|| ಪಾರ್ಥಸಾರಥಿಯವರದೇ ಕಡೆ

ಯಮಾತಲ್ಲ. ಈ ವಿಷಯವನ್ನು ಮೆಡಿಕಲ್‌ನಲ್ಲಿ ವಿಶೇಷ ಅನುಭವವಿದ್ದು, ಇಂತಹ ವಿಚಾರಗಳನ್ನು ಚೆನ್ನಾಗಿ ಅರಿತಂಥ ತಜ್ಞರು ಪರೀಕ್ಷಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಡಾ॥ ಪಾರ್ಥಸಾರಥಿಯವರು ಹೇಳಿದ್ದನ್ನು ಅವರು ಒಪ್ಪುವುದಿಲ್ಲ. ಡಾ॥ ಪಾರ್ಥಸಾರಥಿಯವರು, ತಜ್ಞರ ಅಭಿಪ್ರಾಯವನ್ನು "ಇಂಪಾಸಿಬಲ್" ಎಂದು ಅವರ ಅನುಭವದಿಂದ ಹೇಳಿಕೊಳ್ಳಬಹುದು. ಆದರೆ ಬೇರೆ ವಿಧದಲ್ಲಿ ಅದು ಅಲ್ಲ. ಇಂತಹ ಮರಣಗಳು ಕಾಯಿಲೆಗನುಗುಣವಾಗಿ ಸಂಭವಿಸಿವೆ. ಇವತ್ತೂ ನಡೆಯುತ್ತಿದೆ.

ಡಾ॥ ಟಿ. ಪಾರ್ಥಸಾರಥಿ.—ನಾನು ಮರಣದ ವಿಚಾರ ಹೇಳಲಿಲ್ಲ. ಎಂಕ್ವೈರಿ ಆಗಿದ್ದು ಕಾಯಿಲೆ ವಿಷಯವೇ ಎಂದು ಹೇಳಿದ್ದು.

ಶ್ರೀ ಸಿ. ಎಂ. ಪೂಣಚ್ಚ.—ಈ ವಿಷಯದಲ್ಲಿ ಪರಿಪೂರ್ಣವಾದ ಸಲಹೆಯನ್ನು ತಜ್ಞರಿಂದ ಹೊಂದಿದ್ದೇವೆ. ಇದರಲ್ಲಿ ಏನೂ ಸಂಶಯವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆಸ್ಪತ್ರೆಗೆ ಸೇರಿದಾಗ ಜ್ವರ ಬಂದು ಎಷ್ಟು ದಿವಸಗಳಾಗಿದ್ದುವು? ಡಾಕ್ಟರು ಹೇಳಿದ ಹಾಗೆ 3 ದಿನಗಳು ಆಗಿದ್ದರೆ ಎಂಟರಿಕ್ ಫೀವರ್ ಎಂಬುದನ್ನು ಮೂರುದಿನಗಳೊಳಗೆ ಗುಣ ಮಾಡುವುಕ್ಕಾಗುವುದಿಲ್ಲ. ಅಂದಮೇಲೆ ಜ್ವರ ಬಂದು ಮೂರುದಿನಗಳ ಮೇಲೆ ಆಸ್ಪತ್ರೆಗೆ ಹೋಗಿರಬಹುದು. ಇದರಿಂದ ಅಸ್ಪತ್ರೆಗೆ ಹೋದುದು, ಜ್ವರಬಂದುದು, ಎಲ್ಲವನ್ನೂ ಅವರ ಹಿಸ್ಟರಿ ಷೀಟನ್ನು ನೋಡಿದರೆ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಸಿ. ಎಂ. ಪೂಣಚ್ಚ.—ಅದೂ ಇದೆ. ಅದರಲ್ಲಿ ವಿಷಯಗಳು ವಿಶದವಾಗಿವೆ. ನಾನು ಈ ವಿಚಾರವನ್ನು ಶೀಘ್ರವಾಗಿ ಕೊನೆಗಾಣಿಸಬೇಕಾಗಿದೆ, ಯಾಕೆಂದರೆ ಈ ವಿಚಾರದ ಬಗ್ಗೆ ಬಹಳ ಸಮಯವನ್ನು ತೆಗೆದುಕೊಂಡಿದ್ದೇನೆ. ಈ ವಿಷಯಗಳನ್ನು ಸ್ವಲ್ಪ ಸರಿಯಾಗಿ ಪರಿಶೀಲನೆ ಮಾಡೋಣ. ಈಗಾಗಲೇ ಎಲ್ಲಾ ವಿಧದಲ್ಲೂ ಇದನ್ನು ಪರಿಶೀಲನೆ ಮಾಡಿದ್ದೇವೆ. ಮತ್ತೆ ಎಗ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟರ ಸ್ಟೇಟ್‌ಮೆಂಟನ್ನು ರಿಕಾರ್ಡ್ ಮಾಡಿದ್ದೇವೆ. ಅವರು ಪೋಲೀಸ್ ರಿಪೋರ್ಟಗಾಗಲಿ, ಮಲ್ಲೇಶ್ವರಂ ಆಸ್ಪತ್ರೆಯ ಲೇಡಿ ಡಾಕ್ಟರ್ ರಿಪೋರ್ಟಗಾಗಲಿ ಮನಸ್ಸು ಕೊಟ್ಟವರಲ್ಲ. ಅವರು ಇವರ್‍ಯಾರಿಗೂ ಸಂಬಂಧಪಟ್ಟವರಲ್ಲ; ಈ ಕೇಸಿನಲ್ಲಿ ಆಸಕ್ತಿವುಳ್ಳವರೂ ಅಲ್ಲ. ಅಲ್ಲದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ನಮ್ಮ ಡಾಕ್ಟರುಗಳಿಗೆ ಪೋಲೀಸಿನವರ ಮೇಲೆ ಬಂದಿರುವ ಆಪಾದನೆಯನ್ನು ಮುಚ್ಚಬೇಕೆಂಬ ಉದ್ದೇಶವಿಲ್ಲ. ಇಷ್ಟೇ ಅಲ್ಲದೆ ಅವತ್ತು ಶ್ರೀಮತಿ ಸರೋಜಮ್ಮ ಎಂಬಾಕೆ ಮುನಿಯಮ್ಮನನ್ನು ಕರೆದುಕೊಂಡು ಹೋದವರು ಊರಿನಲ್ಲಿ ಎರಡು ದಿವಸಗಳು ಮಾತ್ರ ಇದ್ದರು. ಅನಂತರ ಯಾರೋ ಕೆಲವರು ಅವರನ್ನು ನೀವು ಹೊರಟುಹೋಗಿ, ನೀವು ಈಗ ಇಲ್ಲಿ ಇರುವಂಥಾದ್ದು ಸರಿಯಾಗಿಲ್ಲ, ಪೋಲೀಸಿನವರು ಬಂದು ನಿಮ್ಮನ್ನು ಹಿಡಿದುಕೊಂಡು ಹೋಗುತ್ತಾರೆಂಬ ಭಯವನ್ನು ಹಿಡಿಸಿದರು; ಆಗ ಆಕೆ ಮತ್ತು ಆಕೆಯ ತಾಯಿ ಇಬ್ಬರೂ ಊರುಬಿಟ್ಟು ಹೋದರು; ಅವರನ್ನು ಹುಡುಕುವುದೇ ಆಮೇಲೆ ಒಂದು ದೊಡ್ಡ ಪ್ರಯಾಸವಾಯಿತು. ದೇವರ ದಯದಿಂದ ಅವರಿಬ್ಬರ ಸ್ಟೇಟ್‌ಮೆಂಟ್ ಸಹ ದೊರೆಯಿತು. ನಿಜವಾಗಿ ಸಾಕ್ಷಿ ಮತ್ತು ರುಜುವಾತು ಪರಿಪೂರ್ಣವಾಗಿದೆ. ಎಲ್ಲವೂ ನಿರಾಧಾರವಾದ ಆರೋಪಣೆ. ಎಲ್ಲವನ್ನೂ ಸ್ಪಷ್ಟಪಡಿಸಿದೇನೆ. ಇದು ಬಹಳ ವ್ಯಸನದ ಸಂಗತಿ. ಈ ಸಭೆ ಇಷ್ಟು ಸಮಯವನ್ನು ತೆಗೆದುಕೊಳ್ಳಬಾರದಾಗಿತ್ತು. ಅನಾವಶ್ಯಕವಾಗಿ ಜನರು ಇದದ್ದು ಉದ್ರೇಕಗೊಳಿಸಿ ಪೋಲೀಸಿನವರ ಮೇಲೆ ಅನಾವಶ್ಯಕವಾದ ಆರೋಪಣೆಯನ್ನು ಹೊರಿಸಿ ಈ ಪ್ರಕರಣವನ್ನುಂಟು ಮಾಡಿದುದಕ್ಕೋಸ್ಕರ ನಾನು ತುಂಬ ವ್ಯಸನಪಡುತ್ತಿದ್ದೇನೆ. ಇದಕ್ಕಾಗಿ ಡಾ॥ ಪಾರ್ಥಸಾರಥಿಯವರು ಸ್ವಲ್ಪ ಕ್ಷಮಿಸಬೇಕು. ಇದರಲ್ಲಿ ಆಧಾರವೇನಿದೆ ಎಂಬುದನ್ನು ತಮ್ಮ ತಮ್ಮಲ್ಲೇ ತಿಳಿದುಕೊಳ್ಳ ಬೇಕು. ಇದನ್ನು ಹಟ್ಟಿಗೆ ಕೆರಳಿಸಬೇಡಿ ಎಂದು ಬೇಡುತ್ತೇನೆ. ಈ ಸಭೆಯಲ್ಲಿ ಇಂತಹ ವಿಷಯಗಳನ್ನು ಪರಿಶೀಲಿಸುವಾಗ ಸ್ವಲ್ಪ ತಿಳಿಮನಸ್ಸಿನಿಂದ ವಿಚಾರಮಾಡಬೇಕು. ಇದು ಬಹಳ ಜವಾಬ್ದಾರಿಯ ಕೆಲಸ. ಸುಮ್ಮನೆ ಪೋಲೀಸಿನವರ ಮೇಲೆ ಆರೋಪಣೆ ಹೊರಿಸಿ, ಪೋಲೀಸಿನವರದೇ ತಪ್ಪು ಎಂದು ಹೇಳುವುದರಲ್ಲಿ ಏನೂ ತಿರುಳಿಲ್ಲ ಮತ್ತು ಅದರಿಂದ ಯಾವೊಂದು ದೊಡ್ಡ ಗೌರವವೂ ಸಿಕ್ಕುವುದಿಲ್ಲ.

ಡಾ॥ ಟಿ. ಪಾರ್ಥಸಾರಥಿ.—ಆರೋಪಣೆಯನ್ನು ಯಾರು ಹೊರಿಸಿರುವವರು?

ಶ್ರೀ ಸಿ. ಎಂ. ಪೂಣಚ್ಚ.—ಇನ್ನು ಕೆಲವು ಬೇರೆ ವಿಷಯಗಳನ್ನು ಮಾನ್ಯ ಸದಸ್ಯರು ತಿಳಿಸಿದರು. ಶ್ರೀ ಪುಟ್ಟರಾಮಯ್ಯನವರು ಚನ್ನಪಟ್ಟಣದ ಕೇಸನ್ನು ಕುರಿತು, ಆರ್ಮುಗಂ ಅವರು ಕೋಲಾರದ ಚಿನ್ನದ ಗಣಿಯಲ್ಲಿ ಚಿನ್ನ ಕಳವು ಆಗುತ್ತಿದೆ ಎಂಬ ವಿಷಯವನ್ನು ಕುರಿತು ಹೇಳಿದ್ದಾರೆ. ಸೂಕ್ಷ್ಮವಾಗಿ ಹೇಳುವುದಾದರೆ ಚನ್ನಪಟ್ಟಣದ ಕೇಸ್‌ನಲ್ಲಿ ನಾವು ಕೈ ಹಾಕುವಂತಹ ವಿಷಯ ಇಲ್ಲ. ಅದು ಟೆನೆನ್ಸಿ ಕೇಸು. ಅದರಲ್ಲಿ ಮೊದಲು ಒಂದು ತರಹ ತೀರ್ಮಾನವಾಯಿತು. ಆ ಮೇಲೆ ಅಪೀಲ್‌ನಲ್ಲಿ ಇನ್ನೊಂದು ತರಹ ತಿರ್ಮಾನವಾಯಿತು. ರೆವಿನ್ಯು ಬೋರ್ಡ್‌ನಲ್ಲಿ ಒಂದು ತರಹ ತೀರ್ಮಾನ ಆಯಿತು; ಅದರ ಮೇಲೆ ರಿಟ್‌ಪೆಟಿಷನ್ ಹೈಕೋರ್ಟಿಗೆ ಹೋಗಿ, ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಈ ಸ್ಥಿತಿಯಲ್ಲಿ ಆ ಕೇಸು ಇದೆ. ತನ್ಮಧ್ಯ ಏನಾಗಿದೆ ಎಂದರೆ ಸ್ಟೇ ಅರ್ಡರ್ ಇರುವಾಗ ಬೇರೆ ಒಂದು ಪಕ್ಷದವರು ಅಲ್ಲಿ ಹೋಗಿ ಪ್ರವೇಶ ಮಾಡಲಿಕ್ಕೆ ಪ್ರಯತ್ನಪಟ್ಟಾಗ ಘರ್ಷಣೆ ಆಯಿತು. ಆದ್ದರಿಂದ ಪೋಲೀಸ್‌ನವರು 145ನೆಯ ಸೆಕ್ಷನ್ ಪ್ರಯೋಗ ಮಾಡುವುದಕ್ಕೆ ಕ್ರಮ ತೆಗೆದುಕೊಂಡರು. ಈಗ ಸಿವಿಲ್ ಕೋರ್ಟ್‌ನಲ್ಲಿ ಪೋಲೀಸ್‌ನವರು ಕೇಸುಹಾಕಿದ್ದಾರೆ ಎಂದು ಯಾವರೀತಿ ಹೇಳಿದರೋ ಗೊತ್ತಾಗುವುದಿಲ್ಲ. ಇದು ಸಿವಿಲ್ ವ್ಯಾಜ್ಯ. ಕೋರ್ಟಿನಲ್ಲಿ ತೀರ್ಮಾನ ಮಾಡುವಂಥ ಅನೇಕ ವಿಷಯಗಳಿವೆ. ಈ ವಿಷಯದಲ್ಲಿ ಪ್ರತ್ಯೇಕವಾಗಿ ಯಾವ ರೀತಿಯ ಆಪಾದನೆ ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆರ್ಮುಗಂ ಅವರು ಕೋಲಾರದ ಚಿನ್ನದಗಣಿಯಲ್ಲಿ ಪಿಲ್‌ಫರಿಂಗ್ ಬಹಳವಾಗಿ ಆಗುತ್ತಾ ಇದೆ ಎಂದು ಹೇಳಿದರು. ಈ ವರ್ಷದಲ್ಲಿ 71 ಕೇಸುಗಳನ್ನು 3-4 ತಿಂಗಳಿನಲ್ಲಿ ಹಿಡಿದಿದೆ. ಅನೇಕರಿಗೆ ಸಜಾ ಕೂಡ ಆಗಿದೆ.

Sri C. M. ARUMUGHAM (Kolar Gold Fields).—What is the value of gold?

Sri C. M. POONACHA.—I can say pilferring is to the tune of Rs. 2,500, all put together.

Sri C. M. ARUMUGHAM.—If the Hon'ble Minister can yield a little, I would like to explain. Some paper managed by an Excise contractor has mentioned about this affair. But I may bring to the notice of the Hon'ble Minister that last year there was a case of gold smuggling to the extent of

(SRI C. M. ARUMUGHAM)

Rs. 70,000 in Nandydroog. I speak on facts.

Mr. SPEAKER.—What do you mean by 'a paper of an excise contractor'?

Sri C. M. ARUMUGHAM.—Because I do not know the name of the paper.

Mr. SPEAKER.—It does not mean that there is no name. It is not fair to the paper.

Sri C. M. ARUMUGHAM.—Excuse me, Sir. I do not know Kannada. It is a Kannada paper managed by the excise contractor of the Government.

Mr. SPEAKER.—After all we must be very fair. If the member has something to say against the paper in this respect he is welcome. But then he should not go on saying something which is not fair.

Sri C. M. ARUMUGHAM.—I do not know. Somebody said that it is managed by an excise contractor (*Laughter*).

Some MEMBERS.—Why do you believe it?

Sri C. M. ARUMUGHAM.—When members of the Legislature say that, I have to believe it. In fact I am proud to say that after nationalisation gold smuggling is reduced.

Sri T. D. MARANNA (Magadi).—On a point of order, Sir. He is making a speech.

Sri C. M. ARUMUGHAM.—Sir, it has become his habit to raise points of order, and all that. (*Laughter*) I do not want to waste time. The Hon'ble Home Minister has said that time is wasted on Muniamma's case. Theer is a specific case of gold smuggling to the extent of Rs. 70,000. I do not know what has happened to that. I am going to speak on that when the demand under "Industries" comes up and reply to the excise contractor's paper on that day.

Mr. SPEAKER.—Yes.

ಶ್ರೀ ಸಿ. ಎಂ. ಪೂಣಚ್ಚ.—ಪ್ರಖರವಾದ ಟೀಕೆ ಏಳು ದಿವಸ ಸತತವಾಗಿ ನಡೆದಿರುವಾಗ 1—1½ ತಾಸ ಆದರೂ ನನಗೆ ಬೇಕಾಗುತ್ತದೆ. ಇಷ್ಟು ಮಾನ್ಯ ಸಭೆಗೆ ಒಪ್ಪಿಸಬಲ್ಲೆ. ಏನೆಂದರೆ ಕೆಲವು ನ್ಯೂನತೆಗಳು ಇವೆ. ಪೋಲಿಸ್ ಇಲಾಖೆಯಲ್ಲಿ ಅನೇಕ ರೀತಿಯಲ್ಲಿ ಸುಧಾರಣೆ ನಡೆಯಬೇಕಾಗುತ್ತದೆ. ಅದು ನಿಜ; ಒಪ್ಪುತ್ತೇನೆ. ಅವು ಇವತ್ತು ಬಂದಂಥವು ಅಲ್ಲ. ಪರಂಪರೆಯಿಂದ ಬೆಳೆದು ಬಂದಿವೆ. ಅವನ್ನು ಸರಿಪಡಿಸುವಂತಹ ಜವಾಬ್ದಾರಿ ಸರ್ಕಾರದ್ದೂ, ತಮ್ಮದೂ ಸರಿತೂಕದ್ದು. ಇದನ್ನರಿತು ತಮ್ಮ ಟೀಕೆಯನ್ನು ತಾವು ಸರಿಪಡಿಸಿ. ಇನ್ನುಮುಂದೆ ತಾವು ಒಂದು ಪತ್ರ ಬರೆಯಿರಿ; ಇಂತಹ ಪೋಲೀಸ್ ಆಫೀಸರು ಇಂತಿಂತಹ ಕೆಲಸ ಮಾಡಿದ್ದಾರೆ ಎಂದು ತಿಳಿಸಿ. ಈ ಟೀಕೆಗಳು ಬತ್ತಳಿಕೆಯಲ್ಲಿ ಬಚ್ಚಿಟ್ಟು ಇಲ್ಲಿ ಬಂದು ಬಿಚ್ಚುವ ವಸ್ತು ಅಲ್ಲ. ಅದ್ದರಿಂದ ಇಂಥಾದ್ದು ನಡೆಯುತ್ತಿದೆ ಎಂದು ಹೇಳಿ ನನ್ನ ಅವಗಾಹನೆಗೆ ತಂದರೆ ಖಂಡಿತವಾಗಿಯೂ ಒಡನೆಯೇ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಇನ್ನೊಂದು ವಿಷಯ. ತಾವು ಸ್ವಲ್ಪ ಸತ್ಯಾಂಶವನ್ನು ಮರೆಮಾಚದೆ ನಮಗೆ ತಿಳಿಸಿ ಮತ್ತು ಸತ್ಯಾಂಶ ಇರುವಂಥ ವಿಚಾರ ಇದ್ದರೆ ತಿಳಿಸಿ. ಖಂಡಿತವಾಗಿಯೂ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಇವತ್ತು ಸರಿಯಾದಂಥ ಒಂದು ನಿಯಮ ರೂಢಿಗೆ ಬರದಿದ್ದರೆ, ಅಲ್ಲಿ ಸರಿಯಾದ ಕಾರ್ಯಕ್ರಮ ನಡೆಯದೇ ಹೋದರೆ, ನಾನಾ ತರಹ ಅವ್ಯವಸ್ಥೆಗಳು ಮತ್ತು ನಾನಾ ತರಹ ತಪ್ಪುನಡವಳಿಕೆಗಳು ಇದ್ದರೆ, ರಾಷ್ಟ್ರಕ್ಕೆ ಏನೂ ಪ್ರಯೋಜನ ಆಗಲಿಕ್ಕಿಲ್ಲ. ದೇಶಕ್ಕೆ ಬಹಳ ಸಂಕಟವಾಗುತ್ತದೆ. ಆದ್ದರಿಂದ ಮುಖ್ಯವಾದಂಥ ವಿಷಯ, ನಮ್ಮೆಲ್ಲರ ಮನಸ್ಸನ್ನು ಬಹಳವಾಗಿ ಕಲಕುವಂತಹ ವಿಷಯ ಇದು. ಈ ಪೋಲೀಸ್ ಇಲಾಖೆ ವ್ಯವಸ್ಥಿತವಾಗಿ ನಡೆಯಬೇಕು. ಇದರಲ್ಲಿ ವ್ಯಕ್ತಿಗಳ ಪ್ರಶ್ನೆಯಿಲ್ಲ. ದೇಶದ ಹಿತದೃಷ್ಟಿಯಿಂದ, ಜನರಿಗೆ ರಕ್ಷಣೆ ಒದಗಿಸುವಂಥ ದೃಷ್ಟಿಯಿಂದ ತಮ್ಮ ಸಲಹೆಗಳನ್ನು ಪರಿಪೂರ್ಣವಾಗಿ ಪರಿಶೀಲನೆಮಾಡಿ ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಅದಕ್ಕೆ ತಾವೂ ಸಹಾಯ ಮಾಡಬೇಕು. ಸ್ಪಷ್ಟವಾದ ರೀತಿಯಲ್ಲಿ ನಿರ್ದಿಷ್ಟವಾಗಿ ಯಾವ ವಿಷಯ ತಮ್ಮ ದೃಷ್ಟಿಗೆ ಬಂದಿದೆ, ಅದನ್ನು ಒಡನೆಯೇ ತಿಳಿಸಿದರೆ ಸರ್ಕಾರ ತುಂಬ ಋಣಿಯಾಗಿರುತ್ತದೆ, ಮುಂದಿನ ಕೆಲಸಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಕೊನೆಗಾಣಿಸುತ್ತೇನೆ.

Some MEMBERS.—Let us rise for tea.

Mr. SPEAKER.—The House will now adjourn for recess and meet after half an hour.

The House adjourned at Twenty Minutes past Three of the Clock and re-assembled at Ftfty Minutes past Three of the Clock.

[MR. SPEAKER in the Chair]

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಏಳು ದಿವಸಗಳಕಾಲ ಚರ್ಚೆ ನಡೆದಿರತಕ್ಕ ಸಂಬಂಧದಲ್ಲಿ ನನ್ನ ಪೋರ್ಟ್‌ಫೋಲಿಯೋವಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಾನೀಗ ಜವಾಬು ಕೊಡಬೇಕಾಗಿದೆ. ನನ್ನ ಖಾತೆಯವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಆದುದರಿಂದ ನಾನೀಗ ಅವರುಗಳಿಗೆಲ್ಲ ನನ್ನ ಪರವಾಗಿಯೂ

ಮತ್ತು ಸರ್ಕಾರದವರ ಪರವಾಗಿಯೂ ವಂದನೆಗಳನ್ನರ್ಪಿಸುತ್ತೇನೆ.

ಮೊದಲನೆಯದಾಗಿ ಅರಣ್ಯ ಶಾಖೆಯ ವಿಚಾರ: ಈ ಬಾಬಿನಲ್ಲಿ ಸರ್ಕಾರಕ್ಕೆ ಬರಬೇಕಾಗಿದ್ದಂಥ ಆದಾಯದಲ್ಲಿ ಬಹಳ ಕಡಮೆಯಾಗಿದೆಯೆಂದು ಅನೇಕರು ಹೇಳಿರುತ್ತಾರೆ. ಆದರೆ ಅವರೆಲ್ಲರಲ್ಲೂ ನಾನೀಗ ಒಂದು ವಿಷಯವನ್ನು ಅರಿಕೆಮಾಡಿಕೊಳ್ಳುತ್ತೇನೆ. ಹಿಂದೆ ನಮ್ಮ ಹಳೆಯ ಮೈಸೂರಿದ್ದಾಗ ಈ ಅರಣ್ಯ ನಮಗೆ ಬಹಳ ದೊಡ್ಡದಾಗಿ ಕಾಣಿಸುತ್ತಿತ್ತು. ಆದರೆ ಉತ್ಪತ್ತಿ ಬಹಳ ಕಡಮೆಯಾಗಿತ್ತು. ಆದರೆ ಇತ್ತೀಚೆಗೆ ಹೊಸ ಮೈಸೂರು ರಾಜ್ಯಸ್ಥಾಪನೆ ಆದಮೇಲೆ ನಮಗೆ ಬಂದಿರತಕ್ಕ ಪ್ರದೇಶಗಳಲ್ಲಿ ಬಹಳ ಉತ್ತಮವಾದ ಅರಣ್ಯವಿವೆ. ಆದರಿಂದ ನಮಗೆ ಇನ್ನು ಮುಂದೆ ಹೆಚ್ಚು ವರಮಾನ ಬರತಕ್ಕಂಥ ಅವಕಾಶವಿದೆ. ಆದಾಗ್ಯೂ ಅರಣ್ಯ ಖಾತೆಯ ಉತ್ಪತ್ತಿಯಲ್ಲಿ 1957-58ನೇ ಸಾಲಿನ ಆದಾಯದ ಅಂದಾಜಿಗಿಂತ ಸುಮಾರು ಒಂದು ಕೋಟಿ ರೂಪಾಯಿ ಜಾಸ್ತಿ ಆಗಿರುತ್ತದೆ. ನಮ್ಮಲ್ಲಿ ಈ ಮರಗಳನ್ನು ನೂರಾರು ವರ್ಷಗಳಿಂದ ಸಾಕುವುದಕ್ಕೆ ಬದಲಾಗಿ ಅವುಗಳನ್ನು ಒಂದೇ ಸಮನಾಗಿ ಕಡತಲೆ ಮಾಡುತ್ತಲೇ ಬಂದಿದ್ದೇವೆ. ಈಗ ಈ ಬಾಬಿನಲ್ಲಿ ಹೊಸದಾಗಿ ಮರಗಳನ್ನು ಬೆಳಸತಕ್ಕ ಪದ್ಧತಿಯನ್ನು ಒಂದು ಹೊಸ ಸಿಸ್ಟಂಪ್ರಕಾರ ನಡೆಸಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ ಇಲ್ಲಿಯತನಕ ನಾವು ಅರಣ್ಯದಲ್ಲಿರತಕ್ಕ ಮರಗಳನ್ನು ಒಂದೇ ಸಮನಾಗಿ ಕಡತಲೆ ಮಾಡುತ್ತ ಬಂದುದರಿಂದ ನಾವು ದೇಶಾಭಿವೃದ್ಧಿಯ ದೃಷ್ಟಿಯಿಂದ ಈ ಅರಣ್ಯವನ್ನು ಎಷ್ಟರ ಮಟ್ಟಿಗೆ ಉಳಿಸಿಕೊಳ್ಳಬೇಕಾಗಿತ್ತೋ ಅಷ್ಟರಮಟ್ಟಿಗೆ ಉಳಿಸಿಕೊಂಡು ಬರಲು ಸಾಧ್ಯವಾಗಲಿಲ್ಲ. ಹೀಗಾಗಿ ಈ ದಿವಸ ಬೆಂಗಳೂರು, ತುಮಕೂರು, ಕೋಲಾರ ಇತ್ಯಾದಿ ಜಿಲ್ಲೆಗಳಲ್ಲಿದ್ದ ಅಡವಿಯೆಲ್ಲಾ ನಾಶವಾಗಿ ಹೋಗಿದೆ. ಹೀಗೆಲ್ಲ ನಮ್ಮ ದೇಶದಲ್ಲಿ ಕಾಡುಗಳು ನಾಶವಾಗಿ ಹೋಗುತ್ತಿರುವುದರಿಂದ ನಾವು ಈ ದಿವಸ ನಾಟಾ ಕೂಡ ಪರದೇಶದಿಂದ ತರಿಸಬೇಕಾಗಿದೆ. ನಮಗೀಗ ಬರಿ ಆಹಾರ ಸಾಮಗ್ರಿಗಳೊಂದನ್ನೇ ಅಲ್ಲದೆ ನಾಟಾ ಸಹ ಪರದೇಶದಿಂದ ತರಿಸತಕ್ಕಂಥ ಅಗತ್ಯ ಉಂಟಾಗಿದೆ. ಇದೊಂದು ಖಂಡಿತಯಾಗಿಯೂ ಬಹಳ ಶೋಚನೀಯವಾದಂಥ ಪರಿಸ್ಥಿತಿ ನನಗೆ ಈ ಬಾಬಿನಲ್ಲಿ ಎಷ್ಟೋ ವಿಚಾರಗಳು ಗೊತ್ತಿರಲಿಲ್ಲ. ಆದರೆ ನಾನು ಈ ಹಿಂದೆ ಷಿಲ್ಲಾಂಗಿನಲ್ಲಿ ನಡೆದಂಥ ಒಂದು ಫಾರೆಸ್ಟ್ ಕಾನ್ಫರೆನ್ಸಿಗೆ ಹೋಗಿದ್ದೆನು. ಆ ಕಾನ್ಫರೆನ್ಸಿನಲ್ಲಿ ನನಗೆ ಅನೇಕ ಆಶ್ಚರ್ಯಕರವಾದಂಥ ವಿಚಾರಗಳು ತಿಳಿದುಬಂದವು. ನಾವೀಗಾಗಲೇ ಅನೇಕ ವರ್ಷಗಳಿಂದ ವಿಶೇಷವಾಗಿ ಹಣವನ್ನ ಪರದೇಶಕ್ಕೆ ಈ ಮರಗಳನ್ನ ತರಿಸಿಕೊಳ್ಳತಕ್ಕ ಬಗ್ಗೆ ಕಳುಹಿಸುತ್ತಿದ್ದೇವೆಂಬುದಾಗಿ ತಿಳಿದು ಬಂತು. ಈ ದಿವಸ ಈ ನಾಟಾ ಸಾಮಾನನ್ನು ಬರ್ಮ, ಸಿಲೋನ್, ಇಂಡೋನೇಷಿಯಾ ಇತ್ಯಾದಿ ದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಇದು ಹೀಗೆಯೇ ಮುಂದುವರಿದಲ್ಲಿ ನಾವು ನಮ್ಮ ಅರಣ್ಯ ಬಾಬಿನಿಂದ ಬರತಕ್ಕ ಉತ್ಪತ್ತಿಯನ್ನೆಲ್ಲಾ ಕಳೆದುಕೊಳ್ಳುವುದೇ ಅಲ್ಲದೆ ನಮಗೆ ಮನೆಕಟ್ಟತಕ್ಕ ಸಾಮಾನುಗಳು, ರೈತರಿಗೆ ಬೇಕಾಗುವಂಥ ಮರಮುಟ್ಟುಗಳೂ ಕೂಡ ದೊರೆಯಬೇಕಾದರೆ ಬಹಳ ತೊಂದರೆ ಉಂಟಾಗಬಹುದೆಂದು ತೋರುತ್ತದೆ.

ಶ್ರೀ ಕುಂದೂರು ರುದ್ರಪ್ಪ (ಚೆನ್ನಗಿರಿ).—ಈ ಹಿಂದೆ ಸರ್ಕಾರದವರು ರೈತರಿಗೆ ಬೇಕಾದಂಥ ಉಪಕರಣದ ಬಗ್ಗೆ ಆಯಾಯ ತಾಲ್ಲೂಕು ಕಸಬೆಗಳಲ್ಲಿ ಡಿಪೋಗಳನ್ನು ಓಪನ್ ಮಾಡಿ ಅವುಗಳಿಂದ ಸರಬರಾಯಿ ಮಾಡುತ್ತೇವೆಂದು ಹೇಳಿದ್ದರು. ಆ ಒಂದು ಭರವಸೆ ಈ ದಿವಸ ಏನಾಯಿತು ?

ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರಗಳೆಲ್ಲ ನಿಜ. ಆರೀತಿ ರೈತರಿಗೊಂದು ಉಪಕಾರಮಾಡಬೇಕೆಂಬ ವಿಚಾರದಲ್ಲಿ ನಮಗೂ ಬಹಳ ಒಂದು ಹಿರಿದಾದ ಆಸೆಯಿದೆ. ಆದರೆ ಅದನ್ನು ಜಾರಿಗೆ ತರತಕ್ಕ ವಿಚಾರದಲ್ಲಿ ಬಹಳ ಕಷ್ಟವಿದೆ. ಇತ್ತೀಚೆಗೆ ನಾನು ನಮ್ಮ ಇಲಾಖೆಗೆ ರೈತರಿಗೆ ಬೇಕಾಗುವಂಥ ಸಲಕರಣೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕೆಂದು ಈಗಾಗಲೇ ತಿಳಿಸಿದ್ದೇನೆ. ಮುಖ್ಯವಾಗಿ ಜನರು ಮರಗಳನ್ನು ಬೆಳಸಬೇಕು. ಆದರೆ ನಾವು ಈ ದಿವಸ ರೈತರಿಗೆ ಈ ಉಪಕರಣಗಳನ್ನು ಒದಗಿಸಲು ಅಲ್ಲಲ್ಲೆ ಡಿಪೋಗಳನ್ನು ತೆರೆಯುತಕ್ಕ ವಿಚಾರದ ಬಗ್ಗೆ ಹೇಳಬೇಕೆಂದರೆ ಮೂಗಿಗಿಂತ ಮೂಗುತಿ ಭಾರ ಎಂದು ಹೇಳುವಂತಾಗುತ್ತದೆ. ಎಂದರೆ ಶರೀರಕ್ಕಿಂತಲೂ ತಲೆದಪ್ಪ ಎಂದು ಹೇಳಿದಹಾಗೆ ಆಗುತ್ತದೆ. ಡಿಪೋಗಳನ್ನು ತೆರದರೆ ಅಲ್ಲಿ ಸಾಮಾನುಗಳು ಕಳವಾಗುವುದು ಒಂದು ವಿಚಾರವಲ್ಲದೆ ಕಾವಲುಗಾರನಿಗೆ ಬೇರೆ ಸಂಬಳ ಕೊಡಬೇಕಾಗಿದೆ. ಈ ಖರ್ಚುಗಳನ್ನೆಲ್ಲ ಲೆಕ್ಕಹಿಡಿದರೆ ನಾವು ಮಾರಾಟ ಮಾಡತಕ್ಕ ಸಾಮಾನುಗಳ ಬೆಲೆಗಿಂತ ಈ ಖರ್ಚುವೆಚ್ಚಗಳೇ ಜಾಸ್ತಿಯಾಗಿರುತ್ತದೆ. ಹೀಗಾಗಿ ನಾವು ಮಾರತಕ್ಕ ಸಾಮಾನುಗಳ ಬೆಲೆ ಬಹಳ ಕಡಮೆ ಆಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಒಂದು ಸೂಕ್ತವಾದ ಏರ್ಪಾಡನ್ನು ಜಾಗ್ರತೆ ಜಾರಿಗೆ ತಂದು ಸಾಮಾನುಗಳನ್ನು ಆದಷ್ಟು ಬೇಗ ರೈತರಿಗೆ ದೊರೆಯುತಕ್ಕ ಏರ್ಪಾಡನ್ನು ಮಾಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ, ಈಗತಾನೆ ಮಂತ್ರಿಗಳು ಮೂಗಿಂತ ಮೂಗುತಿ ಭಾರ ಎಂದು ಹೇಳಿದ್ದನ್ನು ನೋಡಿದರೆ ಸರ್ಕಾರದವರಿಗೆ ರೈತರ ವಿಚಾರದಲ್ಲಿ ಸಹಾನುಭೂತಿ ಇಲ್ಲವೆಂದಾಯಿತು. ಈ ದಿವಸ ಒಂದು ಗಾಡಿಗೆ 300-400 ರೂಪಾಯಿಗಳ ಬೆಲೆಯಾಗಿದೆ. ರೈತನಿಗೆ ವ್ಯವಸಾಯಕ್ಕೆ ಬೇಕಾದ ನೊಗ, ನೇಗಿಲು, ಕುಂಟೆ, ರಂಟೆ ಇತ್ಯಾದಿಗಳಿಗೆ ಮರ ಮುಟ್ಟುಗಳು ಸಿಕ್ಕುತ್ತಿಲ್ಲ, ರೈತರೆಲ್ಲ ಹಾಳಾಗಿ ಹೋಗುತ್ತಿದ್ದಾರೆ, ಜಿರಾಯ್ತು ದಿನೇದಿನೇ ಕಡಮೆಯಾಗುತ್ತಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಈ ಸಾಮಾನುಗಳನ್ನೆಲ್ಲ ಒಂದು ನ್ಯಾಯವಾದ ಬೆಲೆಗೆ ಸೊಸೈಟಿಗಳ ಮೂಲಕ ಒದಗಿಸತಕ್ಕಂಥ ಒಂದು ಏರ್ಪಾಡನ್ನು ಜಾರಿಗೆತರಬೇಕೆಂದು ಮಾಡಿದ್ದೇವೆ. ಇದು ಬಹಳ ಸೂಕ್ತವಾದಂಥ ಮಾರ್ಗವೆಂದು ತೀರ್ಮಾನಮಾಡಿರುತ್ತೇವೆ. ಈ ಬಗ್ಗೆ ಆಗಲೆ ಸರ್ಕಾರಿ ಆಜ್ಞೆ ಹೊರಟಿದೆ. ಅದು ಸದ್ಯದಲ್ಲಿ ಜಾರಿಗೆ ಬರಲಿದೆ. ಆದರೆ ಹೀಗೆ ಮಾಡದೆ ನಾವೇ ಸರ್ಕಾರದ ಪರವಾಗಿ ಡಿಪೋಗಳನ್ನು ತೆರೆದರೆ ಅದಕ್ಕೆಲ್ಲ ಶಿಬ್ಬಂದಿ ವೆಚ್ಚ ಹೆಚ್ಚಾಗುತ್ತದೆ. ಆದ್ದರಿಂದ ನಾವು ಈ ದಿವಸ ಗೊಬ್ಬರ, ಬಿತ್ತನೆ ಬೀಜ ಇತ್ಯಾದಿಗಳನ್ನೆಲ್ಲ ಯಾವ ರೀತಿ ವಿಲೇವಾರಿಮಾಡುತ್ತಿದ್ದೇವೋ ಹಾಗೆ ಈ ಉಪಕರಣಗಳನ್ನೂ ಒದಗಿಸಬೇಕೆಂದು ಒಂದು ಏರ್ಪಾಡು ಮಾಡಿದ್ದೇವೆ. ಅದು ಸೊಸೈಟಿಗಳ ಮೂಲಕ ಜಾರಿಗೆ ಬರುತ್ತದೆ.

ಶ್ರೀ ಡಿ. ಮೂಕಪ್ಪ (ಸಾಗರ).—ಸೊಸೈಟಿಗಳಿಗೆ ಅಷ್ಟೊಂದು ಹಣದ ವರಮಾನವೆಲ್ಲಿದೆ ?

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಆ ಸೊಸೈಟಿಗಳಿಗೆಲ್ಲ ಲಕ್ಷಾಂತರ ರೂಪಾಯಿಗಳನ್ನು ಸಾಲ ಕೊಡತಕ್ಕ ಬಗ್ಗೆ ಒದಗಿಸಿದ್ದೇವೆ. ಆ ಬಗ್ಗೆ ಏನು ಏರ್ಪಾಡುಗಳನ್ನು ಬೇಕಾದರೂ ಮಾಡಲು ಸಿದ್ಧವಾಗಿದ್ದೇವೆ. ಆದುದರಿಂದ ಇಂಥ ವ್ಯವಹಾರವನ್ನೆಲ್ಲ ಸರ್ಕಾರ ತಾನೇ ನಡೆಸುವುದಕ್ಕಿಂತ ಖಾಸಗಿ ಸಂಸ್ಥೆಗಳ ಮೂಲಕ ನಡೆಸತಕ್ಕದ್ದು ಒಳ್ಳೆಯದೆಂದು ತಿಳಿದು ಬಂದಿದೆ. ಈ ಬಗ್ಗೆ ನಾವು ಬುಕ್ ಅಡ್ಜೆಸ್ಟ್‌ಮೆಂಟ್ ಬೇಕಾದರೂ ಮಾಡಿಕೊಳ್ಳಬಹುದು.

ಶ್ರೀ ಎಂ. ಹನುಮಂತಯ್ಯ (ನೆಲಮಂಗಲ).—ಈ ದಿವಸ ನಮಗೆ ಮುಖ್ಯವಾಗಿ ಬಂದಿರತಕ್ಕ ತೊಂದರೆ ಎಲ್ಲ ಬಂಡಿಮರದ ಪಟ್ಟಿ, ಹಾರೇ ಕಾಲು. ಈ ತ್ಯಾಗದ ಸಾಮಾನುಗಳ ಅಗತ್ಯ ಹೆಚ್ಚಾಗಿದೆ. ನಮಗೆ ಬೇರೆ ಮರದ ಸಾಮಾನುಗಳನ್ನೇನೂ ತಾವು ಒದಗಿಸಬೇಕಾಗಿಲ್ಲ.

4 P.M.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಸೊಸೈಟಿಗಳಿವೆ. ಅಲ್ಲಿ ತೇಗದ ಮರ, ಬಂಡಿಪಟ್ಟಿ ಮುಂತಾದುವುಗಳ ಧಾರಣೆಯನ್ನು ಕಡಿಮೆ ಮಾಡಿ ಮಾರಬೇಕೆಂದು ಹೇಳಿದ್ದೇವೆ.

ಶ್ರೀ ಎಂ. ಹನುಮಂತಯ್ಯ.—ಮನೆಗೆ, ಗಾಡಿಗೆ ಬೇಕಾಗುವ ಸಾಮಾನುಗಳ ಬೆಲೆಗಳನ್ನು ಕಡಮೆಮಾಡಿ ಎಂದು ಹತ್ತು ವರ್ಷಗಳಿಂದ ಹೇಳುತ್ತಿದ್ದೇವೆ. ಆದರೂ ಮಾಡದಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುದ್ರಪ್ಪ.—ಗಾಡಿಗೆ ಬೇಕಾಗುವ ಸಾಮಾನಿಗೆ ಕಡಮೆ ಮಾಡಿದ್ದೇವೆ.

ಶ್ರೀ ಎಂ. ಹನುಮಂತಯ್ಯ.—ಈಗ ಒಂದು ಜೊತೆ ಪಟ್ಟಿಗೆ 60ರೂಪಾಯಿಗಳನ್ನು ತೆಗೆದು ಕೊಳ್ಳುವುದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುದ್ರಪ್ಪ.—ಕಟ್ಟಿಣದ ಧಾರಣೆ ಜಾಸ್ತಿಯಾಗಿದೆ. ಧಾರಣೆ ವಾಸಿಗಳು ಜಾಸ್ತಿಯಾಗಿರುವುದಕ್ಕೆ ನಾವೂ ನೀವೂ ಎಲ್ಲರೂ ಕಾರಣರು. ಅರಣ್ಯದ ಉತ್ಪತ್ತಿಯ ಬಗ್ಗೆ ಹೇಳುವುದಾದರೆ ಈಗ ಅದನ್ನು ಬಹಳ ಮಟ್ಟಿಗೆ ಜಾಸ್ತಿ ಮಾಡಿದ್ದೇವೆ. 1957-58 ನೆಯ ಬಡ್ಜೆಟ್ಟಿನಲ್ಲಿ 3,30,91,000 ರೂಪಾಯಿಗಳ ವರಮಾನ ಬರಬಹುದೆಂದು ಹೇಳಿತ್ತು. ಅದು ಈಚೆಗೆ ನೋಡಿದ್ದರಲ್ಲಿ 3.66,87,000 ಆಗುತ್ತದೆಂದು ಹೇಳಿದ್ದಾರೆ. ಅಲ್ಲಿಗೆ, ರಿವೈಸ್ ಎಸ್ಟಿಮೇಟಿಗಿಂತ ಹೆಚ್ಚಾಗಿ ಉತ್ಪತ್ತಿ ಬಂದಿರುತ್ತದೆ. ಆದ್ದರಿಂದ ಒಟ್ಟಿನಲ್ಲಿ ವರಮಾನವನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಮಾತ್ರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳ ಬಯಸುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಿಮ್ಮ working expenses ಶೇಕಡ 45 ರಷ್ಟಾಗಿದೆಯಲ್ಲಾ. ವರಮಾನ ಕಡಿಮೆಯಾಯಿತೆಂದು ಹೇಳುತ್ತಿಲ್ಲ. ವರಮಾನದ ಅರ್ಧಕ್ಕರ್ಧ ನಿಮ್ಮ ಖರ್ಚೇ ಆಗುತ್ತಿದೆಯಲ್ಲಾ!

ಶ್ರೀ ಎಚ್. ಎಸ್. ರುದ್ರಪ್ಪ.—Expense ಶೇಕಡ 45ರ ರಷ್ಟಾಗುವುದಿಲ್ಲ. ಶೇಕಡ 35-40 ರಷ್ಟು ಮಾತ್ರ ಆಗಬಹುದು. ಪ್ಲಾಂಟೇಷನ್ ಮುಂತಾದುವುಗಳನ್ನು ಮಾಡುವುದಿದೆ. ಇದನ್ನೆಲ್ಲಾ Working Expense ಎಂದು ಭಾವಿಸುವುದು ತಪ್ಪು. ನಿಖರವಾಗಿ ಎಷ್ಟು ಖರ್ಚಾಗುತ್ತಿದೆಯೆಂದು ಡಿಮ್ಯಾಂಡ್‌ಗಳ ಚರ್ಚೆಯ ಸಂಬಂಧದಲ್ಲಿ ಹೇಳುತ್ತೇನೆ.

ಈಗ ಪ್ಲಾಂಟೇಷನ್ ಬಹಳ ಕಡಮೆಯಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದರು. ಇದು ಸ್ವಲ್ಪಮಟ್ಟಿಗೆ ಒಪ್ಪತಕ್ಕ ಮಾತು. ಕಾಡುಗಳೆಲ್ಲಾ ಅರಣ್ಯ ಇಲಾಖೆಗೆ ಸೇರಿವೆಯೆಂದು ಕೆಲವರ ಭಾವನೆಯಾಗಿದೆ. ನಮಗಿರತಕ್ಕ ರಿಸರ್ವ್ ಫಾರೆಸ್ಟ್‌ಗಳು ಬಹಳ ಕಡಮೆ. ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು, ವಿಲೇಜ್ ಫಾರೆಸ್ಟ್‌ಗಳು— ಫಾರೆಸ್ಟ್ ಇಲಾಖೆಯಲ್ಲಿ ಎಷ್ಟು ಜಮೀನಿದೆಯೋ ಅದಕ್ಕಿಂತ ಹೆಚ್ಚಿಗೆ ರೆವಿನ್ಯೂ ಇಲಾಖೆಗೆ ಇದೆ. ರೆವಿನ್ಯೂ ಮಂತ್ರಿಗಳಿಗೆ ನಾನು ಪದೇ ಪದೇ ಹೇಳುತ್ತಿದ್ದೇನೆ—ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳನ್ನು ನೋಡಿಕೊಳ್ಳುವವರಿಲ್ಲ. ಅವುಗಳಲ್ಲಿರುವ ಮರಗಳನ್ನು ಕತ್ತರಿಸುವುದಕ್ಕೆ ಲೈಸೆನ್ಸ್ ಕೊಡುವವರು ಮಾತ್ರ ಇರುತ್ತಾರೆ. ಇದರಿಂದಾಗಿ ನಾವು ಅಲ್ಲಿಂದ ಏನು ಉತ್ಪತ್ತಿಯನ್ನು ನಿರೀಕ್ಷಣೆ ಮಾಡುತ್ತಿದ್ದೇವೋ ಅದು ಬರುವುದಿಲ್ಲ. ರೆವಿನ್ಯೂ ಇಲಾಖೆಯವರೇನೋ ಲೈಸೆನ್ಸ್ ಕೊಟ್ಟುಬಿಡುತ್ತಾರೆ. ಲೈಸೆನ್ಸ್ ತೆಗೆದುಕೊಂಡವರು ಪಕ್ಕದಲ್ಲಿರುವ ಸರ್ಕಾರಿ ಕಾಡಿನಿಂದ ಮರ ತಂದು ಮಾರುತ್ತಿರುತ್ತಾರೆ. ಹೀಗಾಗಿ ಪ್ರೈವೇಟ್ ಫಾರೆಸ್ಟ್‌ನಿಂದ ತರುತ್ತಿದ್ದಾರೆಂದು ಏನು ಭಾವಿಸುತ್ತಿದ್ದೇವೋ ಅವೆಲ್ಲಾ ಸರ್ಕಾರದ ಕಾಡಿನಿಂದಲೇ ತರುವುದಾಗಿದೆ. ಇದನ್ನು ಯಾವರೀತಿ ಹತೋಟಿ ಮಾಡಬೇಕೆಂಬುದೇ ಕಷ್ಟವಾಗಿದೆ.

ಮಾನ್ಯ ಸದಸ್ಯರು M.R.P. ಲೈಸೆನ್ಸ್ ಕೊಡುವ ವಿಷಯ ಹೇಳಿದರು. M.R.P. ರೂಲ್ಸ್ ಪ್ರಕಾರ ಕೊಡುವ ಲೈಸೆನ್ಸ್‌ನಲ್ಲಿ ಮನೆಯನ್ನು ಕಟ್ಟಿದ್ದರೆ ನಾನು ಸಂತೋಷಪಡುತ್ತಿದ್ದೆ, ಆದರೆ, ಅದು ಆಗುತ್ತಿಲ್ಲ. ಅದನ್ನೆಲ್ಲಾ ತೆಗೆದುಕೊಂಡು ಕೆಲವರು ಹೋಗಿ ಮಾರುತ್ತಿದ್ದಾರೆ.

ಶ್ರೀ ಕುಂದೂರು ರುದ್ರಪ್ಪ.—ಈ ವಿಚಾರ ಬಂದಾಗ ಒಂದು ಮಾತು ಹೇಳಬೇಕಾಗಿದೆ. ತಾವು ಹೇಳಿದಿರಿ, 50 ಮನೆಗಳನ್ನು ಕೂಡ ಅವರು ಕಟ್ಟಿಲ್ಲ ಎಂದು. 90 ಜನಗಳೂ ಹೀಗೆ ಬ್ಲಾಕ್ ಮಾರ್ಕೆಟ್ ಮಾಡಿದ ಮೇಲೆ ಸರ್ಕಾರಿ ಆರ್ಡರ್ ಪ್ರಕಾರ ಅವರ ಆಸ್ತಿಗಳನ್ನೇಕೆ ಮುಟ್ಟುಗೋಲು ಹಾಕಿಕೊಳ್ಳಕೂಡದು?

ಶ್ರೀ ಎಚ್. ಎಸ್. ರುದ್ರಪ್ಪ.—ಕಾನೂನಿನಲ್ಲಿ ಶಿಕ್ಷೆ ಮಾಡುವುದಕ್ಕೆ ಅವಕಾಶವಿಲ್ಲ. ಮುಂದೆ ಅದನ್ನು ಸರಿಮಾಡಬೇಕು. ಆದ್ದರಿಂದಲೇ ಈಗ M.R.P. ರೂಲ್ಸ್ ಪ್ರಕಾರ ಕೊಡಬೇಡಿ ಎಂದು ಸದ್ಯಕ್ಕೆ ನಿಲ್ಲಿಸಿದ್ದೇವೆ. ನಮ್ಮ ದೇಶದಲ್ಲಿ ಹುಲ್ಲಿನ ಮನೆಗಳು ವಿಶೇಷವಾಗಿವೆ. ಹುಲ್ಲಿನ ಮನೆಗಳು ಇರಕೂಡದೆಂಬುದೇ ನಮ್ಮ ಉದ್ದೇಶ. ಬೆಂಕಿಯಿಂದ ಬಹಳ ಅನಾಹುತಗಳು ಮಲೆನಾಡಿನಲ್ಲಿ ಆಗುತ್ತಿವೆ. ಆದ್ದರಿಂದ ಸಾಧ್ಯವಾದಷ್ಟು ಬೇಗನೆ ಹುಲ್ಲಿನ ಮನೆಗಳನ್ನು ತೆಗೆದು ಹೆಂಚಿನ ಮನೆಗಳನ್ನು ಹಾಕಬೇಕೆಂಬುದೇ ನಮ್ಮ ಅಭಿಲಾಷೆ. ಆದರೆ, ಕೆಲವರು ಅವಕಾಶ ಕೊಟ್ಟರೆ ವಿಧಾನ ಸೌಧದ ನಾಟಾಗಳೆಲ್ಲವನ್ನೂ ಒಂದೇ ಮನೆಗೆ ಹಾಕುತ್ತಾರೆ. ಆದ್ದರಿಂದ ನಾಟಾವನ್ನು ಕೂಡರೇಷನ್ ಮಾಡಬೇಕ . ಈ ದೃಷ್ಟಿಯಿಂದ ನಾವು ನಮ್ಮ ಅರಣ್ಯ ಸಂಪತ್ತನ್ನು ಎಚ್ಚರಿಕೆಯಿಂದ ಕಾಪಾಡ ಬೇಕಾಗಿದೆ. ಅರಣ್ಯ ಇಲಾಖೆ ಇನ್ಯಾವುದಾದರೂ ಇಲಾಖೆಯಂತಲ್ಲ. ದುಡ್ಡು ಖರ್ಚು ಮಾಡಿದರೆ, ನಾಲಾ ಮತ್ತು ಕೆರೆಗಳ ಬೆಳೆಗಳಂತೆ, ಜಾಗ್ರತೆ ಬೆಳೆಸಬಹುದು ಎಂದು ಹೇಳುವುದಕ್ಕಾಗುವುದಿಲ್ಲ. ಇಂದು Plantation ಮಾಡಿದರೆ, ಒಂದು ತೇಗದ ಮರ ಉಪಯೋಗಕ್ಕೆ ಬರಬೇಕಾದರೆ 60-70 ವರ್ಷ ಆಗುತ್ತದೆ. ಆದ್ದರಿಂದ ಮರಗಳನ್ನು ದುರುಪಯೋಗ ಮಾಡಕೂಡದು ಮತ್ತು ಅದನ್ನು ಶೇಖರಿಸಿ 100 ವರ್ಷ ಇರುವ ಹಾಗೆ ಒಂದು wroking plan ಮಾಡಬೇಕೆಂದು ನಾನು ಹೇಳುತ್ತೇನೆ. ತೇಗದ ಹಾಗೆಯೇ ನಮ್ಮಲ್ಲಿ ಬಿದಿರು ಬಹಳ

ಲುಕ್ಸಾನಾಗುತ್ತಿದೆ. ಅದ್ದರಿಂದ ಬಿದಿರಿನಿಂದ ಮನೆಯನ್ನು ಕಟ್ಟಿ, ತೇಗವೇ ಬೇಕೆಂದು ಹೇಳಬೇಡಿ ಎಂದು ಹೇಳುತ್ತಿದ್ದೇವೆ. ಬೊಂಬನ್ನು treat ಮಾಡಿ ಅದು ಬಂದೋಬಸ್ತಾಗುವಂತೆ ಮಾಡಿಸಿ ಜನರಿಗೆ ರಿಯಾಯಿತಿ ದರದಲ್ಲಿ ಕೊಡಬೇಕೆಂದು ಮಾಡಿದ್ದೇವೆ. ಇದಕ್ಕಾಗಿ ಒಂದು plantಗೆ ಕೂಡ ತರಿಸಬೇಕೆಂಬ ಯೋಚನೆ ಮಾಡಿದ್ದೇವೆ. ಈಗ ಕಾಡುಗಳಲ್ಲಿ ಎಷ್ಟೋ ಬೊಂಬು ವೃಥಾ ಸುಟ್ಟುಹೋಗುತ್ತಿದೆ. ಹೀಗೆ ನಷ್ಟವಾಗುವುದನ್ನು ತಪ್ಪಿಸಿ ಅನೇಕರು ಹೇಳಿದ ಹಾಗೆ ಉಪಯೋಗಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎ. ಆರ್. ಬದರೀನಾರಾಯಣ್ (ತೀರ್ಥಹಳ್ಳಿ).—ತಾವು ಹೇಳಿದಿರಿ, ಎಂ. ಆರ್. ಪಿ. ರೂಲ್ಸ್ ಪ್ರಕಾರ ಕೊಟ್ಟ ನಾಟಾಗಳನ್ನು ದುರುಪಯೋಗ ಮಾಡುತ್ತಿದ್ದಾರೆಂದು ಹೇಳಿ ಅದನ್ನು ಕೊಡುವುದನ್ನು ನಿಲ್ಲಿಸಿದ್ದೇವೆ ಎಂದು. ದುರುಪಯೋಗ ಮಾಡಿದವರನ್ನು ಶಿಕ್ಷೆ ಮಾಡಬೇಕೇ ಹೊರತು, ಯಾವ ಉದ್ದೇಶದಿಂದ ಲೈಸೆನ್ಸ್ ಕೊಡುತ್ತಿದ್ದೀರೋ ಅದನ್ನು ತಪ್ಪಿಸುವುದು ನ್ಯಾಯವಲ್ಲವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಅವರ ಹಿತದೃಷ್ಟಿಯಿಂದಲೇ ಈ ರೀತಿ ಮಾಡಿದೆ. ಈ ರೀತಿ ಕಡತಲೆಯಾಗುತ್ತಿದ್ದರೆ, ಮನೆಕಟ್ಟುವುದಕ್ಕೆ ಮರ ಸಹ ಇರುವುದಿಲ್ಲ. ಈ ರೀತಿ ಜನರಿಗೆ ಕೊಡುವುದನ್ನು ಬಿಟ್ಟುಬಿಡಿ, ನೀವೇ ತಂದು ಡಿಪೋ ಇಟ್ಟು ಮಾರಿರಿ ಎಂದು ಜನರೂ ಕೂಡ ಹೇಳುತ್ತಿದ್ದಾರೆ. ಅದರ ಮೇಲೆ ಮಾಡಿದೆ.

ಇನ್ನು ಪ್ಲಾಂಟೇಷನ್ ಮಾಡುವ ವಿಚಾರ ಹೇಳುವುದಾದರೆ, ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂಬದನ್ನು ನಾನು ಒಪ್ಪುತ್ತೇನೆ. ಈ ಬಡ್ಜೆಟ್ಟಿನಲ್ಲಿ ಇಟ್ಟಿರುವುದು ಕಡಮೆಯೆಂದು ಮಾನ್ಯ ಸದಸ್ಯರು ಹೇಳಿದರು. ಪ್ಲಾಂಟೇಷನ್‌ಗಳಲ್ಲಿ ರೆಗ್ಯುಲರ್ ಆಗಿರುವುದು, ರೆಗ್ಯುಲರಾಗಿಲ್ಲದಿರುವುದು ಎಲ್ಲವನ್ನೂ ಸೇರಿಸಿದರೆ ಬಹಳ ಕಡಮೆಯೆಂದೇ ಕಾಣುತ್ತದೆ. ಈ ವರ್ಷ 10,000 ಮಾಡಿದ್ದೇವೆ. ಇದು ಸಾಲದು. ಇದನ್ನು ಹೆಚ್ಚಿಗೆ ಮಾಡುವುದರ ಅವಶ್ಯಕತೆಯಿದೆಯೆಂದು ಒಪ್ಪುತ್ತೇನೆ.

ಅನೇಕರು ಸೌದೆಯ ವಿಷಯ ಹೇಳಿದರು. ಎಲ್ಲರಿಗೂ ಅಡಿಗೆ ಮಾಡುವುದಕ್ಕೆ ಸೌದೆ ಬೇಕು. ಪ್ರತಿ ದಿವಸವೂ ಈ ಸಮಸ್ಯೆ ಉಲ್ಬಣಿಸುತ್ತಿದೆ. ಈ ದೃಷ್ಟಿಯಿಂದ ಅನೇಕ ಖಾಸಗಿ ಮನುಷ್ಯರಿಗೆ ನಾವು ಹೇಳುತ್ತಿದ್ದೇವೆ; 'ನಾವು ಸೊಸಿ ಮುಫತ್ತಾಗಿ ಕೊಡುತ್ತೇವೆ, ಈ ಅವಕಾಶವನ್ನು ಉಪಯೋಗಿಸಿಕೊಳ್ಳಿ, ಎಂದು. ಆದರೂ ಜನರು, ನಾವು ಯಾವ ಪ್ರಮಾಣದಲ್ಲಿ ಅಪೇಕ್ಷಿಸುತ್ತೇವೆಯೋ ಅಷ್ಟು ಪ್ರಮಾಣದಲ್ಲಿ ಮುಂದೆ ಬರುತ್ತಿಲ್ಲ. ಮಾನ್ಯ ಸದಸ್ಯರು ಮನಸ್ಸು ಮಾಡಿದರೆ ಈ ವಿಷಯದಲ್ಲಿ ಹೆಚ್ಚು ಸಾಧಿಸಬಹುದೆಂದು ಕಾಣುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹೊಸಕೋಟೆ ತಾಲ್ಲೂಕಿಗೆ ಹದಿನೈದು ಮೈಲಿ ದೂರದಲ್ಲಿ ಎಂದರೆ ಹೊಸಕೋಟೆಯಲ್ಲಿ ಕಾಸುರೀನಾ ಪ್ಲಾಂಟೇಷನ್ನನ್ನು ಮಾಡಲಾಗಿತ್ತು. ಅಲ್ಲಿ ಟ್ರಾಕ್ಟರುಗಳನ್ನು ಉಪಯೋಗಿಸಿ ಸುಮಾರು ಆರು ಸಾವಿರದಿಂದ ಒಂಭತ್ತು ಸಾವಿರದವರೆಗೆ ಖರ್ಚು ಮಾಡಿ ಒಂದು ಸಾವಿರಕ್ಕೆ ಮೇಲ್ಪಟ್ಟು ಸರ್ವೆ ಮರಗಳನ್ನು ಬೆಳೆಯಬೇಕೆಂದು ಇದ್ದುದನ್ನು ಏಕೆ ನಿಲ್ಲಿಸಿಬಿಟ್ಟರು ?

ಶ್ರೀ ಹೆಚ್. ಎಸ್. ರುದ್ರಪ್ಪ.—ಅದನ್ನು ನಿಲ್ಲಿಸಿಲ್ಲ. ಈಗ ಬೇರೆ ರೀತಿಯಿಂದ ಅಲ್ಲಿ ಕೆಲಸ ನಡೆಯುತ್ತಿದೆ. ಹೊರದೇಶದಿಂದ ಬಂದ ತಜ್ಞರು ಈಗ ಮಾಡುತ್ತಿರುವ ವಿಧಾನದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಮಾಡಿದ್ದಾರೆ. ಅದರಂತೆ ಮಾಡಿದರೆ ಈಗ ಮಾಡುತ್ತಿರುವುದಕ್ಕಿಂತ ಸ್ವಲ್ಪ ಹೆಚ್ಚಿನ ಉಪಯೋಗಗಳು ಇದರಿಂದ ದೊರಕುತ್ತವೆ ಮತ್ತು ಚೆನ್ನಾಗಿ ಆಗುತ್ತದೆ. ಎನ್ನುವ ದೃಷ್ಟಿಯಿಂದ ಈ ಕೆಲಸವನ್ನು ಮಾಡಲಾಗುತ್ತಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಬೆಂಗಳೂರಿನಲ್ಲಿ ಕೋಲ್ ಗ್ಯಾಸಿನ ಸಿಸ್ಟಂನ್ನು ಇಂಟ್ರೊಡ್ಯೂಸು ಮಾಡಿ ಸೌದೆ ಅಭಾವವನ್ನು ಕಡಮೆ ಮಾಡಬಹುದಲ್ಲವೇ ?

ಶ್ರೀ ಹೆಚ್. ಎಸ್. ರುದ್ರಪ್ಪ.—ಕಡಮೆ ಮಾಡಬಹುದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ಈ ರೀತಿಯಾಗಿ ಮಧ್ಯದಲ್ಲಿ ಪ್ರಶ್ನೆಗಳನ್ನು ಕೇಳುವುದು ಸರಿಯಾಗಿರುವುದಿಲ್ಲ. ಮಂತ್ರಿಗಳು ಹೇಳುವುದನ್ನೆಲ್ಲ ಪೂರ್ತಿಯಾಗಿ ಹೇಳಲಿ, ಅನಂತರ ಯಾವದಾದರೂ ಒಂದು ಪ್ರಶ್ನೆಯನ್ನು ಕೇಳಬೇಕಾದರೆ ಆಗ ಕೇಳಬಹುದು. ಅದು ಸರಿ ಹೋಗುತ್ತದೆ. ಹೀಗೆ ಮಧ್ಯದಲ್ಲೆ ಪ್ರಶ್ನೆಗಳನ್ನು ಕೇಳಿದರೆ ಮಂತ್ರಿಗಳು ಒಂದು ರೀತಿಯಾಗಿ ಎಲ್ಲವನ್ನೂ ಹೇಳುತ್ತ ಬರುತ್ತಿರುವುದರಿಂದ ಕೆಲವು ವೇಳೆ ಏನನ್ನೋ ಹೇಳದೆ ಮರೆತು ಹೋಗಿ ಬಿಡಬಹುದು. ಅಲ್ಲದೆ ಈ ತರಹದ ಒಂದು ವ್ಯವಸ್ಥೆಯಿಲ್ಲದೆ ಸುಮ್ಮನೆ ಪ್ರಶ್ನೆಯನ್ನೇ ಕೇಳುತ್ತಹೋದರೆ ಸುಮ್ಮನೆ ಕಾಲ ವ್ಯರ್ಥವಾಗಿ ಖರ್ಚಾಗುತ್ತದೆ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು ಮಂತ್ರಿಗಳು ಪೂರ್ತಿಯಾಗಿ ಉತ್ತರಗಳನ್ನು ಕೊಟ್ಟನಂತರ ಯಾವುದಾದರೂ ಪ್ರಶ್ನೆಯನ್ನು ಕೇಳತಕ್ಕ ಸಂಪ್ರದಾಯವನ್ನು ಇಟ್ಟುಕೊಳ್ಳುವುದು ಸೂಕ್ತವಾಗಿದೆ ಎಂದು.

ಅಧ್ಯಕ್ಷರು.—ನಾನು ಮಾನ್ಯ ಮಂತ್ರಿಗಳಲ್ಲೆ ಒಂದು ವಿಚಾರವನ್ನು ಹೇಳಬೇಕಾಗಿದೆ. ತಾವು ಉತ್ತರವನ್ನು ಹೇಳುತ್ತ ಹೋದರೆ ಅವರು ಪ್ರಶ್ನೆ ಕೇಳುತ್ತ ಹೋಗುತ್ತಾರೆ. ತಾವು ಹೀಗೆ ಔಟ್ ಬೈಸ್, ಮಾಡುವುದರಿಂದ ನಿಮಗೂ ತೊಂದರೆಯಾಗುತ್ತದೆ. ತಾವೇ ಹೀಗೆ ಮಾಡಿದರೆ ನಾನು ಏನೂ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಎಸ್. ರುದ್ರಪ್ಪ.—ಶ್ರೀಮಾನ್ ಹನುಮಯ್ಯನವರು ತಂಗಡಿ ಚಕ್ಕೆ ವಿಚಾರವಾಗಿ ಹೇಳಿದರು. ಇದನ್ನು ಫಾರೆಸ್ಟಿನ ಇಲಾಖೆಯವರು ಹರಾಜು ಮಾಡುತ್ತಿದ್ದಾರೆ. ಹೀಗೆ ಹರಾಜು ಮಾಡುವುದನ್ನು ಹರಿಜನರಿಗೆ ಮತ್ತು ಇದರಿಂದಲೇ ಕೆಲಸ ಮಾಡತಕ್ಕವರಿಗೆ ಈ ತಂಗಡಿ ಚಕ್ಕೆಯನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ಹೇಳಿದರು. ಆದರೆ ಸರಕಾರವೇನೋ ಕೊಡಬಹುದು. ಆದರೆ ಇದರ ಜವಾಬ್ದಾರಿಯನ್ನು ಯಾರಾದರೂ ವಹಿಸಿಕೊಂಡರೆ ಹರಾಜಿನ ರೇಟಿಗಿಂತ ಒಂದು ರೀತಿಯಾದ ಅವರೇಜು ರೇಟಿಗೆ ಬೇಕಾದರೂ ಕೊಡಲು ತಯಾರಿದ್ದೇವೆ. ಹಾಗೆ ಯಾರಾದರೂ ಮುಂದೆ ಬಂದರೆ ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಟಿ. ಹನುಮಯ್ಯ.—ಥ್ಯಾಂಕ್ಸ್.

ಶ್ರೀ ಹೆಚ್. ಎಸ್. ರುದ್ರಪ್ಪ.—ಇನ್ನು ಕೆಲವರು ಮಾನ್ಯ ಸದಸ್ಯರು ಪಶುವೈದ್ಯ ಇಲಾಖೆಗೆ ಸರಬರಾಜು ಕಡಮೆಯಾಗಿದೆ. ಹೊಸದಾಗಿ ಬಂದಿರುವ ಬಾಂಬೆ ಕರ್ನಾಟಕ ಏರಿಯಾದಲ್ಲಿ ಬಹಳ ಕಡಮೆಯಾಗಿದೆ, ಸ್ವಲ್ಪ ಜಾಸ್ತಿ ಕೊಡಬೇಕು ಎಂದು ಹೇಳಿದ್ದಾರೆ. ಇನ್ನೂ ಅನೇಕ ಸದಸ್ಯರು, ಶ್ರೀಮಾನ್ ಸಿದ್ಧಾಂತಿಗಳವರು ಮತ್ತು ಇನ್ನೂ ಇಬ್ಬರು ಮೂವರು ಈ ವಿಚಾರವನ್ನು ಹೇಳಿದ್ದಾರೆ ಮತ್ತು ಶ್ರೀಮಾನ್ ಸುರಪೂರ್‌ರವರೂ ಹೇಳಿದ್ದಾರೆ. ಅವರು ಹೇಳಿರುವ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಹೋದ

(ಶ್ರೀ ಎಚ್. ಎಸ್. ರುದ್ರಪ್ಪ)

ವರ್ಷದ ಪಾಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ಮಾಡಬೇಕು ಎಂದು ಯೋಚನೆ ಮಾಡಿದ್ದೆವು. ಅಲ್ಲದೆ ಈಗಿನ ಲೆಕ್ಕಗಳನ್ನು ತೆಗೆದುಕೊಂಡರೆ ಇದಕ್ಕಾಗಿ ಪಾಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರುವುದು ಬಹಳ ಕಡಮೆಯಾಗಿದೆ. ಅದನ್ನು ಸ್ವಲ್ಪ ಹೆಚ್ಚು ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಈಗ ನಮ್ಮಲ್ಲಿ ಇದಕ್ಕಾಗಿ ಟೆಕ್ನಿಕಲ್ ಪರ್ಸನಲ್ ಇಲ್ಲದೆ ಬಹಳ ತೊಂದರೆಯಾಗಿದೆ. ಇದಕ್ಕಾಗಿ ಈಗ ಈ ಇಲಾಖೆಯಲ್ಲಿರುವ ಕೆಲವು ಸ್ಟಾಕುಮೆನ್ನುಗಳಿಗೆ ಟ್ರೇನಿಂಗನ್ನು ಕೊಡಲಾಗುತ್ತಿದೆ. ಮತ್ತು ಈಗ ಎಲ್ಲೆಲ್ಲಿ ಈ ಪಶುವೈದ್ಯ ಶಾಲೆಗಳಿಲ್ಲವೋ ಅಲ್ಲೆಲ್ಲ ಕೊಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಮತ್ತು ಇದಕ್ಕಾಗಿ ಕಟ್ಟಡಗಳು ಬೇಕಾಗುತ್ತದೆ. ಎಷ್ಟೋ ಕಡೆ ಕಟ್ಟಡಗಳನ್ನು ಕೂಡ ಕೊಡುತ್ತೇವೆಂದು ಜನ ಮುಂದೆ ಬರುತ್ತಿದ್ದಾರೆ. ಇದರಲ್ಲಿ ಏನೂ ಸಂದೇಹವಿಲ್ಲ. ಆದರಿಂದ ಎಲ್ಲೆಲ್ಲಿ ಸೂಕ್ತವಾದ ಸ್ಥಳಗಳಿದೆಯೋ ಅಲ್ಲೆಲ್ಲ ಈ ರೀತಿಯಾದ ಆಸ್ಪತ್ರೆಗಳನ್ನು ಸ್ಥಾಪನೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ.

ಎರಡನೆಯದು ಬಹು ಮುಖ್ಯವಾದುದು. ಈ ಆಹಾರದ ಸಮಸ್ಯೆ. ಇದು ಬಹಳ ಮುಖ್ಯವಾದುದು ಎಂದು ಹೇಳುವುದೇ ಅನಾವಶ್ಯಕ ಎಂದು ತೋರುತ್ತದೆ. ಏಕೆಂದರೆ ಈ ಆಹಾರದ ಸಮಸ್ಯೆ ಪ್ರತಿಯೊಬ್ಬರ ಮನಸ್ಸನ್ನೂ ಕೆರಳಿಸುವಂತಹ ಸಮಸ್ಯೆ. ಇದು ಮೈಸೂರು ದೇಶದ ಸಮಸ್ಯೆಯೊಂದೇ ಅಲ್ಲ. ಇಂಡಿಯಾ ದೇಶದ ಸಮಸ್ಯೆಯೂ ಆಗಿದೆ. ಇದನ್ನು ಏಕೆ ಹೇಳುತ್ತೇನೆಂದರೆ ನಾವು ಹೆಚ್ಚಿಗೆ ಬೆಳೆದಿದ್ದೇವೆ ಎಂದು ತಿಳಿದುಕೊಂಡು ಅಂಕಿ ಸಂಖ್ಯೆಗಳನ್ನು ಕೊಟ್ಟರೆ ಮಾನ್ಯ ಸದಸ್ಯರು ಒಪ್ಪುವುದಿಲ್ಲ. ನಮ್ಮ ದೇಶದಲ್ಲಿ ಕಂಟ್ರೋಲು ಮಾಡಿದಾಗ ಹೆಚ್ಚಿಗೆ ಬೆಳೆಯಾಗುತ್ತಿಲ್ಲ ಎಂದು ಹೊರಗಡೆಯಿಂದ ತರಿಸಿಕೊಳ್ಳುತ್ತಿದ್ದುದು ಇದರಿಂದ ಗೊತ್ತಾಗುತ್ತದೆ. ಈಗ ಆ ರೀತಿ ಒಂದು ನಿರ್ಬಂಧವಿಲ್ಲದೆ ಇರುವುದರಿಂದ ಈ ರೀತಿಯಾದ ಅನುಮಾನಕ್ಕೆ ಕಾರಣವಾಗಿದೆ. ಯಾವಾಗಲೂ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಯಾರನ್ನು ಸಂತೋಷಪಡಿಸುವುದಕ್ಕಾಗಲಿ ಅಥವಾ ವಂಚನೆ ಮಾಡುವುದಕ್ಕಾಗಲಿ ಎಂದು ಮಾತನಾಡುವುದು ತಪ್ಪು. ಮೇಲಾಗಿ ಅಂಕಿ ಸಂಖ್ಯೆಗಳನ್ನು ತೆಗೆದುಕೊಳ್ಳುವುದು ಇಂಡಿಯಾ ಸರಕಾರದವರು. ನಮಗಿಂತ ಅವರಿಗೆ ಹೆಚ್ಚಿನ ಆಸಕ್ತಿಯಿದೆ. ಇಂಡಿಯಾ ಸರಕಾರದವರು ಇಲ್ಲಿ ಜಾಸ್ತಿಯಾಗಿದೆ ಎಂದು ತಿಳಿದರೆ ಅದನ್ನು ತನಿಖೆ ಮಾಡುತ್ತಾರೆ. ಇಲ್ಲಿನ ಆಹಾರದ ಪರಿಸ್ಥಿತಿ ಹೇಳಿದೆ ಎನ್ನುವುದು ತಮಗೆಲ್ಲ ಗೊತ್ತಿದೆ. ಸುಮಾರು 50ನೆಯ ಇಸವಿಯಿಂದ ಆ ಆಹಾರವನ್ನು ಹೊರಗಿನಿಂದ ತರಿಸುತ್ತಿದ್ದಾರೆ. 1951-52ನೆಯ ಸಾಲಿನಲ್ಲಿ 214ಕೋಟಿ ರೂಪಾಯಿಗಳ ಆಹಾರ ಪದಾರ್ಥಗಳನ್ನು ಹೊರಗಿನಿಂದ ತರಿಸಿದ್ದಾರೆ. ಮೊದಲನೇ ಪಾಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಖರ್ಚನ್ನು ಮಾಡಬೇಕೆಂದಿತ್ತು. ಬಹುಶಃ ಅಷ್ಟು ಖರ್ಚು ಮಾಡುವುದಕ್ಕಾಗಲಿಲ್ಲ. ದೇಶದಲ್ಲಿ ಆಹಾರವನ್ನು ಒದಗಿಸಬೇಕು ಎಂದು 1951-52ನೆಯ ಸಾಲಿನಿಂದಲೂ ಹೇಳುತ್ತ ಬಂದಿದ್ದಾರೆ. 1955ನೆಯ ಸಾಲಿನಲ್ಲಿ ಸುಮಾರು 35ಕೋಟಿ ರೂಪಾಯಿಗಳಷ್ಟು ಆಹಾರವನ್ನು ಮಾತ್ರ ತರಿಸಿದರು. ಅಲ್ಲದೆ ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಸಕಾಲದಲ್ಲಿ ಮಳೆಯೂ ಬಂದದ್ದರಿಂದ ಒಳ್ಳೆಯ ಬೆಳೆಯಾಯಿತು. ಆದರೆ 1956ನೆಯ ಜನವರಿ ವೇಳೆಗೆ ಆಹಾರ ಪದಾರ್ಥಗಳು ಚೆನ್ನಾಗಿ ಬೆಳೆದುದರಿಂದ ದೇಶದಲ್ಲಿ ಆಹಾರ ಪದಾರ್ಥಗಳ ಧಾರಣೆ ಬಿದ್ದು ಹೋಯಿತು. ಇದು ಮಾನ್ಯ ಸದಸ್ಯರೆಲ್ಲರಿಗೂ ತಿಳಿದಿರುವ ವಿಚಾರ. ಬೇಕಾದರೆ ಈ ಸಭೆಯ ಪ್ರೊಸೀಡಿಂಗ್ಸನ್ನು ಬೇಕಾದರೂ ತೆಗೆಸಿ ನೋಡಿದರೆ ತಮಗೇ ಎಲ್ಲ ಗೊತ್ತಾಗುತ್ತದೆ. ಆಗ ನಿಮ್ಮಗಳೆಲ್ಲರಿಂದಲೂ ಈ ಆಹಾರ ಪದಾರ್ಥಗಳನ್ನು ಕಳುಹಿಸುವುದಕ್ಕೆ ಪರ್ಮಿಟ್ಟುಗಳನ್ನು ಕೊಡಬೇಕೆಂಬ ಕೂಗು ಎಲ್ಲೆಲ್ಲಿಯೂ ಹರಡಿತು. ಹಾಗೆಯೇ ಅಲ್ಪ ಸ್ವಲ್ಪ ಕಳುಹಿಸುವುದಕ್ಕೆ ಪರ್ಮಿಷನ್ನನ್ನು ಕೂಡ ಕೊಡಲಾಯಿತು. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ದೇಶದ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ತಿಳಿಸುವುದಕ್ಕೋಸ್ಕರ. ನಮ್ಮ ಮೈಸೂರು ದೇಶದಲ್ಲಿ ನೂರಕ್ಕೆ 92 ಪಾಲು ಮಳೆಯ ನೀರನ್ನು ಅನುಸರಿಸಿಕೊಂಡು ಬೆಳೆಯನ್ನು ಮಾಡುವುದೇ ಹೆಚ್ಚು. ಆದರೆ ಇಂಡಿಯಾ ದೇಶದಲ್ಲಿ ನೂರಕ್ಕೆ 80ರಿಂದ 90 ಭಾಗದಷ್ಟು ಜಮೀನುಗಳಿಗೆ ವಾಟರ್ ಸಪ್ಲೈ ಸರಿಯಾಗಿದ್ದರೆ ಬೆಳೆ ಚೆನ್ನಾಗಿ ಆಗುತ್ತದೆ. ಇಲ್ಲದೆ ಇದ್ದರೆ ಬೆಳೆ ಚೆನ್ನಾಗಿ ಆಗುವುದಿಲ್ಲ. 1954-55 ಮತ್ತು 1955-56ರಲ್ಲಿ ಸಾಕಷ್ಟು ಮಳೆಯಾಯಿತು. ಬೆಳೆಯೂ ಆಯಿತು. 1956ನೆಯ ಇಸವಿಯಲ್ಲಿ ಬೆಳೆ ಹೆಚ್ಚಾದುದರಿಂದ ಧಾರಣವಾಸಿಗಳೂ ಸ್ವಲ್ಪ ಇಳಿದವು. ಆದರೆ ಹೊರಗಡೆಗೆ ಕಳುಹಿಸಲು ಅವಕಾಶವಾದ್ದರಿಂದ ಮತ್ತೆ ಧಾರಣೆಗಳು ಏರಿದವು. 1956ನೆಯ ಇಸವಿ ಸೆಪ್ಟಂಬರು ವೇಳೆಗೆ ಮಳೆಯೇ ಬಾರದ್ದರಿಂದ ಅಭಾವ ಬಂದಿತು. 1957-58ರಿಂದ ಇಂಡಿಯಾ ಸರಕಾರದಿಂದ ನಮ್ಮ ಸರಕಾರಕ್ಕೆ ಸ್ವಲ್ಪ ಸಹಾಯ ಕೂಡ ದೊರಕಿತು. ಈ ರೀತಿಯ ಆಹಾರದ ಅಭಾವವು ಬಿಜಾಪುರ, ಧಾರವಾಡ, ಗುಲ್ಬರ್ಗ ಮತ್ತು ರಾಯಚೂರು ಈ ಕಡೆಗಳಲ್ಲಿ ಕಂಡುಬಂದಿತು. ಈ ವರ್ಷ ಎಂದರೆ 1957ನೆಯ ಸಾಲಿನಲ್ಲಿ ಹಳೆಯ ಮೈಸೂರಿನಲ್ಲಿ ಕೋಲಾರ, ತುಮಕೂರಿನ ಕೆಲವು ಭಾಗಗಳಲ್ಲಿ ಮತ್ತು ಇನ್ನು ಕೆಲವು ಕಡೆಗಳಲ್ಲಿ ಈ ಆಹಾರದ ಅಭಾವದಿಂದ ತೊಂದರೆಯಾಯಿತು. ಹೀಗೆ ನಮ್ಮ ದೇಶದಲ್ಲಿ ನೂರಕ್ಕೆ 92ಭಾಗ ನಿರಾವರಿ ಸೌಕರ್ಯಗಳಿಲ್ಲದಿರುವುದರಿಂದ ಮಳೆಯನ್ನೇ ಅವಲಂಬಿಸಿರುವುದರಿಂದ ಬೆಳೆಯ ಲೆಕ್ಕಾಚಾರವೂ ಕಡಮೆಯಾಗುತ್ತಿದೆ. 1957ನೆಯ ಇಸವಿಯಲ್ಲಿ ಮಳೆಯ ಅಭಾವದಿಂದ ದೇಶದಲ್ಲಿ ಬೆಳೆಯ ಅಭಾವವೂ ಆಯಿತು.

ಉತ್ತರ (ಯುನೈಟೆಡ್) ಪ್ರದೇಶ ಬಿಹಾರ, ಬಂಗಾಳ ಮತ್ತು ನಮ್ಮ ದೇಶದಲ್ಲಿ ಹೀಗಾಗಿರುವುದರಿಂದ ಈ ದೇಶದಲ್ಲಿ ಅಭಾವ ಕಾಣಬಹುದು. ವ್ಯವಸಾಯದಲ್ಲಿ ಅಭಿವೃದ್ಧಿಮಾಡುತ್ತೇವೆ, ಹೆಚ್ಚಿಗೆ ಆಹಾರ ಉತ್ಪನ್ನ ಮಾಡುತ್ತೇವೆಂದು ಹೇಳುತ್ತ ಬಂದರೂ ಸಹ ಅದು ಸಾಧ್ಯವೇ ಎನ್ನುವ ಅನುಮಾನ ಬಂತು. ನಮಗೂ ಅನುಮಾನ ಬಂದಿದೆ. ಎಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿದ್ದೇವೆ ಅಲ್ಲಿ ಸ್ವಲ್ಪ ಪ್ರೋಗ್ರೆಸ್ ನಿಧಾನವಾಗಿದೆ, ನಿರೀಕ್ಷಣೆ ಮಾಡಿದಷ್ಟು ಅಭಿವೃದ್ಧಿಯಾಗಿಲ್ಲ. ತುಂಗಭದ್ರ ಯೋಜನೆಗೆ 60 ಕೋಟಿ ರೂಪಾಯಿ ಖರ್ಚು ಮಾಡಿ, ಸಾಗುವಳಿ ಮಾಡಿ ಆಹಾರೋತ್ಪತ್ತಿ ಮಾಡುತ್ತೇವೆ ಎಂದು ಹೇಳುತ್ತಿದ್ದರೂ ಅಷ್ಟಾಗಿಲ್ಲ. ದೊಡ್ಡ ದೊಡ್ಡ ಯೋಜನೆಗಳಲ್ಲಿ ತೊಂದರೆಯಾಗಿದೆ. ಬಾಕಿ ಕಡೆ ಚೆನ್ನಾಗಿ ನಡೆದಿದೆ. ಎಲ್ಲ ಕಡೆಗಳಲ್ಲಿಯೂ ಎಷ್ಟು ಚೆನ್ನಾಗಿ ವ್ಯವಸಾಯಾಭಿವೃದ್ಧಿಯಾಗಬೇಕೆಂದು ಯೋಚಿಸಿತ್ತೋ ಅಷ್ಟು ಚೆನ್ನಾಗಿ ನಡೆಯಲಿಲ್ಲವೆಂದು ನಮಗೆ ನೋವಾಗುತ್ತಿದೆ. ನಾವು ನಿರೀಕ್ಷಿಸಿದಷ್ಟು ಬೆಳೆ ಬರುತ್ತದೆಂದು ಹೇಳಲು ಸಾಧ್ಯವಿಲ್ಲ. ಫಸಲು ಮನೆಗೆ ಬರುವವರೆಗೂ ಎಷ್ಟು ಬರುತ್ತದೆಂದು ಲೆಕ್ಕಹಾಕಿ ಹೇಳುವುದಕ್ಕೆ ಯಾರಿಗೂ ಆಗುವುದಿಲ್ಲ. ಬಿತ್ತು

ವುದರಲ್ಲಿ ತೊಂದರೆಯಾಗಿ, ಬೆಳೆಯಲ್ಲಿ ತೊಂದರೆಯಾಗಿ, ಮಳೆ ಹೆಚ್ಚಿಗೆ ಬಂದು ಅಥವಾ ಕ್ರಿಮಿಕೀಟಗಳಿಂದ ತೊಂದರೆಯಾಗಿ ಫಸಲು ಕಡಮೆ ಬರಬಹುದು. ಆದುದರಿಂದ ಇಷ್ಟೇ ಬೆಳೆ ಬರುತ್ತದೆಂದು ಲೆಕ್ಕ ಹಾಕುವುದಕ್ಕಾಗುವುದಿಲ್ಲ. ವ್ಯವಸಾಯ ಅಭಿವೃದ್ಧಿಯಾಗಿ ಬೆಳೆಯಾದರೆ, ಆ ಪ್ರಕಾರ ಲೆಕ್ಕ ಹಾಕಿದರೆ ನಮ್ಮ ದೇಶ self-sufficient ಆಗಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಒಂದು ವರ್ಷ ಮಳೆ ಬರುವುದಿಲ್ಲವೆಂದರೂ ನಮ್ಮ ದೇಶ ಆಹಾರದಲ್ಲಿ self-sufficient ಆಗಿದೆ ಎಂದು ಲೆಕ್ಕ ತೆಗೆದುಕೊಳ್ಳುವಂತೆ ಇರಬೇಕಾದದ್ದು ನ್ಯಾಯವಾದುದು. ಇದಕ್ಕೆ ಹೆಚ್ಚು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬುದು ಪ್ರಾಮುಖ್ಯವಾದುದು ಎಂದು ನಮ್ಮ ದೇಶದ ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ಅವರಿಗಿರತಕ್ಕ ತೀಕ್ಷ್ಣತೆ ನಮ್ಮಲ್ಲಿಲ್ಲ. ಆದುದರಿಂದ ಈ ತೊಂದರೆಯಾಗಿದೆ. ಇಷ್ಟು ಹೇಳಿ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ವರ್ಷ ಏನೇನು ಮಾಡುತ್ತೇವೆಂದು ತಮಗೆಲ್ಲ ತಿಳಿಸಬೇಕಾದದ್ದು ನಮ್ಮ ಕರ್ತವ್ಯ. ಅದಕ್ಕೋಸ್ಕರ grow more food campaignನಲ್ಲಿ ಏನೇನು ಮಾಡುತ್ತೇವೆಂಬುದನ್ನು pamphlets ಮೂಲಕ ತಿಳಿಸಿದ್ದೇವೆ. ಈ ಸಲವೂ ಅದೇ ರೀತಿ ಮಾಡಬೇಕೆಂದು ತಿಳಿಸಿದ್ದೇವೆ. ಇದರಿಂದ ಯಾವ ರೀತಿ ವ್ಯವಸಾಯಾಭಿವೃದ್ಧಿ ಆಗುತ್ತದೆಂಬುದು ತಿಳಿಯುತ್ತದೆ. ನಮ್ಮ ದೇಶದಲ್ಲಿ commercial crops ಹೆಚ್ಚಿಗೆ ಆಗುತ್ತಿದೆ. ಇದಕ್ಕೆ ಹೆಚ್ಚಿಗೆ ಗಮನ ಕೊಡಬೇಕು. ದುಡ್ಡಿನ ಬೆಳೆಯನ್ನು ಅನಾದರಣೆ ಮಾಡುವುದಕ್ಕಾಗುವುದಿಲ್ಲ. ತೆಂಗು, ಅಡಿಕೆ, ಹತ್ತಿ, ಸೇಂಗಾ ಮುಂತಾದ commercial crops ಇವೆ. ಹತ್ತಿ, ಸೇಂಗಾ ಬಹಳ ಚೆನ್ನಾಗಿ ಬೆಳೆಯುವುದಕ್ಕೆ ಅನುಕೂಲವಿದೆ. Commercial crops ವಿಷಯದಲ್ಲಿಯೂ ಹೆಚ್ಚಿಗೆ ಮುತುವರ್ಜಿ ವಹಿಸಬೇಕಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮೈಸೂರು ದೇಶದ ಮ್ಯಾಪುಗಳ ಒಂದು ಪುಸ್ತಕವನ್ನು ಕೊಟ್ಟಿದ್ದಾರೆ. ಅದರಲ್ಲಿರುವ ಅಂಕಿಅಂಶಗಳನ್ನು ನೋಡಿದರೆ net area sown (in thousands of acres) 24,422 Mysore State Map. The net area sown is 24,422 thousand acres. Total food grown 22,74,200 thousand acres.

How absurd these figures are and you give it in cold print—page 11 of the Mysore State in Map.

The net area sown is more than the total area under food and non-food crops (page 16).

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ವೇರಿಫೈ ಮಾಡಿ ನಾಳೆ ಹೇಳುತ್ತೇನೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಒಂದೇ ಒಂದು ವಿಷಯವಿದೆ. From the point of utility, how do you compare big irrigation projects with the small irrigation projects ?

ಶ್ರೀ ಎಚ್. ಎಸ್. ರುದ್ರಪ್ಪ.—Small and medium irrigation ಪ್ರಾಜೆಕ್ಟ್‌ಗಳಿಂದ ಅನುಕೂಲತೆಗಳು ಜಾಸ್ತಿ ಇವೆ. ಅದನ್ನು ಮಾಡಬೇಕೆಂದು ಇಂಡಿಯಾ ಸರ್ಕಾರದವರು ತೀರ್ಮಾನಿಸಿ ಈಗಾಗಲೇ ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಿನ್ನೆ ತಾನೇ ಮಾನ್ಯ ವೀರಣ್ಣಗೌಡರು ಹೇಳಿದ್ದಾರೆ, ಸ್ಪೆಷಲ್ ಸಬ್‌ಡಿವಿಜನ್ ಮಾಡಿ ಈ ಬಗ್ಗೆ ಕಾರ್ಯಕ್ರಮ ನಡೆಸುತ್ತಿದ್ದೇವೆಂದು ಇದರಲ್ಲಿ ಪ್ರೋಗ್ರೆಸ್ ನಿಧಾನವಾಗಿ ಕಾಣಬಹುದು. ನಾವು ಸ್ವಲ್ಪ ಕಾಲ ಕಾದು ನೋಡಬೇಕು. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಂದ ತಕ್ಷಣದಲ್ಲಿ ಪ್ರಯೋಜನವಾಗುವುದಿಲ್ಲವೆಂಬುದನ್ನು ಅರಿತೇ 1957-58ರಲ್ಲಿ ಇಂಡಿಯಾ ಸರ್ಕಾರದವರು ಸಣ್ಣ ಮತ್ತು ಮೀಡಿಯಂ ಕಾಮಗಾರಿಗಳಿಗೆ ಹೆಚ್ಚು ದುಡ್ಡನ್ನು ಒದಗಿಸಿದ್ದಾರೆ. ನಾವು ಒಂದೆರಡು ವರ್ಷ ಕಾದು ನೋಡಬೇಕಾಗಿದೆ.

ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕಾಲಾವಕಾಶವಿಲ್ಲದಿದ್ದರಿಂದ ಎಲ್ಲವನ್ನೂ ಪ್ರಸ್ತಾಪ ಮಾಡಬೇಕೆಂಬ ಆಸೆ ಇದ್ದರೂ ಸಾಧ್ಯವಿಲ್ಲ. ಆದರೂ ಎಷ್ಟು ಸಾಧ್ಯವೋ ಅಷ್ಟನ್ನು ತಿಳಿಸುತ್ತೇನೆ. ಹೆಚ್ಚಿಗೆ ಉತ್ಪತ್ತಿ ಮಾಡಬೇಕಾದರೆ ಭೂಮಿಯನ್ನು ಉಳಬೇಕು. ಭೂಮಿಯನ್ನು ನೀರಾವರಿಗೆ ಅನುಕೂಲವಾಗುವಂತೆ ಮಾಡಬೇಕಾದರೆ ಭೂಮಿಯನ್ನು ಸಮ ಮಾಡುವುದು, ಹೆಚ್ಚಿಗೆ ಭೂಮಿಯನ್ನು ವ್ಯವಸಾಯ ಯೋಗ್ಯವಾದುದನ್ನಾಗಿ ಮಾಡುವುದು ಮುಖ್ಯವಾದುದು. ಇದಕ್ಕೆ ಟ್ರಾಕ್ಟರ್ ಮತ್ತು ಬುಲ್‌ಡೋಜರ್ ಸರ್ವಿಸ್ ಇದೆ. ಇದರ ಬಗ್ಗೆ ಬಹಳ ಜನ ಸ್ನೇಹಿತರು ಮಾತನಾಡಿದ್ದಾರೆ. ಇದರದು ಒಂದು ಕಥೆ. ಇದು 1946-47ರಲ್ಲಿ ಪ್ರಾರಂಭವಾಯಿತು. ಮೆಷಿನರಿ ಹೊಸದು. ಅದಕ್ಕೆ ಸರಿಯಾದ ಮೆಕಾನಿಕ್ಸ್ ಇರಲಿಲ್ಲ ಮತ್ತು ಅದನ್ನು ನಡೆಸತಕ್ಕವರು ಇಲ್ಲದೆ ತೊಂದರೆಯಾಗಿ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳಿಂದ ಲುಕ್ಸಾನಾಯಿತು. ಆದರೆ ನಮ್ಮ ಜನರು ಇದರ ಸಹಾಯ ಬೇಕೆಂದು ಕೇಳುತ್ತಿರುವುದರಿಂದ ಸರ್ಕಾರದವರು ಇವು ಇರಲೇ ತೀರಬೇಕು ಎಂದು ಮಾಡಿರುವುದರಿಂದ ಹಳೆಯದನ್ನೇ ರಿಪೇರಿ ಮಾಡಿಸಿದ್ದೇವೆ. ಹೊಸ ಯಂತ್ರಗಳನ್ನು ತರಿಸಿದರೆ ಮತ್ತಷ್ಟು ಲುಕ್ಸಾನಾಗಬಹುದು ಎನ್ನುವ ದೃಷ್ಟಿಯಿಂದ ಟ್ರಾಕ್ಟರುಗಳನ್ನು ಕೊಳ್ಳಲು ಮುಂದೆ ಬರುವವರಿಗೆ ಸಹಾಯವನ್ನು ಕೊಡುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಟ್ರಾಕ್ಟರಿನಿಂದ ರೈತರು ಅಭಿವೃದ್ಧಿಯಾಗಬಹುದು ಎಂದು ಯೋಚನೆ ಮಾಡಿದ್ದಿರಿ. ಸರ್ಕಾರಕ್ಕೆ 30 ಲಕ್ಷ ರೂಪಾಯಿ ನಷ್ಟವಾದ ಮೇಲೆ ಈ ರೀತಿ ಮಾಡಿದ್ದೀರಿ. ಇಂಡಿಯಾ ಸರ್ಕಾರದಿಂದ ಕೊಡುವ ಗ್ರಾಂಟ್ lapse ಆಗುತ್ತದೆ. ಚನ್ನಗಿರಿ ತಾಲ್ಲೂಕು ಹೊಸಹಳ್ಳಿ ಗ್ರಾಮದಲ್ಲಿ ಒಂದು oil centre ಮಾಡಬೇಕೆಂದು ಸರ್ಕಾರ ನಾಲ್ಕು ಲಕ್ಷ ರೂಪಾಯಿ ಕೊಟ್ಟಿದೆ. ಇದುವರೆಗೂ ಕಾರ್ಯರೂಪಕ್ಕೆ ಬರಲಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಅದಕ್ಕೆ ನಾನು ಜವಾಬು ಹೇಳುತ್ತೇನೆ. ಟ್ರಾಕ್ಟರ್ ಮತ್ತು ಬುಲ್‌ಡೋಜರ್‌ನಿಂದ ಬಹಳ ಲುಕ್ಸಾನಾಗಿ ಈಗ ಬುದ್ಧಿವಂತರಾಗಿದ್ದೇವೆ. ಹೊಸದಾಗಿ ಟ್ರಾಕ್ಟರ್ ತೆಗೆದುಕೊಂಡು ವ್ಯವಸಾಯ ಮಾಡುತ್ತಾ ಇರುವವರು ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆ. ಈಗ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅದು ಒಂದೇ ಕೆಲಸಕ್ಕಲ್ಲ, ನಾನಾ ಕೆಲಸಗಳಿಗೆ ಉಪಯೋಗಿಸಲು ಸಾಧ್ಯವಿರುವುದರಿಂದ ಈಗ ಹೆಚ್ಚಿಗೆ ಡಿಮಾಂಡ್ ಬರುತ್ತಿದೆ. ಇದಕ್ಕಾಗಿ ಮೊದಲು ಐದು ಲಕ್ಷ ಮಂಜೂರಾಗಿತ್ತು. ಮತ್ತೆ ಐದು ಲಕ್ಷ ಬೇಕೆಂದು ಕೇಳಿದ್ದೇವೆ, ಕೊಟ್ಟಿದ್ದಾರೆ. ಟ್ರಾಕ್ಟರನ್ನು ಕೇಳಿರುವವರೆಲ್ಲ ದಡ್ಡರಲ್ಲ, ಬುದ್ಧಿವಂತರು. ಅವರಿಗೆಲ್ಲ ಇನ್ನೂ ಟ್ರಾಕ್ಟರ್‌ಗಳನ್ನು ಒದಗಿಸಲಿಕ್ಕೆ ಆಗಿಲ್ಲ. 30 ಟ್ರಾಕ್ಟರ್ ಬೇಕೆಂದು ಕೇಳಿದ್ದೇವೆ. ಬಂದ ಕೂಡಲೇ ಒದಗಿಸು

(ಶ್ರೀ ಹೆಚ್. ಎಸ್. ರುದ್ರಪ್ಪ)

ತ್ತೇವೆ. ಟ್ರಾಕ್ಟರುಗಳನ್ನು ಜನಗಳಿಗೆ ಒದಗಿಸತಕ್ಕದ್ದು ನಮ್ಮ ಜವಾಬ್ದಾರಿ. ಯಾರು ಚೆನ್ನಾಗಿ ಯಶಸ್ವಿಯಾಗಿ ಕೆಲಸ ಮಾಡುತ್ತಾರೋ ಅವರಿಗೆ ಕೊಡಬೇಕೆಂದು ಮಾಡಿದ್ದೇವೆ. ಆಮೇಲೆ ಶ್ರೀ ರುದ್ರಪ್ಪನವರು ಒಂದು ವಿಷಯ ಹೇಳಿದರು. ಹೊಸಹಳ್ಳಿ ಫಾರಂ ಇಂಡಿಯಾ ಸರ್ಕಾರದವರು ಮಾಡಬೇಕೆಂದು ಹೇಳಿದರು. ಆ ಚರಿತ್ರೆ ನಿಮಗೆ ಹೇಳಬಾರದು. ನಾನು ಬಂದ ಮೇಲೆ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷದಲ್ಲಿ 99 ಸ್ಕೀಮ್‌ಗಳನ್ನು ಕಳುಹಿಸಿದ. ಅಲ್ಲಿಗೆ ಇಲ್ಲಿಗೆ ಓಡಾಡಿ, ಇಂಡಿಯಾ ಸರ್ಕಾರದವರನ್ನು ಕಂಡು 55 ಸ್ಕೀಮ್‌ಗಳು ಸ್ಯಾಂಕ್ಷನ್ ಆಗಿವೆ; ಇದೂ ಒಂದು ಸ್ಕೀಮ್. ಏಕೆ ನಿಧಾನವಾಗಿದೆ ಎಂದರೆ, ಅವರು ಹೇಳುವ ಬೇಸಿಸ್ ಮೇಲೆ ವರ್ಕ್ ಮಾಡಿ ಫೈನಾಷಿಯಲ್ ಸ್ಯಾಂಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ದುಡ್ಡು ಇಲ್ಲ, ರಿಕರಿಂಗ್ ಮತ್ತು ನಾನ್-ರಿಕರಿಂಗ್ ಎಕ್ಸ್‌ಪೆಂಡಿಚರ್ ಕೊಡುವುದಕ್ಕಾಗುವುದಿಲ್ಲ ಎನ್ನುವ ಅಂಶ ಬಂದಿತು. ಪುನಃ ನಾವು ಬರೆಯಬೇಕಾಯಿತು. 99 ಸ್ಕೀಮ್‌ಗಳಲ್ಲಿ, 55 ಸ್ಕೀಮ್‌ಗಳನ್ನು ಅವರಿಂದ ಸ್ಯಾಂಕ್ಷನ್ ಪಡೆಯುವುದಕ್ಕೆ ಬಹಳ ಕಷ್ಟಪಟ್ಟಿದ್ದೇವೆ. ಅದರಲ್ಲಿ ಇದೂ ಒಂದು ಸ್ಕೀಮ್ ಸ್ಯಾಂಕ್ಷನ್ ಆಗಿದೆ. ಈ ಜಮೀನನ್ನು ಬೇರೆಯವರು ಅಕ್ರಮದಿಂದ ಸಾಗು ಮಾಡುತ್ತಿದ್ದಾರೆ ಸರ್ಕಾರ ಜಮೀನನ್ನು ಪಡೆಯುವುದಕ್ಕೆ, ಸರ್ಕಾರದವರಿಂದಲೂ ಆಗಿಲ್ಲ, ಇವರಿಂದಲೂ ಆಗಿಲ್ಲ ಆದ್ದರಿಂದ ಈ ವರ್ಷವೇ ಪ್ರಾರಂಭ ಮಾಡಬೇಕೆಂದಿದ್ದೇವೆ. ಸ್ಯಾಂಕ್ಷನ್ ಆಗಿದೆ ಅದನ್ನು ಪ್ರಯತ್ನ ಮಾಡಿ, ಶ್ರೀ ರುದ್ರಪ್ಪನವರೂ ಸಹಾಯ ಮಾಡಿ ಆ ಜಮೀನನ್ನು ಕೊಡಿಸಿ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇವೆ.

ಒಬ್ಬ ಸದಸ್ಯರು —ಹೊಸಹಳ್ಳಿ ವಿಚಾರ ಹೇಳಿದಿರಿ. ಕತ್ತಲಗೆರೆ ವಿಚಾರ ಹೇಳಿ.

ಶ್ರೀ ಎಚ್. ಎಸ್. ರುದ್ರಪ್ಪ.—ಅನೇಕ ಮಾನ್ಯ ಸದಸ್ಯರು ಬಹಳ ಕಡಮೆ ದರದಲ್ಲಿ ಬಾಡಿಗೆ ಕೊಡಬೇಕೆಂದು ಹೇಳಿದರು. ಶ್ರೀ ನರಸಿಂಹಯ್ಯನವರು ಎಷ್ಟು ಲುಕ್ಸಾನು ಮಾಡಿಕೊಳ್ಳುತ್ತೀರಿ ಎಂದು ಕೇಳಿದರು. ಸಾರ್ವಜನಿಕರ ಹಣವನ್ನು ಲುಕ್ಸಾನು ಮಾಡಿಕೊಳ್ಳತಕ್ಕಂಥಾದ್ದು ಸೂಕ್ತವಾದುದಲ್ಲ. ಆ ದೃಷ್ಟಿಯಿಂದ no profit, no loss basis ಮೇಲೆ ಕೆಲಸ ಮಾಡಬೇಕು ಎಂದು ನಾನು ಬಂದಮೇಲೆ ಮಾಡಿದ್ದೇನೆ. ಅದನ್ನೇ ಬಿಟ್ಟು ಬಿಟ್ಟು ಮಾಡಬೇಕು ಎಂದು ಹೇಳಿದರೆ ನಮಗೆ ಕಷ್ಟ ಬರುತ್ತದೆ. ಸ್ಪೇರ್ ಪಾರ್ಟ್ಸ್, ಮಿಷಿನರಿ, ರಿಪೇರಿ ಮುಂತಾದುವುಗಳನ್ನು ಸರ್ಕಾರದವರು ವಹಿಸಬೇಕು. ಇವತ್ತು ಎಷ್ಟು ಚೆನ್ನಾಗಿ ಕೆಲಸ ಮಾಡಬೇಕೋ ಅಷ್ಟು ಚೆನ್ನಾಗಿ ಮಾಡುತ್ತಾ ಇಲ್ಲ. ವಾರಕ್ಕೆ ಒಂದು ಸಾರಿ ರಿಪೋರ್ಟ್ ತರಿಸುತ್ತಿದ್ದೇವೆ.

ಬುಲ್‌ಡೋಜರ್ ರೇಟ್ ಕಡಿಮೆ ಮಾಡುವುದು ಸೂಕ್ತವಲ್ಲ. ಅದರಿಂದ ದೊಡ್ಡ ದೊಡ್ಡವರು ಕೆಲಸ ಮಾಡಿಸಿಕೊಳ್ಳುತ್ತಾರೆ. ಸಣ್ಣ ಸಣ್ಣವರು ಉಪಯೋಗಿಸುವುದಿಲ್ಲ. ಟ್ರಾಕ್ಟರುಗಳನ್ನು ಉಪಯೋಗಿಸಿಕೊಂಡು ಅವರು ಕೆಲಸಮಾಡಿಸಿಕೊಳ್ಳುವ ಅವಶ್ಯಕತೆ ಇದೆ. ಅವರಿಗೆ ಮಾತ್ರ ತಾವು ಏನು ಹೇಳಿದಿರೋ ಅದನ್ನು ಗಮನದಲ್ಲಿ ಇಟ್ಟುಕೊಂಡು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಹದಿನೈದು ರೂಪಾಯಿಗೆ ಜಾಸ್ತಿ ಮೀರಿರಬಾರದು.

ಶ್ರೀ ಎಚ್. ಎಸ್. ರುದ್ರಪ್ಪ.—ತಮ್ಮ ಮುಂದೆ ಸಲಹೆ ಇಡುತ್ತೇನೆ. ಬಹಳ ಲುಕ್ಸಾನು ಆಗಬಾರದು. ಇಂಡಿಯಾ ಸರ್ಕಾರದವರು ಒಪ್ಪಬೇಕು. ತಾವು ಕೊಟ್ಟಿರುವ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಟ್ರಾಕ್ಟರ್ ರೇಟ್ ಎಷ್ಟು ಕಡಮೆ ಮಾಡಬೇಕೋ, ಅಷ್ಟೂ ಮಾಡುತ್ತೇನೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಬೊಂಬಾಯಿ ಕರ್ಣಾಟಕದಲ್ಲಿ, ಹೈದರಾಬಾದು ಕರ್ಣಾಟಕದಲ್ಲಿ ಜನಗಳಲ್ಲಿ ದುಡ್ಡು ಇರುವುದಿಲ್ಲ, ತಕಾವಿ ಲೋನ್ ಕೊಟ್ಟು ರಿಕವರೀ ಮಾಡಿಕೊಳ್ಳಿ ಎಂದು ಹೇಳಿದರು. ಅದು ನ್ಯಾಯವಾದುದು. ಬಡವರಲ್ಲಿ ದುಡ್ಡು ಇರುವುದಿಲ್ಲ. ಸಾಲವನ್ನು ಕೊಟ್ಟು ಕಂತುಗಳಲ್ಲಿ ವಸೂಲು ಮಾಡತಕ್ಕದ್ದು ಸೂಕ್ತವಾದುದು ಎಂದು ನಾವು ಅಭಿಪ್ರಾಯಪಟ್ಟೆವು. ಮಾನ್ಯ ರೆವಿನ್ಯೂ ಮಂತ್ರಿಗಳು ಒಪ್ಪಿಕೊಂಡು, ಬೊಂಬಾಯಿ ಮತ್ತು ಹೈದರಾಬಾದು ಕರ್ಣಾಟಕದಲ್ಲಿ ಜಾರಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಮೈಸೂರು ದೇಶದಲ್ಲೆಲ್ಲಾ ಅವಶ್ಯಕವಾಗಿ ಜಾರಿಗೆ ತರತಕ್ಕದ್ದು ಒಳ್ಳೆಯದು. ಬಡವರಲ್ಲಿ ಅನೇಕ ಸಲ ದುಡ್ಡಿರುವುದಿಲ್ಲ. ಆ ದೃಷ್ಟಿಯಿಂದ ಇದನ್ನು ಜಾರಿಗೆ ಕೊಡುವುದಕ್ಕೆ ಮಾನ್ಯ ರೆವಿನ್ಯೂ ಮಿನಿಸ್ಟರ್ ಅವರು ಒಪ್ಪಿದ್ದಾರೆ.

ಅನೇಕ ಸದಸ್ಯರು ಟ್ರಾಕ್ಟರುಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು. ನಾನು ಬಂದಾಗಿನಿಂದ ನೋಡಿದೆ. ಜನಗಳಿಂದ ಇವುಗಳಿಗೆ ಡಿಮ್ಯಾಂಡ್ ಇರುತ್ತದೆ. ಹೈದರಾಬಾದು ಕರ್ಣಾಟಕ ಮತ್ತು ಬೊಂಬಾಯಿ ಕರ್ಣಾಟಕದಿಂದ ಬಂದ ಆಸ್ತಿ ಮುರಿದಿರುವುವು; ಮತ್ತು ಸಮಕಲಾಗಿರುವುವು ಒಂದೂ ಕೆಲಸಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಮೈಸೂರಿನಲ್ಲಿ ಸಹ ಹತ್ತು ಹನ್ನೆರಡು ಟ್ರಾಕ್ಟರುಗಳು, ನಾಲ್ಕೈದು ಬುಲ್‌ಡೋಜರ್‌ಗಳು ಇದ್ದುವು. ನಾನು ಬಂದಮೇಲೆ ಗ್ರೋ ಮೋರ್ ಫುಡ್ ಸ್ಕೀಮಿಗೋಸ್ಕರ ಕ್ಯಾಬಿನೆಟ್ಟಿನಲ್ಲಿ ಹಣ ಮಂಜೂರು ಮಾಡಿದೆ; ಆರ್ಥಿಕಮಂತ್ರಿಗಳೂ, ಶ್ರೀ ವೀರಣ್ಣ ಗೌಡರೂ ಮತ್ತು ರೆವಿನ್ಯೂ ಮಂತ್ರಿಗಳೂ ಇದ್ದರು. ಪ್ರಯತ್ನಮಾಡಿ ಅವರನ್ನು ಒಪ್ಪಿಸಿ ಇದರ ರಿಪೇರಿಗೆ ದುಡ್ಡನ್ನು ಒದಗಿಸಿರುತ್ತದೆ. ಇವತ್ತು ನಲವತ್ತೈದು ಟ್ರಾಕ್ಟರುಗಳು ಮೂವತ್ತೆರಡು ಬುಲ್‌ಡೋಜರುಗಳು ಕೆಲಸಮಾಡುತ್ತಿವೆ. ಇನ್ನೂ ಉಳಿದುವವನ್ನು ಏನು ಮಾಡಬೇಕು ಎಂದು ಪರಿಶೀಲನೆ ಮಾಡಿಸುತ್ತಾ ಇದ್ದೇವೆ. ಬುಲ್‌ಡೋಜರುಗಳನ್ನು ರಿಪೇರಿ ಮಾಡಿಸಲೇಬೇಕಾಗುತ್ತದೆ. ಹೊಸದಾಗಿ ಬುಲ್‌ಡೋಜರ್ ತರಿಸುವುದಕ್ಕಾಗುವುದಿಲ್ಲ. ಐದು ಸಾವಿರ ರೂಪಾಯಿ ಒಳಗೆ ದುಡ್ಡು ಖರ್ಚುಮಾಡಿ ಟ್ರಾಕ್ಟರು ರಿಪೇರಿ ಮಾಡಬಹುದು, ಅದಕ್ಕೆ ಜಾಸ್ತಿಯಾದುದನು ಮಾಡಬಾರದೆಂದು ತೀರ್ಮಾನಮಾಡಿದ್ದೇವೆ. ಎಂಜನೀಯರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಐವತ್ತು ನಾಲ್ಕು ಟ್ರಾಕ್ಟರುಗಳನ್ನು ರಿಪೇರಿಮಾಡುತ್ತಾ ಇದ್ದೇವೆ. ಹೋದ ವರ್ಷ 1,733 ಎಕರೆ ಟ್ರಾಕ್ಟರಿನಿಂದ ಸಾಗುವಳಿಗೆ ಬಂದಿತು, ಈ ವರ್ಷ 3,255 ಎಕರೆ ಸಾಗುವಳಿ ಆಗಿದೆ. ಈಗ ಇನ್ನೂ ಕಾಲ ಬಹಳ ಇದೆ. ಆದ್ದರಿಂದ ಹೆಚ್ಚಿಗೆ ಇದರಿಂದ ಉಪಯೋಗ ಪಡೆದಿದ್ದೇವೆ. ಇನ್ನು ಮೇಲೆ ಇನ್ನೂ ಹೆಚ್ಚಿಗೆ ಉಪಯೋಗವನ್ನು ತೆಗೆದುಕೊಳ್ಳಬೇಕು. ಇಷ್ಟು ಮಾತ್ರ ಹೇಳುತ್ತೇನೆ. ಬುಲ್‌ಡೋಜರ್‌ಗಳನ್ನು ಹೋದ ವರ್ಷ 11,108 ಘಂಟೆ ಓಡಿಸಿತ್ತು. ಬಹುಶಃ ಈ ವರ್ಷ ಡಿಸೆಂಬರ್ ಒಳಗೆ 15,428 ಘಂಟೆ ಕೆಲಸಮಾಡಿದೆ.

ನಾವು ರಿಪೋರ್ಟ್ ತರಿಸಿ ಉತ್ಪತ್ತಿ ಜಾಸ್ತಿಯಾಗಿದೆಯೆ ಇಲ್ಲವೆ ಎಂದು ನೋಡುತ್ತೇವೆ. ಆ ದೃಷ್ಟಿಯಿಂದ ಎಷ್ಟು ಚೆನ್ನಾಗಿ ಕೆಲಸಮಾಡಬೇಕೋ ಅಷ್ಟು ಚೆನ್ನಾಗಿ ಮಾಡಿಲ್ಲ ಎಂದು ನಮಗೆ ಅನ್ನಿಸುತ್ತದೆ. ಟ್ರಾಕ್ಟರು ಕೆಲಸ ಮಾಡುವ ವಿಷಯದಲ್ಲಿ ಸ್ವಲ್ಪ ತೊಂದರೆಯಾಗಿದ್ದರೆ ಅದಕ್ಕೆ ಅನೇಕ ಕಾರಣಗಳಿವೆ. ಡಿಸ್ಟ್ರಿಕ್ಟ್ ಅಗ್ರಿಕಲ್‌ಚರಲ್ ಆಫೀಸರು, ಡೆಪ್ಯುಟಿ ಡೈರೆಕ್ಟರು, ಡೈರೆಕ್ಟರು, ಇವರ ಮೂಲಕ ನಮಗೆ ಕಾಗದ ಬರುವುದು ಹೊತ್ತಾಗುತ್ತದೆ. ಆದ್ದರಿಂದ ಅಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದೇವೆ ಅಂದರೆ ನೀವು: ಒಂದು ಸ್ಥಳಕ್ಕೆ ಹೋದಕೂಡಲೇ ಅಲ್ಲಿರತಕ್ಕಂಥ ಮಾನ್ಯ ಸದಸ್ಯರನ್ನು ತಾರ್ತಾಗಿ ನೋಡಬೇಕು ಎಂದು ಹೇಳಿದ್ದೇವೆ. ಅವರನ್ನು ನೋಡಿ ಖುದ್ದಾಗಿ ಬರೆದರೆ ಕೆಲಸ ನೇರವಾಗಿ ಆಗುತ್ತದೆ. ಇಷ್ಟು ಸಲಹೆಯನ್ನು ಕೊಟ್ಟಿದ್ದೇವೆ ಎಂದು ತಮ್ಮ ಅವಗಾಹನೆಗೆ ತಂದಿದ್ದೇನೆ.

ಒಳ್ಳೆಯ ಬೀಜವನ್ನು ಒದಗಿಸಬೇಕು ಎಂದು ಹೇಳಿದ್ದಾರೆ. ವ್ಯವಸಾಯ ಉತ್ಪನ್ನ ಜಾಸ್ತಿಯಾಗಬೇಕಾದರೆ ಒಳ್ಳೆಯ ಬೀಜ ಒದಗಿಸಬೇಕಾದುದು ಸ್ವಾಭಾವಿಕ. ಬೇಸಾಯಕ್ಕೆ ಇದಕ್ಕೆ ಮೊದಲನೆ ಸ್ಥಾನ ಕೊಡಲೇಬೇಕು, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಸ್ವಲ್ಪ ಪ್ರಾಮುಖ್ಯತೆ ಕೊಟ್ಟಿದ್ದೇವೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 56 ಸೀಡ್ ಫಾರಂಗಳನ್ನು ಮಾಡಬೇಕು ಎಂದು ಇದ್ದೇವೆ. ಇದು ಸಾಲದು ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಪ್ರತಿಯೊಂದು ತಾಲ್ಲೂಕಿಗೂ ಬಿತ್ತನೆ ಬೀಜದ ಫಾರಂ ಇರಬೇಕು ಎಂದು ಹೇಳಿದರು. ಇದು ಸೂಕ್ತವಾದ ಸಲಹೆ. ಆಯಾ ತಾಲ್ಲೂಕಿನ ವಾತಾವರಣ, ಆಯಾ ತಾಲ್ಲೂಕಿನ ಮಳೆ ಇವುಗಳನ್ನು ನೋಡಿ ಆಯಾ ತಾಲ್ಲೂಕಿಗೆ ಅನುಕೂಲವಾಗುವಂಥ ಸಸಿಯನ್ನು ಹಾಕಬೇಕು. ಮಂಡ್ಯದಲ್ಲಿ ಹಾಕಿದ್ದು ಶಿವಮೊಗ್ಗದಲ್ಲಿ ಹಾಕುವುದಕ್ಕಾಗುವುದಿಲ್ಲ. ಒಂದು ಕಡೆ 200 ಇಂಚು ಮಳೆಯಾದರೆ ಇನ್ನೊಂದು ಕಡೆ 25 ಇಂಚು ಆಗುತ್ತದೆ. ಅಲ್ಲಿಯ ಭತ್ತ ಇಲ್ಲಿ ಆಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಹನುಮಂತಪ್ಪನವರು ಹೇಳಿದರು. ಪ್ರತಿಯೊಂದು ತಾಲ್ಲೂಕಿಗೂ ಒಂದು ಸೀಡ್ ಫಾರಂ ಇರಬೇಕು ಎಂದು. ಈಗಿನ ಸಂದರ್ಭದಲ್ಲಿ ನಾವು 56 ಸೀಡ್ ಫಾರಂಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೂ ಸಾಲದು. ಅದನ್ನು ಜಾಸ್ತಿ ಮಾಡಬೇಕು ಎಂದು ಕಾರ್ಯಕ್ರಮ ಹಾಕಿದ್ದೇವೆ. ಬಹುಶಃ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸಾಧ್ಯವಾದಷ್ಟು, ನೂರನ್ನಾದರೂ ಮಾಡಬೇಕು ಎಂಬ ತೀರ್ಮಾನಕ್ಕೆ ಬಂದಿದ್ದೇವೆ.

ಆಮೇಲೆ ಫರ್ಟಿಲೈಸರ್ಸ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದರು. ಭಾರತ ಸರ್ಕಾರದವರು ಹೇಳಿರುವ ಹಾಗೆ ಸಬ್‌ಸಿಡಿ ಕೊಟ್ಟು ಗೊಬ್ಬರ ಉಪಯೋಗಿಸಿ ಎಂದು ಪ್ರಚಾರ ಮಾಡಿದೆವು. ಈಗ ಏನಾಗಿದೆ ಎಂದರೆ ಗೊಬ್ಬರ ಕೊಡಲಿಕ್ಕೆ ಶಕ್ಯವಿಲ್ಲ. ಮೊದಲು ಸಿಂದ್ರಿ ಫ್ಯಾಕ್ಟರಿಯಿಂದ ತಯಾರಾಗುತ್ತಿದ್ದಂಥ ಗೊಬ್ಬರವನ್ನು ಉಪಯೋಗಿಸುತ್ತಾ ಇರಲಿಲ್ಲ. ಆದರೆ ಈಗ ಒಂದಕ್ಕೆ ಹತ್ತರಷ್ಟು ಡಿಮ್ಯಾಂಡ್ ಆಗಿದೆ.

ಒಬ್ಬ ಸದಸ್ಯರು.—ಅದು ಎಲ್ಲಾ ಸರಿ. ಬ್ಲಾಕ್ ಮಾರ್ಕೆಟ್ ಪರ್‌ಮಿಟ್‌ಹೋಲ್ಡರ್ಸ್‌ಗೆ ಕೊಡದೆ ಸೊಸೈಟಿಗಳಿಗೆ ಕೊಡುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹೋದವರ್ಷ ನಾವು 21 ಸಾವಿರ ಟನ್ ಹಂಚಿದ್ದೇವೆ. ಡಿಸೆಂಬರ್‌ವರೆಗೆ 26 ಸಾವಿರ ಟನ್ ಹಂಚಿದ್ದೇವೆ. ಇನ್ನು ಮೇಲೆ ಇನ್ನೂ ಹೆಚ್ಚು ಡಿಮ್ಯಾಂಡ್ ಬರುತ್ತದೆ. ಇಂಡಿಯಾ ಸರ್ಕಾರವನ್ನು ಕೇಳಿದಾಗ ಸೇಕಡ 45 ಭಾಗ ಒದಗಿಸುವುದಕ್ಕೆ ಸಾಧ್ಯ, ಹೆಚ್ಚಾಗಿ ಒದಗಿಸಲು ಫಾರಿನ್ ಎಕ್ಸ್‌ಚೇಂಜ್ ತೊಂದರೆಯಿದೆ, ಒದಗುವುದರಲ್ಲಿ ಸರಿಮಾಡಿಕೊಳ್ಳಬೇಕು ಎಂದು ಹೇಳಿದರು. ಈಗ ಎಕ್ಸ್‌ಚೇಂಜ್ ಸುಲಭವಾಗಿದೆ, ಸ್ವಲ್ಪ ಹೆಚ್ಚಾಗಿ ಒದಗಿಸಬೇಕು ಎಂದು ಮತ್ತೆ ಒತ್ತಾಯ ಮಾಡಿದ ಮೇಲೆ ಸ್ವಲ್ಪ ಜಾಸ್ತಿ ಮಾಡಬಹುದೆಂದು ಕಾಣುತ್ತದೆ. ಆದ್ದರಿಂದ ಎಷ್ಟು ಗೊಬ್ಬರ ಒದಗಿಸಬೇಕೆಂದು ಕೇಳಿದ್ದಾರೋ ಅಷ್ಟನ್ನು ಒದಗಿಸುವುದಕ್ಕೆ ಆಗುತ್ತೋ ಇಲ್ಲವೋ ಎಂಬ ಸಂದೇಹವಿದೆ. ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದಕ್ಕೆ ಹೆಚ್ಚಾಗಿ ಉಪಯೋಗಿಸಿದ್ದಾರೆ. ಅದು ಒಳ್ಳೆಯದೇ, ದೇಶಕ್ಕೆ ಸಂಪತ್ತು ಬರತಕ್ಕದ್ದು. ಪ್ರೈವೇಟ್ ಏಜೆನ್ಸಿಗಳಿಗೆ ಇದನ್ನು ಕೊಡಬಾರದೆಂದು ಮಾನ್ಯ ಸದಸ್ಯರು ಹೇಳಿದರು. ಈಗ ಪ್ರತಿಯೊಂದು ಸೊಸೈಟಿಗಳಿಗೂ ಕೊಡಬೇಕೆಂದು ಮಾಡಿದ್ದೇವೆ. ಸರ್ಕಾರದ ಮೂಲಕ ಬರುವುದನ್ನು ಖಾಸಗಿ ಏಜೆನ್ಸಿಗೆ ಕೊಟ್ಟಿಲ್ಲ. ಗೊತ್ತಿಲ್ಲದೆ ಕೊಟ್ಟಿರುವುದನ್ನು ವಜಾಮಾಡಿದ್ದಾರೆ. ಮೈಸೂರು ದೇಶದಲ್ಲಿ ಸೊಸೈಟಿಗಳ ಮೂಲಕ ಕೊಡಬೇಕು. ಸೊಸೈಟಿ ಇಲ್ಲದಿರುವ ಕಡೆ ಇಲಾಖೆಯ ಮೂಲಕ ಕೊಡಬೇಕು ಎಂದು ವ್ಯವಸ್ಥೆ ಮಾಡಿದೆ. ಆದ್ದರಿಂದ ಪ್ರೈವೇಟ್ ಏಜೆನ್ಸಿ ಇಲ್ಲ. ಸೂಪರ್ ಫಾಸ್ಫೇಟ್ ಅಂಥಾದ್ದನ್ನು ಕೆಲವು ಪ್ರೈವೇಟ್ ಕಂಪೆನಿಗಳಿಗೆ ಕೊಡುತ್ತೇವೆ. ಇದನ್ನು ನಿರ್ಬಂಧ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಮೂಲಕ ಬರುವುದನ್ನು ಖಾಸಗಿಯವರಿಗೆ ಕೊಡುವುದಿಲ್ಲ.

Sri G. N. PUTTANNA.—I rise to a point of order. The Hon'ble the Leader of the House said that after the Minister replie, Hon'ble Members might put questions and get answers. We respect it. But in the meanwhile when I requested, I was not given a chance while other members were given chances to put questions and they were answered.

ಅಧ್ಯಕ್ಷರು.—ಅವರು ಈಲ್ಡ್ ಆಗುವುದೂ ಬಿಡುವುದೂ ಅವರ ಇಚ್ಛೆ. ಅದಕ್ಕೆ ನಾನೇನು ಮಾಡಲಿ?

Sri G. N. PUTTANNA.—The ruling is not given.

Sri S. NIJALINGAPPA.—It is an appeal to the members.

Sri G. N. PUTTANNA.—That is also my appeal to the Leader of the House and also to the Chair.

ಶ್ರೀ ಎಚ್. ಎಸ್. ರುದ್ರಪ್ಪ.—ಇರಿಗೇಷನ್‌ವೆಲ್ಸ್ ಮತ್ತು ಮೈನರ್ ಇರಿಗೇಷನ್ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕ ಪ್ರದೇಶಗಳ ಸದಸ್ಯರು, ಶ್ರೀ ಕೆಂಚಪ್ಪನವರು ಮುಂತಾದವರು ಕೆಲವರು ಈ ವಿಚಾರ ಪ್ರಸ್ತಾಪಿಸಿದ್ದಾರೆ. ಬಾವಿಗಳ ಕೆಲಸ ಬಹಳ ಮುಖ್ಯವೆಂದು ಕಾಣುತ್ತದೆ. ಅದು ಕೆರೆ ಕಟ್ಟೆಗಳಿಗಿಂತ ಬಹಳ ಮುಖ್ಯವಾದುದು. ಸಾರ್ವಜನಿಕರ ಹಣ ಕೆರೆ, ಕೊಳಗಳಿಗೆ, ಅವುಗಳ ರಿಪೇರಿಗೆ ಬಹಳವಾಗಿ ಖರ್ಚಾಗುತ್ತದೆ. ಆದ್ದರಿಂದ ಬಾವಿ ನೀರು ಎಲ್ಲಿ ಮೇಲಿದೆಯೋ ಅಲ್ಲೆಲ್ಲಾ ಬಾವಿಗಳನ್ನು ತೆಗೆಯುವುದು ಬಹಳ ಸೂಕ್ತವಾದುದು. ಆ ದೃಷ್ಟಿಯಿಂದ ಇದಕ್ಕಾಗಿ ಎರಡ

(ಶ್ರೀ ಹೆಚ್. ಎಸ್. ರುದ್ರಪ್ಪ)

ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಹಣ ಒದಗಿಸಿದೆ. ಆದರೆ ನಿರೀಕ್ಷೆ ಮಾಡಿರುವಷ್ಟು ಬಾವಿಗಳಾಗಿಲ್ಲ. ಸಬ್ಸಿಡಿ ನಿಲ್ಲಿಸಿದ್ದರಿಂದ ಬಾವಿಗಳು ಹೆಚ್ಚಾಗಿ ಆಗಿಲ್ಲವೆಂದು ತೋರುತ್ತದೆ. ನಾನು ಅನೇಕ ಕಡೆಹೋಗಿ ವಿಚಾರಮಾಡಿದಾಗ ಕೊಡುವ ಹಣ ಸಾಲದು, ಹೆಚ್ಚಿಸಬೇಕು ಎಂದು ಗೊತ್ತಾಯಿತು. ಇಂಡಿಯಾ ಸರ್ಕಾರದೊಡನೆ ಮತ್ತು ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚಿಸಿ, ಅಗ್ರಿಕಲ್ಚರಲ್ ಮಿನಿಸ್ಟರ್ಸ್ ಕಾನ್ಫರೆನ್ಸ್‌ನಲ್ಲಿ ಈ ವಿಚಾರ ಹೇಳಿದಾಗ ಮೈಸೂರು ದೇಶದಲ್ಲೇ ಹೆಚ್ಚಾಗಿ ಬಾವಿ ತೆಗೆಯುವುದು, ಬಾಕಿಕಡೆ ಅಷ್ಟಾಗಿ ಕಾಣುವುದಿಲ್ಲ, ಆದ್ದರಿಂದ ಸಬ್ಸಿಡಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಪ್ರಬಲವಾಗಿ ಪ್ರಯತ್ನಮಾಡಿದಮೇಲೆ 250 ರೂಪಾಯಿಗಳಲ್ಲಿ 125 ರೂಪಾಯಿ ನಮ್ಮ ಸರ್ಕಾರ ಕೊಡುವಂತೆಯೂ ಬಾಕಿಯಾದದ್ದನ್ನು ಇಂಡಿಯಾ ಸರ್ಕಾರ ಕೊಡುವಂತೆಯೂ ಒಪ್ಪಿದ್ದಾರೆ. 750 ರೂಪಾಯಿ ಸಾಲ ಕೊಡುವುದು ಸಾಲದು, ಜಾಸ್ತಿ ಮಾಡಬೇಕು. ಅನೇಕ ಕಡೆ ಬಾವಿ ಆಗಬೇಕಾದರೆ ಒಂದು ಸಾವಿರ ರೂಪಾಯಿ ಬೇಕಾಗುತ್ತದೆ, ಕೆಲವು ಕಡೆ ಎರಡು ಮೂರು ಸಾವಿರ ರೂಪಾಯಿ ಬೇಕಾಗುತ್ತದೆ, ಆದ್ದರಿಂದ ಜಾಸ್ತಿ ಮಾಡಬೇಕು ಎಂದು ಕೇಳಿದ್ದೇವೆ. ಮೊನ್ನೆತಾನೆ 20 ದಿವಸಗಳ ಕೆಳಗೆ ಒತ್ತಾಯಮಾಡಿದ್ದೇವೆ. ಇನ್ನೂ ಅವರು ಆರ್ಡರು ಕಳುಹಿಸಿಲ್ಲ. ಯಾವರೀತಿ ನೋಡಲಿ, ಬಾವಿ ಪೂರ್ಣವಾಗಿ ತೆಗೆಯುವವರೆಗೆ ಹಣ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದೇವೆ. ಬಹುಶಃ ಅವರು ಒಪ್ಪಬಹುದೆಂದು ಕಾಣುತ್ತದೆ. ಮೊದಲು ಒಂದುರೀತಿ ಒಪ್ಪಿದ್ದರು. ಆಮೇಲೆ ಸಬ್ಸಿಡಿ ಕೊಡುವುದಕ್ಕಿಂತ ಸಾಲ ಕೊಡಿ, ಸಬ್ಸಿಡಿ ಕೊಟ್ಟಾಗ ಹಣ ದುರುಪಯೋಗವಾಗಿದೆ, ಹಳೆಯಬಾವಿ ತೆಗೆದು ಬಾವಿ ತೆಗೆದಿದ್ದೇವೆಂದು ಹಿಂದೆ ಹೇಳಿದ್ದಾರೆ, ಆದ್ದರಿಂದ ಒಪ್ಪಲು ಸಾಧ್ಯವಿಲ್ಲ ಎಂದು ಇಂಡಿಯಾ ಸರ್ಕಾರದವರು ಹೇಳಿದರು. ಹೀಗೆ ಕಾರಣಾಂತರಗಳಿಂದ ಬಾವಿ ತೆಗೆಯುವುದು ಸ್ವಲ್ಪ ವಿಧಾನವಾಗಿದೆ. ಕೆಲವು ಕಡೆ ಸಾಲ ಕೊಡುವಾಗ ಜಮೀನಿನ ಬೆಲೆ ಬಹಳ ಕಡಿಮೆಯಾಗಿ ನಿಗದಿ ಮಾಡಿದ್ದಾರೆ ; ಹೈದರಾಬಾದ್ ಕರ್ನಾಟಕದ ಕಡೆ ಹಾಗಾಗಿದೆ ; ಒಂದು ರೂಪಾಯಿ ಕಂದಾಯವಿದ್ದರೆ 50 ರೂಪಾಯಿ ಬೆಲೆ ಕಟ್ಟಿದ್ದಾರೆ. ಹೀಗೆ ಕಾರಣಾಂತರದಿಂದ ಕಡಮೆ ಬೆಲೆ ನಿಗದಿಮಾಡಿದ್ದಾರೆ. ಚರ್ಚೆಮಾಡಿದಾಗ ಅದು ಕಡಮೆಯೆಂದು ಕಂಡುಬಂತು ; ಮಾರ್ಕೆಟ್ ವ್ಯಾಲ್ಯೂಗಿಂತ ಅದು ಕಡಮೆ, ಅದನ್ನು ಜಾಸ್ತಿ ಮಾಡುವುದಕ್ಕೆ ಕಾರ್ಯಕ್ರಮವಿದೆ. ಹಣ ಹೆಚ್ಚು ಒದಗಿಸಬೇಕೆಂಬ ದೃಷ್ಟಿಯಿಂದ ರೂಲ್ಸ್ ಬದಲಾವಣೆ ಮಾಡಿದ್ದಾರೆ; ಆರ್ಡರ್ ಇಷ್ಯೂ ಆಗಿದೆ. ಹೆಚ್ಚು ಹಣ ಕೊಡುವುದಕ್ಕೆ ಈ ರೀತಿ ಪ್ರಯತ್ನವಿದೆ. 25 ಎಕರೆ ಇರುವವರಿಗೆ 500 ರೂಪಾಯಿ ಮೇಲ್ಪಟ್ಟು ಹಣ ಬರುತ್ತಿರಲಿಲ್ಲ. ಈಗ 'ವ್ಯಾಲ್ಯುಯೇಷನ್ ಆಫ್ ಲ್ಯಾಂಡ್' ಜಾಸ್ತಿಮಾಡಿ ಕೊಡುವುದಕ್ಕೆ ಆರ್ಡರು ಮಾಡಿದೆ ; ಇರುವ ತೊಂದರೆ ಕಡಮೆಯಾಗಬಹುದು.

ವಿದ್ಯುಚ್ಛಕ್ತಿಯನ್ನು ಕೆಲವು ಕಡೆಗಳಿಗೆ ಒದಗಿಸಿಲ್ಲವೆಂದು ಶ್ರೀ ಕೆಂಚಪ್ಪನವರು ಮತ್ತು ಇತರ ಸದಸ್ಯರು ಹೇಳಿದರು. ಅವರಿಗಿರುವ ಆಸೆ ನಮಗೂ ಇದೆ. ನಮ್ಮ ಕಾರ್ಯಕ್ರಮದ ಪ್ರಕಾರ 1,100 ಬಾವಿಗಳಿಗೆ ಪ್ರತಿ ವರ್ಷ ವಿದ್ಯುಚ್ಛಕ್ತಿ ಕೊಡಬೇಕೆಂದು ಪಂಚವಾರ್ಷಿಕ ಯೋಜನೆಯಲ್ಲಿ ನಮೂದಿಸಿತ್ತು. ಹಾಗಿರುವಾಗ 1,200 ಚಿಲ್ಲರೆ ಬಾವಿಗಳಿಗೆ ಒಂದೇ ವರ್ಷದಲ್ಲಿ ವಿದ್ಯುಚ್ಛಕ್ತಿ ಕೊಟ್ಟಿದ್ದೇವೆ. ಈ ಸಂಬಂಧವಾದ ವರದಿ ನಮಗೆ ಪ್ರತಿವಾರವೂ ಬರುತ್ತದೆ. ಹೆಚ್ಚು ಬತ್ತ ಬೆಳೆಯಬೇಕೆಂದು ಇಂಡಿಯಾ ಸರ್ಕಾರದವರು ಒಂದು ಯೋಜನೆ ಮಾಡಿದ್ದಾರೆ. ಜಪಾನ್ ಮಾದರಿ ಬತ್ತ ಬೆಳೆಯುವುದರಿಂದ ಹೆಚ್ಚು ಬತ್ತ ಬೆಳೆಯಬಹುದೆಂದು ಗೊತ್ತಾಗಿದೆ. ಆದ್ದರಿಂದ 1956–57ನೆಯ ಸಾಲಿನಲ್ಲಿ ಒಂದು ಲಕ್ಷ ಎಕರೆಗಳಲ್ಲೂ ಮತ್ತು 1957–58ನೆಯ ಸಾಲಿನಲ್ಲಿ ಎರಡು ಲಕ್ಷ 30 ಸಾವಿರ ಎಕರೆಗಳಲ್ಲೂ ಜಪಾನ್ ಮಾದರಿ ಬತ್ತ ಬೆಳೆಯಲಾಯಿತು, ಪ್ರತಿಯೊಂದು ವರ್ಷವೂ ಒಂದೊಂದು ಲಕ್ಷ ಎಕರೆಗಳ ಹೆಚ್ಚು ಪ್ರದೇಶದಲ್ಲಿ ಜಪಾನ್ ಮೆಥಡ್ ಪ್ರಕಾರ ಬತ್ತ ಬೆಳೆಯಬೇಕೆಂದಿದ್ದೇವೆ. ಜಪಾನ್ ಮೆಥಡ್ ಪ್ರಕಾರ ಸಾಧಾರಣವಾಗಿ ಹಾಕುವ ಗೊಬ್ಬರದ ಎರಡರಷ್ಟು ಹಾಕಬೇಕಾಗುತ್ತದೆಂಬ ತಪ್ಪು ಭಾವನೆಯಿದೆ. ಅದನ್ನು ಹೋಗಲಾಡಿಸಲು ಒಂದೇ ಸಮವಾಗಿ ಗೊಬ್ಬರ ಹಾಕಿ ಒಂದೇ ತರಹ ಭೂಮಿಯಲ್ಲಿ ಅರ್ಧ ಎಕರೆಯಲ್ಲಿ ಜಪಾನ್ ಮೆಥಡ್ ಪ್ರಕಾರ, ಇನ್ನರ್ಧ ಎಕರೆಯಲ್ಲಿ ನಮ್ಮ ಕಡೆ ಮಾಮೂಲಾಗಿ ಬೆಳೆಯುವ ಪ್ರಕಾರ ಬತ್ತ ಬೆಳೆಯಲಾಯಿತು. ಆಗ ಜಪಾನ್ ಮೆಥಡ್ ಪ್ರಕಾರ ಎರಡರಷ್ಟು ಉತ್ಪತ್ತಿ ಬಂತು. ಸಾಮಾನ್ಯವಾಗಿ ಹಾಕುವ ಪ್ರಮಾಣದ ಎರಡರಷ್ಟು ಗೊಬ್ಬರ ಹಾಕಿದರೆ ಇನ್ನೂ ಹೆಚ್ಚು ಉತ್ಪತ್ತಿ ಬರುತ್ತದೆ. ಅದನ್ನು ನಾವು ನೋಡಿದ್ದೇವೆ. ಈ ಕಾರಣದಿಂದ ಜಪಾನ್ ಮೆಥಡ್ ಆಫ್ ಪ್ಯಾಡಿ ಗ್ರೋಯಿಂಗ್ ಬಹಳ ಸೂಕ್ತ, ಅದನ್ನು ಜಾರಿಗೆ ತರಬೇಕು, ಎಲ್ಲರೂ ಈ ವಿಚಾರದಲ್ಲಿ ಸಹಕರಿಸಬೇಕು ಎಂದು ಅರಿಕೆಮಾಡಿಕೊಳ್ಳುತ್ತೇನೆ. ದೇಶದಲ್ಲಿ ಬಡತನ ಮತ್ತು ಆಹಾರದ ಸಮಸ್ಯೆ ಇರುವುದಕ್ಕೆ ಜನ ಉದಾಸೀನದಿಂದಿರುವುದೇ ಕಾರಣ. ಅನೇಕ ಮಾನ್ಯ ಸದಸ್ಯರು ಜಪಾನ್ ಮೆಥಡ್‌ನಿಂದ ಉತ್ಪತ್ತಿ ಹೆಚ್ಚಾಗಿ ಬರುತ್ತದೆಂಬುದನ್ನು ಮನಗಂಡಿದ್ದಾರೆ. ಅನೇಕ ಕಡೆ ಆ ರೀತಿಮಾಡಿ ನೋಡಿದ್ದಾರೆ. ಒಬ್ಬ ಒಂದು ಲೆಖ್ಖ ಕಳುಹಿಸಿದ್ದಾನೆ. ತಪ್ಪು ಲೆಖ್ಖ ಕಳುಹಿಸಿಲ್ಲ. ಮೈಮುರಿದು ಕೆಲಸ ಮಾಡಿದ್ದರಿಂದ 350-400 ರೂಪಾಯಿ ನಿವ್ವಳ ಲಾಭಗಳಿಸಿದ್ದಾನೆ. ಸುತ್ತಮುತ್ತ ಇರುವವರು ಅಷ್ಟು ಹೆಚ್ಚು ಉತ್ಪತ್ತಿ ಏತಕ್ಕೆ ಮಾಡಿಲ್ಲ ! ನಮ್ಮಲ್ಲಿ ಉದಾಸೀನ ಮನೋಭಾವ ಇದೆ. ಜಪಾನೀಸ್ ಮೆಥೆಡ್ ಆಫ್ ಪ್ಯಾಡಿಯಿಂದ ನಮ್ಮ ದೇಶದಲ್ಲಿ ಇರತಕ್ಕ ಆಹಾರ ಸಮಸ್ಯೆ ಪೂರ್ತಿ ಬಗೆಹರಿಯುತ್ತದೆಂದು ಕಾಣುತ್ತದೆ. ಅದರಿಂದ ಎಕರೆಗೆ ಐದು ಆರು ಪಲ್ಲ ಜಾಸ್ತಿ ಬೆಳೆಯಬಹುದು. ಹಾಗೆ ಬೆಳೆದರೆ ಆಹಾರ ಸಮಸ್ಯೆ ಬಗೆಹರಿಯುತ್ತದೆ. ಅದಕ್ಕೆ ತಾವುಗಳೆಲ್ಲ ಸಹಾಯ ಮಾಡಬೇಕು ಎಂದು ಹೇಳುತ್ತೇನೆ. ಕಾಂಪೋಸ್ಟ್ ಮಾಡುವುದು ಒಳ್ಳೆಯದು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಪಟ್ಟಣಗಳಲ್ಲಿ ಕಾಂಪೋಸ್ಟ್ ಮಾಡುತ್ತಿದ್ದೇವೆ. ಹಳ್ಳಿಗಳಲ್ಲಿ ಆಗುತ್ತಾ ಇಲ್ಲ. ಜಾತ್ರೆಗಳೂ, ಸಮ್ಮೇಳನಗಳೂ ಎಲ್ಲೆಲ್ಲಿ ನಡೆಯುತ್ತವೆಯೋ ಅಲ್ಲೆಲ್ಲಾ ಪ್ರಚಾರ ನಡೆಯುತ್ತಿದೆ. ಆದರೆ ಯಾತಕ್ಕೋ ನಮ್ಮ ಕಿವಿಗೆ ಅದು ಹಿಡಿಸಲಿಲ್ಲ. ಮಹಾತ್ಮಗಾಂಧಿಯವರು 25 ವರ್ಷಗಳ ಹಿಂದೆಯೇ ಪ್ರಚಾರ ಮಾಡಿದರು. ಇಂಥಾ ಗುಂಡಿಗಳನ್ನು ತೆಗೆಯುವುದಕ್ಕೆ ಸರ್ಕಾರದವರು ದುಡ್ಡು ಕೊಟ್ಟರು. ಅನೇಕ ತಜ್ಞರು ಇದು ಒಳ್ಳೆಯದೆಂದು ಹೇಳುತ್ತಾರೆ. ಜಪಾನ್, ಚೈನಾದಲ್ಲಿ ಯಾವರೀತಿ ಮಾಡುತ್ತಾರೋ ಆ ರೀತಿ ಮೆನ್ಯೂರ್ ತಯಾರಿಸಬೇ

ಕೆಂದು ಎಷ್ಟು ಹೇಳಿದರೂ, ಎಷ್ಟು ಪ್ರೋತ್ಸಾಹ ಕೊಟ್ಟರೂ ಆಗುತ್ತಾ ಇಲ್ಲ. ಎರಡು ಸಾವಿರ ಪಂಚಾಯಿತಿ ಜನ ಇರುವ ಹಳ್ಳಿಗಳಲ್ಲಿ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ಬೇಕಾದ ಕಡೆ ಕಕ್ಕಸು ಕಟ್ಟುವುದಕ್ಕೆ ಏರ್ಪಾಡು ಮಾಡಿದ್ದೇವೆ. ನಾವು ಇನ್ನೂ ಏನು ಬೇಕಾದರೂ ಮಾಡುತ್ತೇವೆ. ಆದರೆ ತಾವೂ ನಾವೂ ಸೇರಿ ಈ ಕೆಲಸ ಮಾಡಿದರೆ ಆಗುತ್ತದೆ. ಡಿಪಾರ್ಟ್‌ಮೆಂಟಿನವರೇ ಮಾಡುತ್ತಾರೆ. ಅದರಿಂದ ಆಹಾರದ ಸಮಸ್ಯೆ ಬಗೆಹರಿಯುತ್ತದೆ ಎಂದರೆ ಆಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—N.E.S. ಬ್ಲಾಕ್‌ನಲ್ಲಿ ಮಾಡಿದ್ದೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ಕಡೆ ಮಾಡಿದ್ದೇವೆ. ಪೂರ್ತಿಮಾಡಿಲ್ಲ. ಅವರ ಮೂಲಕ ಸಹ ಪ್ರಯತ್ನ ಮಾಡುತ್ತಿದ್ದೇವೆ. ಈಗ ಮುನಿಸಿಪಾಲಿಟಿಯವರು ಕಂಪೋಸ್ಟ್ ಸಾಗಿಸಲು ಟ್ರಾನ್ಸ್‌ಪೋರ್ಟ್ ಸಹಾಯಕೊಡುತ್ತಿದ್ದಾರೆ. ಅವರಿಗೆ ಅದಕ್ಕಾಗಿ ಲಾರಿ ಮತ್ತು ಏನೇನು ಬೇಕೋ ಅವುಗಳನ್ನು ಕೊಂಡುಕೊಳ್ಳಲು ಅವರಿಗೆ ಸರ್ಕಾರದವರು ಸಾಲವನ್ನು ಕೊಡುತ್ತಾರೆ. ಕೆಲವರು ಉಪಯೋಗಿಸಿಕೊಂಡಿದ್ದಾರೆ. ಇನ್ನು ಕೆಲವು ಮುನಿಸಿಪಾಲಿಟಿಗಳಿಂದ ಬೇಡಿಕೆಗಳು ಬಂದಿವೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಇನ್ನೂ ಅನೇಕ ವಿಷಯಗಳನ್ನು ಹೇಳುವುದಕ್ಕೆ ಆಗಿಲ್ಲ. ಐದು ಘಂಟೆ ಆಗಿದೆ. ಅನೇಕ ಸ್ನೇಹಿತರು ಮಾತನಾಡುವವರು ಇದ್ದಾರೆ. ಆದ್ದರಿಂದ ಈಗ ಇನ್ನು ಹೆಚ್ಚಿಗೆ ಹೇಳದೆ, ಮುಂದೆ ಡಿಮ್ಯಾಂಡು ಬಂದಾಗ ಉಳಿದಿರತಕ್ಕ ವಿಷಯಗಳನ್ನು ತಮ್ಮ ಮುಂದೆ ಇಡುತ್ತೇನೆ.

ಶ್ರೀ ಕಂಬಳಿಯವರು ಸಕ್ಕರೆ ಕಾರ್ಖಾನೆಯ ವಿಷಯ ಮಾತನಾಡಿದರು. ಇತರರು ಪದೇ ಪದೇ ಇದನ್ನು ಒತ್ತಾಯಮಾಡಿದರು. ರೈತರ ಹಿತದೃಷ್ಟಿಯಿಂದ ಮಾಡಬೇಕು ಎಂದು ಬರೆದಿದ್ದೇವೆ. ಏನೇನು ಕಾರ್ಯಕ್ರಮ ಹಾಕಿದ್ದೇವೋ ಅದನ್ನು ಪುನಃ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಷ್ಟು ಜಾಗ್ರತೆ ಮಾಡಬೇಕೋ ಅಷ್ಟು ಬೇಗ ಪ್ರಾರಂಭಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ತೆಂಗು, ಗೇರುಬೀಜ, ಅಡಿಕೆ ಇವುಗಳಿಗೆ ರಿಸರ್ಚ್ ಸ್ಟೇಷನ್ ಪ್ರಾರಂಭಮಾಡಬೇಕು ಎಂದು ಹೇಳಿದ್ದಾರೆ. ಎರಡನೆಯ ಪಾಂಚವಾರ್ಷಿಕ ಯೋಜನೆಯಿಂದ ನಮ್ಮ ದೇಶಕ್ಕೆ ಸೌಲಭ್ಯ ಇರುವಷ್ಟು ಬೇರೆ ಯಾವ ದೇಶಕ್ಕೂ ಇಲ್ಲ. ನಮ್ಮ ದೇಶದಲ್ಲಿ ಕಮರ್ಷಿಯಲ್ ಕ್ರಾಪ್ಸ್‌ಗೆ ಬಹಳ ಸೌಕರ್ಯ ಇದೆ. ಈ ದೃಷ್ಟಿಯಿಂದ ಅದನ್ನೆಲ್ಲಾ ಪೂರ್ತಿ ಉಪಯೋಗಿಸಿಕೊಳ್ಳುವುದಕ್ಕೆ ಎರಡನೆಯ ಪಾಂಚವಾರ್ಷಿಕ ಯೋಜನೆ ಮಾಡಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕ್ಯಾಷ್ಯೂನಟ್‌ಗೆ ಏನು ಮಾಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಇರತಕ್ಕ ಜಮೀನನ್ನು ರೂಲ್ಸ್ ಪ್ರಕಾರ ಕೊಡುತ್ತಿದ್ದೇವೆ. ಕ್ಯಾಷ್ಯೂನಟ್ ರಿಸರ್ಚ್ ಫಾರಂಮಾಡಿ ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡುತ್ತೇವೆ. ಒಂದು ಲಕ್ಷ ಎಕರೆಯಲ್ಲಿ ಇದನ್ನು ಬೆಳೆಸಬೇಕು ಎಂದು ಅಂದಾಜು ಮಾಡಿದ್ದೇವೆ. ಫಾರೆಸ್ಟ್ ಇಲಾಖೆಯಲ್ಲಿ ಹತ್ತು ಸಾವಿರ ಎಕರೆ ಪ್ಲಾನ್‌ಟೇಷನ್ ಮಾಡಬೇಕು ಎಂದು ಇದ್ದೇವೆ. ಜಮೀನು ಬೇಕಾದಷ್ಟು ಇರುವ ದೃಷ್ಟಿಯಿಂದ ಖಾಸಗಿ ಜನರಿಗೆ ಅನುಕೂಲ ಮಾಡಿದ್ದೇವೆ. ಕೆಲವು ವಿಷಯಗಳನ್ನು ಮಾತ್ರ ಹೇಳಿದ್ದೇನೆ. ಇನ್ನು ಕೆಲವು ವಿಷಯಗಳನ್ನ ಹೇಳುವುದಕ್ಕೆ ಆಗಲಿಲ್ಲ. ತಮ್ಮ ಕ್ಷಮೆಬೇಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಪ್ರಜಾಧಿಕಾರ ಸಂಸ್ಥೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವು ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ ; ಮತ್ತು ಈ ಲೋಕಲ್ ಸೆಲ್ಫ್ ಗೌರ್ನಮೆಂಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಇಂತಕ್ಕ ಕೆಲವು ನ್ಯೂನತೆಗಳನ್ನು ಇಲ್ಲಿ ಹೇಳಿದ್ದಾರೆ. ಆ ನ್ಯೂನತೆಗಳು ವಾಸ್ತವವಾಗಿರೋಣದ್ದರಿಂದ ಅನೇಕ ನ್ಯೂನತೆಗಳನ್ನು ಮಾರ್ಪಾಡು ಮಾಡಲು ಒಪ್ಪಿಕೊಂಡಿದ್ದೇವೆ. ಅದು ಎಲ್ಲರಿಗೂ ಗೊತ್ತಿರುವ ವಿಚಾರ, ನನಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಬಹಳ ಪ್ರಾಮುಖ್ಯವಾಗಿ ಬರತಕ್ಕ ವಿಷಯ ಡಿಪ್ರೆಸ್ ಕ್ಲಾಸ್ ಎಮಿಲಿಯೋರೇಷನ್ ಫಂಡು. ಅದು ಬಹಳಮಟ್ಟಿಗೆ ಕಡಮೆಯಾಗಿದೆ, ಸಕಾಲದಲ್ಲಿ ಅದು ಉಪಯೋಗವಾಗುತ್ತಾ ಇಲ್ಲ, ಕೆಲವು ರೆಕಾರ್ಡ್‌ಗಳು ಬಹಳ ಡಿಲೆ ಆಗುತ್ತಿವೆ, ಸಾಕಾದಷ್ಟು ಕಾಲದಲ್ಲಿ ಅಕ್ವಿಸಿಷನ್ ರೆಕಾರ್ಡ್ ಫೈಸಲ್ ಆಗುತ್ತಾ ಇಲ್ಲ, ಮುನಿಸಿಪಲ್ ಆಫೀಸುಗಳಲ್ಲಿ ಕೆಲವು ರೆಕಾರ್ಡ್ ಜಾಗ್ರತೆ ಫೈಸಲ್ ಆಗುವುದಿಲ್ಲ, ವಾಟರ್ ಡ್ರೈನೇಜ್ ಇತ್ಯಾದಿ ವಿಚಾರಗಳನ್ನು ಅನೇಕ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮಾನ್ಯ ಸದಸ್ಯರು ಹೇಳಿರುವ ಅನೇಕ ವಿಷಯಗಳನ್ನು ಒಪ್ಪಬೇಕಾಗಿದೆ. ಬಸವಲಿಂಗಪ್ಪನವರು ಮಾತನಾಡುವಾಗ ಡಿಪ್ರೆಸ್ಡ್ ಕ್ಲಾಸ್ ಸೆಮಿನಾರ್ ಎಂದು ಕೆಂಗೇರಿಯಲ್ಲಿ ಒಂದು ಸೆಮಿನಾರ್ ಆಯಿತು, ಅಲ್ಲಿ ಕೆಲವು ರೆಕಮೆಂಡೇಷನ್ ಮಾಡಿ ಕಳುಹಿಸಿ ಕೊಟ್ಟರು, ಅವನ್ನು ಏನು ಮಾಡಿದರು ಎನ್ನುವ ವಿಚಾರ ಗೊತ್ತಿಲ್ಲ ಎಂದು ಹೇಳಿದರು. ಕೆಂಗೇರಿಯಲ್ಲಿ ಆದ ಸೆಮಿನಾರ್‌ನಲ್ಲಿ 105 ರೇಕಮೆಂಡೇಷನ್ಸ್ ಒಳಗೊಂಡ ಒಂದು ರಿಪೋರ್ಟನ್ನು ಕಳುಹಿಸಿ ಕೊಟ್ಟಿದ್ದಾರೆ. ಅವುಗಳಲ್ಲಿ ಬಹುಭಾಗ ಈಗ ಜಾರಿಯಲ್ಲಿ ಇವೆ ಮತ್ತು ನಡೆಸತಕ್ಕ ರೆಕಮೆಂಡೇಷನ್ಸ್ ಆಗಿವೆ. ಬಹುಮಟ್ಟಿಗೆ ಅವುಗಳನ್ನು ಜಾರಿಗೆ ಕೊಟ್ಟಿದೆ. ಹರಿಜನರ ಕಾಲೋನಿ ಪ್ರತ್ಯೇಕವಾಗಿ ಇರುವುದು ಸರಿಯಲ್ಲ, ಆದ್ದರಿಂದ ಕಾಮನ್ ಕಾಲೋನಿ ಇರುವುದಕ್ಕೆ ಸರ್ವ ಪ್ರಯತ್ನ ಮಾಡಬೇಕು ಎನ್ನುವುದು ಒಂದು ರೆಕಮೆಂಡೇಷನ್. ಅದು ಬಹಳ ಸುಲಭವಾದ ಕಾರ್ಯವಲ್ಲ ಎಂದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ಆ ದಾರಿಯಲ್ಲಿ ನಾವು ಈಗ ಷುರು ಮಾಡಿದ್ದೇವೆ. ಅನೇಕ ಕಡೆಗಳಲ್ಲಿ ಸೈಟ್‌ಕೊಡುವ ಕಾಲದಲ್ಲಿ ಪ್ರತ್ಯೇಕವಾದ ಕೇರಿಮಾಡುವ ಕಾಲದಲ್ಲಿ ಎಲ್ಲರೂ ಜೊತೆಯಲ್ಲಿ ವಾಸಮಾಡುವ ರೀತಿಯಲ್ಲಿ ಎಲ್ಲರೂ ಜೊತೆಯಲ್ಲಿ ವಾಸಮಾಡುವ ರೀತಿಯಲ್ಲಿ ಕಾಮನ್ ಎಕ್ಸ್‌ಟೆನ್‌ಷನ್ ಮಾಡಬೇಕು ಎಂದು ಅನೇಕ ಕಡೆಗಳಲ್ಲಿ ಹೇಳುತ್ತಿದ್ದೇವೆ. ಕೆಲವು ಕಡೆ ಶುರು ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಸಾಮೇನಹಳ್ಳಿ ಗ್ರಾಮದಲ್ಲಿ ಸವರ್ಣ ಹಿಂದೂಗಳು ಹರಿಜನರ ಜೊತೆಯಲ್ಲಿ ತಾವೇ ವಾಸ ಮಾಡುತ್ತಿದ್ದಾರೆ ; ಕಾಮನ್‌ವೆಲ್ ನೀರು ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಬಾವಿ ತೆಗೆಸಿದ್ದಾರೆ. ಸೈಟುಗಳನ್ನು ಸಮಾನವಾಗಿ ಹಂಚಿದ್ದಾರೆ. ಸವರ್ಣ ಹಿಂದೂ ಸಹೋದರರೊಬ್ಬರು ಹರಿಜನರಿಗೆ ಆರು ಎಕರೆ ಜಮೀನನ್ನು ಮುಫತ್ತಾಗಿ ಕೊಟ್ಟಿದ್ದಾರೆ. ಈ ರೀತಿ ಸವರ್ಣ ಹಿಂದೂಗಳೂ ಮತ್ತು ಹರಿಜನರೂ ಇಲ್ಲಿಯವರೆಗೂ ಒಂದೇ ಕಮ್ಯೂನಿಟಿ ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿಯಾಗಿ ಸಾಧ್ಯವಾದಮಟ್ಟಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ. ಕೆಲವು ಕಡೆ

(ಶ್ರೀ ಆರ್. ಚೆನ್ನಿಗರಾಮಯ್ಯ)

ಕಷ್ಟವಾಗುತ್ತದೆ. ಸೋಷಿಯಲ್ ರಿಫಾರಂ ಅಷ್ಟು ಸುಲಭವಾಗಿ ಆಗುವುದಿಲ್ಲ. ಸ್ವಲ್ಪ ಕಾಲ ಬೇಕು. ಶ್ರೀ ಬಸವಲಿಂಗಪ್ಪನವರೂ, ಶ್ರೀ ಹನುಮಂತಪ್ಪನವರೂ ಮತ್ತು ಶ್ರೀ ಮುನಿಯಪ್ಪನವರೂ ಈ ವರ್ಷ ನಿಮ್ನ ಪಂಗಡದವರಿಗೆ ಕೊಟ್ಟಿರುವ ಹಣವನ್ನು ಬಡ್ಜೆಟ್ಟಿನಲ್ಲಿ ಸರ್ಕಾರದವರು ಬಹಳ ಕಡಮೆ ಮಾಡಿದ್ದಾರೆಂದು ಹೇಳಿದರು. ಹಿಂದಿನ ವರ್ಷ 29 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ಈಗ 20 ಲಕ್ಷ ರೂಪಾಯಿಗಳಿಗೆ ಇಳಿಸಿದ್ದಾರೆ. ಶ್ರೀ ಹನುಮಂತಪ್ಪನವರು 11 ಲಕ್ಷ ರೂಪಾಯಿಗಳಿಗೆ ಇಳಿಸಿದ್ದಾರೆಂದು ಹೇಳಿದರು. ಹಿಂದಿನ ಬಡ್ಜೆಟ್ಟಿನಲ್ಲಿ ಈ ಬಾಬಿಗೆ 19 ಲಕ್ಷ ರೂಪಾಯಿಗಳನ್ನು ಕೊಟ್ಟಿತ್ತು. ಅದರ ಮೇಲೆ 19 ಲಕ್ಷ ರೂಪಾಪಾಯಿಗಳು ಬಹಳ ಕಡಿಮೆಯೆಂದು ಕೇಂದ್ರ ಸರ್ಕಾರದಿಂದ ಇನ್ನೂ ಹೆಚ್ಚಾಗಿ ಹಣಸಹಾಯಬೇಕೆಂದು ಕೇಳಿದೆವು. ಅವರು ಬಹಳ ಉದಾರವಾಗಿ 10-12 ಲಕ್ಷ ರೂಪಾಯಿಗಳನ್ನು ಕೊಟ್ಟರು. ಒಟ್ಟಿಗೆ ಸುಮಾರು 29 ಲಕ್ಷ ರೂಪಾಯಿಗಳನ್ನು ಹಿಂದಿನ ವರ್ಷ ಕೊಟ್ಟಿದ್ದೇನೋ ನಿಜ. ಈ ವರ್ಷದ ಬಡ್ಜೆಟ್ಟಿನಲ್ಲಿ ನಾವು ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಪ್ರಕಾರ ಸುಮಾರು 60 ಲಕ್ಷಕ್ಕೆ ಈ ಬಾಬಿಗೆ ಖರ್ಚು ಮಾಡುವುಧಕ್ಕೋಸ್ಕರ ಒಂದು ಅಂದಾಜನ್ನು ಹಾಕಿದ್ದೆವು. ಆದರೆ ಪ್ಲಾನಿಂಗ್ ಕಮೀಷನ್ನಿನವರು ಎಲ್ಲಾ ಇಲಾಖೆಗಳಿಗೂ ಸ್ವಲ್ಪ ಸ್ವಲ್ಪ ಖೋತಾ ಮಾಡಿದ್ದಾರೆ. ಅದೇರೀತಿಯಾಗಿ ಈ ಬಾಬಿನಲ್ಲೂ ಖೋತಾಮಾಡಿ ಒಟ್ಟು 47 ಲಕ್ಷಕ್ಕೆ ಇಳಿಸಿದ್ದಾರೆ. ಈ ಸಂದರ್ಭದಲ್ಲಿ 22 ಲಕ್ಷವನ್ನು ಈ ವರ್ಷ ಈ ಬಾಬಿಗೆ ಖರ್ಚುಮಾಡಬೇಕೆಂದು ತಿಳಿಸಿದ್ದಾರೆ.

ಶ್ರೀ ಎಂ. ಹನುಮಂತಯ್ಯ.—ಈ 22 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದವರು ಕೊಟ್ಟಿದ್ದಾರೆಯೋ ಎಂದು ನನ್ನ ಪ್ರಶ್ನೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ಬಡ್ಜೆಟ್ ವಿಷಯದ ಮೇಲೆ ಮಾತನಾಡುತ್ತಿದ್ದೇವೆ. ಮೈಸೂರು, ಕೇಂದ್ರ ಸರ್ಕಾರ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ಮಾಡಲಿಲ್ಲ. ಮೈಸೂರು ಸರ್ಕಾರದವರು ಹಿಂದೆ 11 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ಹಿಂದೆ 19 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಹಳೆಯ ಮೈಸೂರಿಗೆ ಎಂದು ಸರ್ಕಾರದವರು ನಿಮ್ನವರ್ಗದವರಿಗಾಗಿ ಮನೆಗಳನ್ನು ಕಟ್ಟಲು 19 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಇತ್ತೀಚೆಗೆ ಭಾವಿ, ಮನೆಗಳು, ಕಮ್ಯೂನಿಟಿ ಸೆಂಟರುಗಳು ಮತ್ತು ಎಕನಾಮಿಕ್ ಕೇಡರ್—ಇವೆಲ್ಲಕ್ಕೂ ಜಾಸ್ತಿ ಮಾಡಿದ್ದಾರೆ. ಅದಕ್ಕಾಗಿ 47 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ $\frac{1}{2}$ ಭಾಗ ಮೈಸೂರು ಸರ್ಕಾರದವರದು, ಇನ್ನುಳಿದ $\frac{1}{2}$ ಭಾಗ ಕೇಂದ್ರ ಸರ್ಕಾರದವರದು. ಆದ್ದರಿಂದ ಶ್ರೀ ಹನುಮಂತಪ್ಪನವರು ಹೇಳಿದಹಾಗೆ 11 ಲಕ್ಷ ರೂಪಾಯಿಗಳು ಮೈಸೂರು ಸರ್ಕಾರದವರದು ಆಗುವುದಿಲ್ಲವೆಂಬುದನ್ನು ಅವರು ಯೋಚನೆಮಾಡಬೇಕು. ಅವರು 22 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಬಹಳ ಕಡಮೆ. 29 ಲಕ್ಷ ರೂಪಾಯಿಗಳನ್ನೊದಗಿಸಬೇಕು ಎಂದು ಅವರು ಕೇಳಬೇಕು. ವಿಶಾಲ ಮೈಸೂರು ಆಗಿರುವುದರಿಂದ ಮನಸ್ಸು ವಿಶಾಲವಾಗಿರಬೇಕು. ದುಡ್ಡನ್ನೂ ಸಹ ನಾವು ವಿಶಾಲಗೊಳಿಸುವುದಕ್ಕೆ ಪ್ರಯತ್ನಪಡಬೇಕು. ಈಗ 19 ಲಕ್ಷ ಇದ್ದುದು 29 ಲಕ್ಷವಾಯಿತು. 29 ಲಕ್ಷದಿಂದ ಪ್ಲಾನಿಂಗ್ ಕಮಿಷನ್ನಿನವರ ಸಲಹೆಯಂತೆ 22 ಲಕ್ಷಕ್ಕಿಳಿದಿದೆ. ಈಗ ಅದು ಬಹಳ ಕಡಮೆ. ನಮಗೆ ಇನ್ನೂ ಜಾಸ್ತಿ ಬೇಕು ಎಂದು ಕೇಳೋಣ. ಅವರು ಖಂಡಿತವಾಗಿ ಹೆಚ್ಚಿಸುತ್ತಾರೆಂಬ ಭರವಸೆಯನ್ನು ನಾನು ಕೊಡುತ್ತೇನೆ. ಹಿಂದಿನ ವರ್ಷವೂ ಇದೇರೀತಿ ಹೆಚ್ಚಿಸಿದರು. ನನ್ನ ಮಾನ್ಯ ಸ್ನೇಹಿತರು ಹೇಳಿದಹಾಗೆ ನಾನಾ ಕಾರಣಗಳಿಂದ 22 ಲಕ್ಷಕ್ಕೆ ಇಳಿಸಿದ್ದಾರೆ. ಅದನ್ನು ಜಾಸ್ತಿಮಾಡುವ ಅವಕಾಶವಿದೆಯೆಂಬ ಭರವಸೆಯನ್ನು ನಾನು ಕೊಡಬಲ್ಲೆ. ಆ ಒಂದು ನಂಬಿಕೆಯಿಂದ ನಾವು ಮುಂದುವರಿಯಬಹುದು. ಈ ವಿಷಯದ ಮೇಲೆ ಇನ್ನು ಹೆಚ್ಚಿಗೆ ಮಾತನಾಡುವುದು ಪ್ರಯೋಜನವಿಲ್ಲ.

ಶ್ರೀ ಎಲ್. ಎಸ್. ವೆಂಕಾಜಿರಾವ್ (ಬಸವನಗುಡಿ).—ಕಮ್ಯೂನಿಟಿ ಸೆಂಟರುಗಳನು ಮಾಡುವುದಕ್ಕೋಸ್ಕರವೇ ಹೆಚ್ಚು ಹಣ ಬೇಕೆಂದು ಕೇಳಿರುವುದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಒಳ್ಳೆಯದು. ಈ ಸಂದರ್ಭದಲ್ಲಿ ಮಾನ್ಯ ಶ್ರೀ ಹನುಮಂತಯ್ಯನವರು ತಮ್ಮ ಉಜ್ವಲ ಭಾಷಣದ ಆರ್ಭಟದಲ್ಲಿ ನೆಲಮಂಗಲದ ಒಬ್ಬ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಒಂದು ಕೈಯೇ ಇಲ್ಲ, ಕೆಲಸಮಾಡುವುದಿಲ್ಲ, ಮೊದಲು ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರು. ಅದನ್ನೆಲ್ಲಾ ಕೂಲಂಕಷವಾಗಿ ವಿಚಾರಿಸದಮೇಲೆ ನಿಜಾಂಶ ತಿಳಿಯಿತು. ರೆವಿನ್ಯೂ ಇನ್ಸ್‌ಪೆಕ್ಟರ್ ಒಂದೇ ಕೈಯ್ಯಿಂದ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಏನೂ ದೂರುಗಳು ಅವರ ಮೇಲೆ ಬಂದಿಲ್ಲ. ಹಾಗೆ ಒಂದುವೇಳೆ ಆತನ ಕೈಲಿ ಕೆಲಸವಾಗದಿದ್ದರೆ ಮೇಲಿನ ಅಧಿಕಾರಿಗಳು ಅವನ ಮೇಲೆ ಒಂದು ದೂರನ್ನು ಕೊಡುತ್ತಿದ್ದರು. ಅದು ಏನೂ ಕಾಣಲಿಲ್ಲ.

ಒಬ್ಬ ಸದಸ್ಯರು.—ಎರಡು ಕೈ ಇಲ್ಲದಿದ್ದರೂ ಬೈಸಿಕಲ್ ಬಿಡಬಹುದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಒಂದು ಕೈ ಇಲ್ಲದವರು ಸರ್ಕಾರದ ಕೆಲಸದಲ್ಲಿರಕೂಡದು ಎಂದು ಯಾವ ಕಾನೂನಿನಲ್ಲಿಯೂ ಇಲ್ಲ. ಆದ್ದರಿಂದ ಶ್ರೀ ಹನುಮಂತಯ್ಯನವರು ಹೇಳಿದಹಾಗೆ ಅಲ್ಲಿನ ರೆವಿನ್ಯೂ ಇನ್‌ಸ್ಪೆಕ್ಟರನ್ನು ಆ ಒಂದು ಕಾರಣದಿಂದಲೇ ತೆಗೆದುಹಾಕುವುದಕ್ಕಾಗುವುದಿಲ್ಲ ಈಗಾಗಲೇ ಮೂರು ನಾಲ್ಕು ಜನ ರೆವಿನ್ಯೂ ಇನ್ಸ್‌ಪೆಕ್ಟರುಗಳು ಕೆಲಸದಿಂದ ವಜಾ ಆಗಿದ್ದಾರೆ. ಅಂತಹವರ ಮೇಲೆ ದೂರುಗಳೇನಾದರೂ ಇದ್ದರೆ, ಆ ದೂರುಗಳನ್ನು ಎಫಿಷಿಯನ್ಸಿ ಆಡಿಟ್ ಶಾಖೆಯವರು ಚೆನ್ನಾಗಿ ತನಿಖೆಮಾಡಿ ಸರ್ಕಾರಕ್ಕೆ ವರದಿಮಾಡುತ್ತಾರೆ. ಒಂದುವೇಳೆ ಅವರ ಕೈಯಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದೇಹೋಧರೆ, ಅವರ ಕೈಯಲ್ಲಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ವರದಿಮಾಡುತ್ತಾರೆ. ಆಗ ಸರ್ಕಾರದವರು ಅವರನ್ನು ಬದಲಾಯಿಸಬೇಕಾಗಿಬರುತ್ತದೆ.

ಶ್ರೀ ಎಂ. ಹನುಮಂತಯ್ಯ.—ನಾನು ಹೇಳುವುದು ಅವರನ್ನು ವಜಾಮಾಡಿ ಎಂದಲ್ಲ. ಅವರ ಕೈಯಲ್ಲಾಗುವ ಕೆಲಸವನ್ನು ಕೊಡಿ ಎಂದು.

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಮಾಡಿ, ಅವರ ಕೈಯಲ್ಲಿ ಈಗ ಕೊಟ್ಟಿರುವ ಕೆಲಸವಾಗದಿದ್ದರೆ, ಆ ವಿಷಯವನ್ನು ಯೋಚನೆ ಮಾಡಬಹುದು. ಅದು ಮಾನ್ಯ ಸದಸ್ಯರ ಒಂದು ಸಲಹೆ.

ಅವರು ಇನ್ನೂ ಒಂದು ವಿಷಯವನ್ನು ಹೇಳಿದರು. ನಿಮ್ನ ಪಂಗಡದವರಿಗೆ ಗ್ರ್ಯಾಂಟನ್ನು, ಈ ವರ್ಷ ಕಡಮೆಯಾಗಿ ಒದಗಿಸಿದ್ದೀರಿ ಎಂದು. ನಾನು ಅವರೂ

ಇಬ್ಬರೂ ಹಳಬರು. 25 ವರ್ಷಗಳಿಂದ ಪರಿಚಯಸ್ಥರು. ಆದರೂ ಇನ್ನೂ ಕಣ್ಣುಮುಚ್ಚಿಕೊಂಡೇ ಕುಳಿತಿದ್ದಾರೆ. ಅವರಿಗೆ ಕೆಲಸಬಿಟ್ಟುಬರುವುದಕ್ಕೆ ಎಳ್ಳೋ ಇಷ್ಟವಿಲ್ಲವೆಂದು ಕಾಣುತ್ತದೆ. ಅಧಿಕಾರದ ಮೇಲೆ ಬಹಳ ಆಸೆಯಿದೆ ಎಂದು ಉದ್ರೇಕಗೊಂಡು ನನ್ನ ಮೇಲೆ ಹೇಳಿದರು. ಅಲ್ಲದೆ ಗುದ್ದಾಟವಾಡುವ ರೀತಿಯಲ್ಲಿ ಮಾತನಾಡಿಬಿಟ್ಟರು. ಅದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಂ. ಹನುಮಂತಯ್ಯ.—ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.—ಈ ರೀತಿ ಮಂತ್ರಿಗಳು ಉತ್ತರ ಕೊಡುತ್ತಿರುವಾಗ ಮಧ್ಯೆ ಮಧ್ಯೆ ಪ್ರವೇಶಿಸಿ ಮಾತನಾಡುವುದು ಸಭೆಗೆ ತುಂಬ ಅಗೌರವವಾಗುತ್ತದೆ. ಒಂದೇಸಾರಿ ಏನು ಹೇಳಬೇಕೋ ಅವನ್ನು ಹೇಳಿಬಿಡಿ. ತಾವು ಏನಾದರೂ ಕೇಳುವ ಅಂಶಗಳಿದ್ದರೆ ಕೇಳಿ. ತಾವು ಎಷ್ಟೋ ವರ್ಷಗಳಿಂದ ಅಸೆಂಬ್ಲಿಯಲ್ಲಿ ಇದ್ದೀರಿ. ನೀವೇ ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀಮತಿ ಬಸವರಾಜೇಶ್ವರಿಯವರು ಹರಿಜನರಿಗೆ ಕೊಡುವ ಗ್ರಾಂಟು ಬಹಳ ಕಡಮೆ ಎಂದು ಹೇಳಿದರು. 300 ರೂಪಾಯಿಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ ಇನ್ನೂ ಜಾಸ್ತಿ ಮಾಡಬೇಕೆಂದು ಸಲಹೆಕೊಟ್ಟರು. ಅದೇ ರೀತಿಯಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಪ್ರಕಾರ ಈ ಮೊಬಲಗನ್ನು ಜಾಸ್ತಿಮಾಡಬೇಕಾದ ಅವಶ್ಯಕತೆಯೇನೋ ಇದೆ. 300 ರೂಪಾಯಿಗಳನ್ನು ಅವರಿಗೆ ಗ್ರಾಂಟುರೂಪವಾಗಿ ಕೊಡುತ್ತಿರುವುದು ಸಾಲದು ಎಂಬ ಅಂಶವನ್ನು ಯೋಚನೆ ಮಾಡಿದ್ದೇವೆ. ಆ ವಿಷಯವನ್ನು ಕುರಿತು ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಉತ್ತರ ಹೇಳುತ್ತಾರೆ. ಕೊಡತಕ್ಕಂಥ ಗ್ರಾಂಟನ್ನು ವರ್ಷದ ಕೊನೆಗೆ ಕೊಡಲಾಗುತ್ತದೆ. ಆದರೆ ಹಾಗೆ ಮಾಡದೆ ಆದಷ್ಟು ಬೇಗನೆ ಕೊಡಬೇಕು ಎಂದು ಶ್ರೀ ಬಿ. ರುದ್ರಯ್ಯನವರು ಹೇಳಿದ್ದಾರೆ. ಹಿಂದೆ ಎರಡುಸಾರಿ ಆರೀತಿ ಕೊಡಬೇಕಾಗಿ ಬಂತು. ಅದರಿಂದ ವಿಳಂಬವಾಯಿತು. ಈ ವರ್ಷ ಬಹುಮಟ್ಟಿಗೆ ಕೊಟ್ಟಿರತಕ್ಕ ಹಣವೆಲ್ಲ ಖರ್ಚಾಗುತ್ತದೆ. ಬೇಗನೆ ಕೊಡುವ ಹಾಗೆ ಮಾಡಲಾಗಿದೆ. ಆದುದರಿಂದ ಹಣ ಈ ವರ್ಷ lapse ಆಗಬಹುದೆಂಬ ಭಯಕ್ಕೆ ಅವಕಾಶವಿಲ್ಲ ಎಂದು ನಾನು ತಿಳಿಸುತ್ತೇನೆ. ಈಗಾಗಲೇ Vote on Account ಪಾಸ್ ಆಗಿರುವುದರಿಂದ ಈ ವರ್ಷ ಬೇಗನೆ ಹಂಚುವದಕ್ಕೆ ಆರ್ಡರ್ ಮಾಡಿದ್ದೇವೆ. ಆ ರೀತಿ ಹಂಚಿಬಿಡುತ್ತೇವೆ. ಅಂಥ ಆಪಾದನೆಗೆ ಇನ್ನು ಅವಕಾಶವಿಲ್ಲವೆಂದು ಹೇಳುತ್ತೇನೆ.

ಇನ್ನು ಶ್ರೀ ರೇವಣಸಿದ್ದಪ್ಪನವರು ಟೆಂಡರ್ ಕಾಲ್‌ಫಾರ್ ಮಾಡದೇ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ಈ ಆಪಾದನೆ ಬಂದಿದೆ. ಇದನ್ನು ಸರಿಪಡಿಸುತ್ತೇವೆ. ಇನ್ನು ಮನೆಕಟ್ಟುವದಕ್ಕೆ ಕೊಡಬೇಕಾದ ಹಣದ ವಿಚಾರ. ಪ್ರತಿಯೊಂದು ಜಿಲ್ಲೆಯ ಜನಸಂಖ್ಯೆಯ ಪ್ರಮಾಣದಮೇಲೆ ಇದನ್ನು ಹಂಚಿದ್ದಾರೆ. ಈಗ ಹೊಸರಾಜ್ಯವಾಗಿದೆ. ಬೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸತಕ್ಕ ಒಂದು ಸ್ಕೀಮ್ ಇರಲಿಲ್ಲ. ಹಳೆಯ ಮೈಸೂರಿನಲ್ಲಿ ಈ ಸ್ಕೀಮ್ ಇತ್ತು. ಹೊಸದಾಗಿ ಬಂದ ಪ್ರದೇಶದಲ್ಲಿ ಈ ಸ್ಕೀಮಿನ ವ್ಯವಸ್ಥೆ ಅಲ್ಲಿಯ ಜನರಿಗೆ ಗೊತ್ತಿರಲಿಲ್ಲ. ಈ ಹೊಸ ಪ್ರದೇಶದಲ್ಲಿ ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರ್ ಇದಿರಲಿಲ್ಲ. ಈಗ ಈ ಎಲ್ಲ ಏರ್ಪಾಡು ಮಾಡುತ್ತಿದ್ದೇವೆ. ಮೊಟ್ಟಮೊದಲನೆಯದಾಗಿ ಈ ವರ್ಷ ಮನೆ ಕಟ್ಟತಕ್ಕಂಥ ಗ್ರಾಂಟನ್ನು ಕೊಡುವದರಿಂದ ಹೆಚ್ಚಾಗಿ ಖರ್ಚುಮಾಡಲು ಆಗುವದಿಲ್ಲವೆಂದು ಸ್ವಲ್ಪ ಕಡಮೆ ಹಣ ಕೊಟ್ಟಿದ್ದೇವೆ. ಬಹುಮಟ್ಟಿಗೆ ಈ ವರ್ಷದ ಅನುಭವ ತಿಳಿದುಕೊಂಡು ಮುಂದೆ ಹೆಚ್ಚಿಗೆ ಹಣ ಕೊಡುತ್ತೇವೆ.

ಸಾಮಾನುಗಳನ್ನು ಒದಗಿಸುವದರಬದಲು ಹಣ ಕೊಡಬೇಕೆಂಬ ಈ ಒಂದು ವಾದ ಬಹಳ ದಿವಸದಿಂದಲೂ ಇದೆ. ಕೆಲವರು ಸಾಮಾನುಗಳನ್ನೇ ಕೊಡಬೇಕು, cash ಹಣ ಬೇಡ ಎಂದೂ ಹೇಳುವುದುಂಟು. ನಮಗೆ ಬಂದಿರುವ ಅನುಭವದಿಂದ ಹಣ ಕೊಟ್ಟಿದ್ದನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ. ಶಿವಮೊಗ್ಗಾ ಅರಣ್ಯದಲ್ಲಿಯ ಒಳ್ಳೆ ಮರವನ್ನು ತರಿಸಿ ಬಾಗಿಲು ಕಿಟಕಿಗಳನ್ನು ತಯಾರುಮಾಡುವುದಕ್ಕೆ ಕಂಟ್ರಾಕ್ಟ್ ಕೊಡುತ್ತೇವೆ. $\frac{3}{4}$ ರಷ್ಟು ಸಾಮಾನುಗಳನ್ನು $\frac{1}{4}$ ರಷ್ಟು ಅಂದರೆ ಶೇಕಡಾ 25 ರಷ್ಟನ್ನು ಕ್ಯಾಷ್ ಕೊಡಬೇಕು ಎಂಬುದಕ್ಕೆ ಸದಸ್ಯರು ಒಪ್ಪಿದ್ದಾರೆ.

ಶ್ರೀ ಲಿಂಗಾರೆಡ್ಡಿಯವರು ಹರಿಜನರಿಗೆ ಹಂಚತಕ್ಕ ಹಣದ ವಿಚಾರದಲ್ಲಿ ಬಹುಶಃ ಹಳೆಯ ಸರ್ಕ್ಯುಲರ್ ಆಧಾರದಮೇಲೆ ಆರೀತಿ ಹೇಳಿದ್ದಾರೆ ಎಂದು ಕಾಣುತ್ತದೆ. ಆದರೆ ಈ ವರ್ಷ ಹಣ ಹಂಚುವುದಕ್ಕೆ ಒಂದು ಯೋಜನೆ ಮಾಡಿದ್ದೇವೆ. ಐದು ಜನರನ್ನೊಳಗೊಂಡ ಒಂದು ಸಣ್ಣ ಕಮಿಟಿ ಮಾಡಲಾಗುವುದು, ಅದರಲ್ಲಿ M.L.A. ಗಳು ಸಹ ಇರುತ್ತಾರೆ. ಈ ರೀತಿಯಾಗಿ ಐದು ಜನರನ್ನೊಳಗೊಂಡ ಒಂದು ಕಮಿಟಿ ಮಾಡಿ ಹಣ ಹಂಚಬೇಕು ಎಂದು ಮಾಡಿದ್ದೇವೆ. ಇನ್ನು ಶ್ರೀ ಎಚ್. ಕೆ. ಸಿದ್ದಯ್ಯನವರು ಹೇಳಿದ ವಿಷಯ ವಾದವಿವಾದ ಪ್ರಶ್ನೆಯಾಗಿದೆ. ಇದೊಂದು All India Pattern Scheme ಆಗಿದೆ. ಆದರೂ ಸಹ ಈ ವರ್ಷ ಸಂತೋಷವಾಗಿ ಇನ್ನೂ ಹೆಚ್ಚಿಗೆ ಹಣ ಕೊಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು ಮರಗಳ ವಿಚಾರವಾಗಿ ಅನ್ಯಾಯವಾಗುತ್ತದೆ, ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಈ ಕೆಲಸ ಮಾಡಿಸುವುದು ಬೇಡ ಎಂದು ಕೆಲವರು ಹೇಳುತ್ತಾರೆ. ಯಾಕೆಂದರೆ ನಂಬಿಕೆಯಿಂದ ಈ ಕೆಲಸ ಮಾಡಬೇಕಾಗುತ್ತದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಕಿಟಕಿ ಬಾಗಿಲು ಮಾಡಿಸುವುದಕ್ಕೆ ಶಿವಮೊಗ್ಗಾದಿಂದ ಕಟ್ಟಿಗೆ ತರಿಸುತ್ತೇವೆ. ಡೆಪ್ಯುಟಿ ಕಮಿಷನರವರು ಟೆಂಡರು ಕರೆದು ಈ ಕೆಲಸ ಕೊಡುತ್ತಾರೆ. ಆದರೆ ಈಗ ಒಂದು ಕಮಿಟಿ ಮಾಡಬೇಕೆಂದು ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಈ ವಿಚಾರದಲ್ಲಿ ಯಾವದೇ ತರದ ಲೋಪವಿಲ್ಲವೆಂದು ನಾನು ಹೇಳುವುದಿಲ್ಲ. ಇದನ್ನು ಸರಿಪಡಿಸಲು ಎಲ್ಲರೂ ಪ್ರಯತ್ನಮಾಡಬೇಕಾಗಿದೆ.

ಇನ್ನು ಶ್ರೀಮತಿ ರುಕ್ಮಿಣಿಯಮ್ಮನವರು ಹರಿಜನರಿಗೆ ಕುಡಿಯುವ ನೀರಿನ ಭಾವಿಗಳ ಬಗ್ಗೆ ಸಾಕಷ್ಟು ಹಣ ಮಂಜೂರ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಎಲ್ಲಾ ಕೆಲಸಗಳೂ ಒಂದೇ ವರ್ಷದಲ್ಲಿ ಹೇಗೆ ಮಾಡಲು ಆಗುತ್ತದೆ ! ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಹಣ ಒದಗಿಸಿದ್ದೇವೆ. ಹೋದ ವರ್ಷ 19 ಲಕ್ಷ ರೂಪಾಯಿ, ಹಳೇ ಮೈಸೂರಿಗಾಗಿ ಬಡ್ಜೆಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಜನರಿಗಾಗಿ ಹಣ ಕೊಟ್ಟಿತ್ತು. ಹೊಸ ಮೈಸೂರು ರಾಜ್ಯ ರಚನೆಯಾದಮೇಲೆ ನಾವೆಲ್ಲರೂ ಒಂದೇ ಎಂದು ಭಾವಿಸಿ ಈ ಹಣವನ್ನು ಎಲ್ಲ ಪ್ರದೇಶದಲ್ಲಿಯೂ ಹಂಚಿದ್ದೇವೆ

ಮತ್ತೆ 12 ಲಕ್ಷ ರೂಪಾಯಿ ಬಂದದ್ದನ್ನು ತಿರುಗಿ ಹಂಚಿದ್ದೇವೆ. ಆದ್ದರಿಂದ ವ್ಯತ್ಯಾಸ ಮಾಡುವದಿಲ್ಲ. ಸ್ವಲ್ಪ ವಿಳಂಬವಾಗುತ್ತದೆ. ಜನವರಿಯಲ್ಲಿ ಬಂತು

(ಶ್ರೀ ಆರ್. ಚೆನ್ನಿಗರಾಮಯ್ಯ)

ಫೆಬ್ರುವರಿಯಲ್ಲಿ ಹಂಚಿದೆವು. ಬಾವಿಗಳ ವಿಚಾರದಲ್ಲೂ ಸಹ ಯಾವ ತೊಂದರೆಯೂ ಇಲ್ಲ. ರೂರಲ್ ಡೆವಲಪ್ ಮೆಂಟ್ ಸ್ಕೀಂನಲ್ಲಿ ಬಾವಿಗಳಿಗೆ ಗ್ರಾಂಟ್ ಇದೆ. ಹರಿಜನರಿಗೆ ಪ್ರತ್ಯೇಕವಾಗಿ ಕೊಡಬೇಕು............

(Sri TALWALKAR in Marathi.)

ಶ್ರೀ ಆರ್. ಚೆನ್ನಿಗರಾಮಯ್ಯ.—ತಾವು ನನಗೆ ಹೇಳಿದ್ದು ಗೊತ್ತಾಗಲಿಲ್ಲ 'ಮ್ಯೆ ಕ್ಯಾಕರೂ'! (ಸಭೆಯಲ್ಲಿ ನಗು!)

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಮಾನ್ಯ ಮಿತ್ರರು ಏನು ಹೇಳಿದರೋ ನಮಗೆ ತಿಳಿಯಲಿಲ್ಲ. ಸಚಿವರು 'ಮ್ಯೆ ಕ್ಯಾಕರೂ' ಎಂದು ಹೇಳುತ್ತಾರೆ. ಹೀಗಾದರೆ ಹೇಗೆ?

ಅಧ್ಯಕ್ಷರು.—ನಿಮಗೆ ತಿಳಿಯಲಿಲ್ಲ ಎಂದರೆ ನಾನು ಒಪ್ಪುವುದಿಲ್ಲ. 'ಹರಿಜನರು ಎನ್ನುತ್ತಾರೆ; ಅದು ಯಾವ ಡಿಕ್ಷ್‌ನರಿಯಲ್ಲೂ ಇಲ್ಲ ಎಲ್ಲಿಂದ ಬಂತು' ಎಂದು ಕೇಳುತ್ತಾರೆ. ಅದಕ್ಕೆ ನಾನು ಉತ್ತರ ಹೇಳಿದ್ದೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅಕ್ವಿಸಿಷನ್ ವಿಚಾರದಲ್ಲಿ ಬಹಳ ವಿಳಂಬವಾಗುತ್ತದೆ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ಒಂದು ಅಂಕಿ ಅಂಶ ತಿಳಿಸುತ್ತೇನೆ. ಒಂದನೆ ನವಂಬರ್ 1956 ರಿಂದ ಮೂವತ್ತೊಂದನೆ ಮಾರ್ಚಿ 1958 ರ ವರೆಗೆ 885 ಅಕ್ವಿಸಿಷನ್ ಕೇಸುಗಳನ್ನು ನಡೆಸಿದ್ದೇವೆ. ಅದರಲ್ಲಿ 231 ಫೈನಲ್ ನೋಟಿಫಿಕೇಷನ್ ಆಗಿದೆ. 196 ನೋಟಿಫಿಕೇಷನ್ ಆಗುವುದರಲ್ಲಿದೆ, ಬಾಕಿಯವುಗಳ ವಿಚಾರದಲ್ಲಿ ನಾರ್ಮಲ್ ಪ್ರೊಸೀಡಿಂಗ್ಸ್ ನಡೆಯುತ್ತಿವೆ. 1955-56 ರಲ್ಲಿ 105 ಕೇಸುಗಳ ವಿಷಯದಲ್ಲಿ ಫೈನಲ್ ನೋಟಿಫಿಕೇಷನ್ ಆಗಿದೆ. ಈ ವರ್ಷದಲ್ಲಿ 427 ಕೇಸುಗಳು ಆಗಿವೆ. ಆದ್ದರಿಂದ ನಿದಾನವಾಗುತ್ತಿಲ್ಲ, ಹಿಂದಿನ ವರ್ಷಗಳಿಗಿಂತ ಡಬ್ಬಲ್, ಟ್ರಿಬ್ಬಲ್ ಆಗಿದೆ ಎಂದು ಅಷ್ಟು ಮಾತ್ರ ತಿಳಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ—ಅನುಸೂಚಿತ ಜಾತಿಗಳು).—ಆರ್ಡರ್ ಆಗಿದೆ, ಪೊಸಿಷನ್ ಕೊಟ್ಟಿದ್ದೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಒಂದೆರಡು ಕಡೆಗಳಲ್ಲಿ ಪೊಸಿಷನ್ ಕೊಟ್ಟಿಲ್ಲ ಎಂಬ ಅಂಶ ಗೊತ್ತಿದೆ, ನಾನಾ ಕಾರಣಗಳಿಂದ ಪೊಸಿಷನ್ ಕೊಟ್ಟಿಲ್ಲ. ನಿಧಾನವಾಗಿದೆ. ಅಲ್ಲಿರತಕ್ಕ ಜಮೀನ್‌ದಾರರ ಪರಾಕ್ರಮದಿಂದಲೋ, ಪಾಳೆಯಗಾರತನದಿಂದಲೋ ಪೊಸಿಷನ್ ಕೊಡುವುದಕ್ಕೆ ಆಗಿಲ್ಲ. ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಂಡಿದ್ದೇವೆ. ಆ ರೀತಿ ಯಾವುದೋ ಒಂದೆರಡು ಕೇಸು ಇದೆ. ಎಲ್ಲಾ ಕಡೆಯಲ್ಲೂ ಆಗಿಲ್ಲ.

ಶ್ರೀ ಎ. ಮುನಿಯಪ್ಪ.—ಹೈಕೋರ್ಟ್ ತೀರ್ಮಾನವಾಗಿ ಸರ್ಕಾರದವರು ಆರ್ಡರ್ ಹೊರಡಿಸಿದ್ದರೂ ಆ ಹಳ್ಳಿಯಲ್ಲಿರತಕ್ಕ ಒಬ್ಬ ಚೇರ್ಮನ್‌ರು ಸರ್ಕಾರದ ಆರ್ಡರ್ ಜಾರಿಗೆ ಕೊಡುತ್ತಿಲ್ಲ ಎಂದ ಮೇಲೆ ಸರ್ಕಾರ ಏಕೆ ಇರಬೇಕೆಂಬುದು ನನ್ನ ಪ್ರಶ್ನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ದಯವಿಟ್ಟು ಯಾವ ಹಳ್ಳಿಯಲ್ಲಿ ಚೇರ್ಮನ್‌ರು ಆರೀತಿ ಮಾಡಿದ್ದಾರೆ ಎಂಬುದನ್ನು ನನ್ನ ಗಮನಕ್ಕೆ ತಂದರೆ ತಕ್ಕ ಏರ್ಪಾಡು ಮಾಡುತ್ತೇನೆ.

ಶ್ರೀ ಎ. ಮುನಿಯಪ್ಪ.—ಚಿಂತಾಮಣಿ ತಾಲ್ಲೂಕು, ತಿಮ್ಮಸಂದ್ರ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅದಕ್ಕೆ ತಕ್ಕ ಏರ್ಪಾಡುಮಾಡಿದ್ದೇವೆ, ನನಗೆ ಗೊತ್ತಿದೆ. ಒಂದನೆಯ ನವಂಬರ್ 1955 ರಿಂದ ಒಂದನೆಯ ನವಂಬರ್ 1956 ರವರೆಗೆ ಮುನಿಸಿಪಾಲಿಟಿಗಳಲ್ಲಿ 36 ಅಕ್ವಿಸಿಷನ್ ಕೇಸುಗಳು ಆಗಿದೆ. ಒಂದನೆಯ ನವಂಬರ್ 1956 ರಿಂದ ಒಂದನೆಯ ನವಂಬರ್ 1957 ರ ವರೆಗೆ ಆ ವರ್ಷದಲ್ಲಿ 99 ಕೇಸುಗಳು ಆಗಿವೆ. ಆದ್ದರಿಂದ ತಾವೇ ಲೆಕ್ಕಹಾಕಿಕೊಳ್ಳಿ. ಹಿಂದಿನ ವರ್ಷದ ಲೆಕ್ಕ ಕೊಟ್ಟಿದ್ದೇನೆ. ಈಚೆಗೆ ಮಾರ್ಚಿ ಏಪ್ರಿಲ್ ತಿಂಗಳಿನಲ್ಲಿ ಇನ್ನೂ ಜಾಸ್ತಿ ಆಗಿದೆ. ಬಹಳ ವಿಳಂಬವಾಗಿಲ್ಲ, ಆದಷ್ಟು ಬೇಗ ಆಗುತ್ತದೆ ಎಂದಿಷ್ಟು ಮಾತ್ರ ಹೇಳುತ್ತೇನೆ.

ಶ್ರೀಮಾನ್ ಮೊಹಿಸಿನ್ ಅವರು ಹುಬ್ಬಳಿಗೆ ಸಂಬಂಧಪಟ್ಟಂತೆ ವಾಟರ್ ಸಪ್ಲೈ ವಿಚಾರದಲ್ಲಿ ಬಹಳ ಉದಾಸಿನ ಮಾಡಿದ್ದಾರೆ ಎಂದು ಹೇಳಿದರು. ಹಣ ಮಂಜೂರಾಗಿದೆ, ನಾನಾ ಕಾರಣಗಳಿಂದ ಆ ಕೆಲಸ ವಿಳಂಬವಾಗುತ್ತಿದೆ. ಅದೇ ರೀತಿ ಸ್ಲಂಕ್ಲಿಯರೆನ್ಸ್ ಸ್ಕೀಂ ಹುಬ್ಬಳ್ಳಿಗೆ ಮಂಜೂರಾಗಿದೆ, ಎರಡು ಲಕ್ಷ ರೂಪಾಯಿ ಮಂಜೂರಾಗಿದೆ. ಅಲ್ಲದೆ ಟೌನ್ ಇಂಪ್ರೂವ್‌ಮೆಂಟ್ ಗ್ರಾಂಟ್ ಎಂದು ಹೇಳಿ 30 ಸಾವಿರ ರೂಪಾಯಿಗಳನ್ನು ಹಿಂದಿನ ವರ್ಷ ಕೊಟ್ಟಿದ್ದೇವೆ. ಶ್ರೀಮಾನ್ ದೀನದಯಾಳು ನಾಯ್ಡು ಅವರು ಸ್ಲಂ ಕ್ಲಿಯರೆನ್ಸ್ ವಿಚಾರದಲ್ಲಿ ಅನುಮಾನ ವ್ಯಕ್ತಪಡಿಸಿದರು. ಆಕ್ಟ್ ಜಾರಿಗೆ ತಂದಿಲ್ಲ ಎಂದು ಹೇಳಿದರು. ಡ್ರಾಫ್ಟ್ ಆಗುತ್ತಾ ಇದೆ. ಈ ಸೆಷನ್ನಿನಲ್ಲೇ ಬಿಲ್ ತರಬೇಕೆಂದು ನಮಗೆ ಆಸೆಯಿದೆ. ಖಂಡಿತವಾಗಿಯೂ ತರುತ್ತೇವೆ. ಪಾಸ್ ಮಾಡಿಯೇ ಮಾಡಬೇಕು, ಅದು ಬಹಳ ಅವಶ್ಯಕವಾದ ವಿಚಾರ.

Sri F. H. MOHSIN (Hubli city).—What is the amount to be given to the Hubli Municipality for slum clearance?

ಶ್ರೀ ಆರ್. ಚೆನ್ನಿಗರಾಮಯ್ಯ.—ಹುಬ್ಬಳ್ಳಿ ಮುನಿಸಿಪಾಲಿಟಿಗೆ 79,700 ರೂಪಾಯಿ ಈಗಾಗಲೇ ಕೊಟ್ಟಿದೆ. ಅಲ್ಲಿಗೆ ಮಂಜೂರಾಗಿರುವುದು ಮಂಟಗಳ್ಳಿ ಪ್ರಾಜೆಕ್ಟಿಗೆ 59,400 ರೂಪಾಯಿ. ವೀರಾಪುರ ಪ್ರಾಜೆಕ್ಟಿಗೆ ಒಂದು ಲಕ್ಷ ರೂಪಾಯಿ. ಅದರಲ್ಲಿ ಶೇಕಡ 50 ಗ್ರಾಂಟು, ಶೇಕಡ 50 ಲೋನು. ಈ ಪ್ರಕಾರ ಹುಬ್ಬಳ್ಳಿ ಮುನಿಸಿಪಾಲಿಟಿಗೆ ಕೊಟ್ಟಿದೆ.

ಲೀಲಾವತಿ ಮಾಗಡಿ ಅವರು ಡಿಸ್ಟ್ರಿಕ್ಟ್ ಮತ್ತು ಲೋಕಲ್ ಬೋರ್ಡ್ ರಸ್ತೆಗಳ ವಿಷಯ ಹೇಳಿದರು. ಆಯಾಯಾ ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಐ. ವಿ. ಸಿ. ರಸ್ತೆಗಳನ್ನು ಮೇನ್‌ಟೇನ್ ಮಾಡುವುದರಲ್ಲಿ ಬಹಳ ಉದಾಸೀನ ಮಾಡಿದ್ದಾರೆ, ಯಾವುದನ್ನೂ ಸುಲಲಿತವಾಗಿ ಮೇನ್‌ಟೇನ್ ಮಾಡುತ್ತಿಲ್ಲ ಎಂದು ಹೇಳಿದರು. ಒಂದೊಂದಾಗಿ ಡಿಸ್ಟ್ರಿಕ್ ಬೋರ್ಡ್ ರಸ್ತೆಯನ್ನು ಅದು ನಿಜ. ಅದಕ್ಕೆ ಪಿ. ಡಬ್ಲ್ಯು. ಡಿ. ಅವರು ತೆಗೆದುಕೊಂಡಹಾಗೆ ಐ. ವಿ. ಸಿ. ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತೆಗೆದುಕೊಳ್ಳುತ್ತಾರೆ.

ಅನೇಕ ಮಾನ್ಯಸದಸ್ಯರು ಹೇಳಿರತಕ್ಕ ಎಲ್ಲಾ ಅಂಶಗಳನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ. ಗಮನದಲ್ಲಿಟ್ಟುಕೊಂಡು ಅದನ್ನು ಸರಿಪಡಿಸಲಿಕ್ಕೆ ಸರ್ವ ಪ್ರಯತ್ನ ಪಡುತ್ತೇವೆ.

ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಮಾನ್ಯ ಮಂತ್ರಿಗಳು ಕೆ. ಜಿ. ಎಫ್. ಸ್ಯಾನಿಟರಿ ಬೋರ್ಡಿನ ವಿಚಾರವನ್ನೇನೂ ತಿಳಿಸಲೇ ಇಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ವಿಚಾರದಲ್ಲಿ ಶ್ರೀಮಾನ್ ನಾರಾಯಣಗೌಡರಿಗೂ ಮತ್ತು ಶ್ರೀ ಆರೋಗ್ಯಂರವರಿಗೂ ಬಹಳ ಕುತೂಹಲವಿದೆಯೆಂಬ ವಿಚಾರ ಗೊತ್ತಿದೆ. ನಾನೂ ಸಹ ಈಗ ಆ ವಿಚಾರವನ್ನೇ ಹೇಳುತ್ತಿದ್ದೆ. ಆದರೆ ಕಾಲಾವಕಾಶವಿಲ್ಲ. ಈಗ ಅಲ್ಲಿರುವ ಸ್ಯಾನಿಟರಿ ಬೋರ್ಡನ್ನು ತೆಗೆದುಹಾಕಿ ಆ ನಾನ್ ಮ್ಯೆನಿಂಗ್ ಏರಿಯಾಕ್ಕೇ ಒಂದು ಪ್ರತ್ಯೇಕ ಸ್ಯಾನಿಟರಿ ಬೋರ್ಡನ್ನ ಜಾರಿಗೆ ತರತಕ್ಕ ವಿಚಾರದಲ್ಲಿ ಆ ಜಿಲ್ಲೆಯ ಅಧಿಕಾರಿಗಳ ನ್ನೆಲ್ಲಾ ಸಭೆಕರೆದು ಎಲ್ಲ ವಿಚಾರಗಳನ್ನೂ ಪರಿಶೀಲನೆ ನಡೆಸಿದ್ದೇವೆ. ಈ ವಿಚಾರದಲ್ಲಿ ಈಗ ಎಲ್ಲ ಪ್ರದೇಶ ಗಳಿಗೂ ಯೂನಿಫಾರಂ ಆಗಿ ಅಪ್ಲೈ ಆಗತಕ್ಕಂಥ ಒಂದು ಮುನಿಸಿಪಲ್ ಆಕ್ಟನ್ನ ಜಾರಿಗೆ ತರತಕ್ಕ ಪ್ರಯತ್ನದಲ್ಲಿದ್ದೇವೆ. ಆ ಬಗ್ಗೆ ಈಗಾಗಲೇ ಒಂದು ಮಸೂದೆ ತಯಾರಾಗಿದೆ. ಅದು ಸದ್ಯದಲ್ಲೇ ಈ ಸಭೆಯ ಮುಂದಿರತಕ್ಕ ವಿಚಾರ ಎಲ್ಲ ಮಾನ್ಯ ಸದಸ್ಯ ರಿಗೂ ಈಗಾಗಲೇ ಗೊತ್ತಿದೆ. ಈ ಒಂದು ಹೊಸ ದಾಗಿ ಜಾರಿಗೆ ತರಬೇಕೆಂದಿರುವ ಮುನಿಸಿಪಲ್ ಆಕ್ಟ್ ಇನ್ನು ಮುಂದಕ್ಕೆ ಕೆ. ಜಿ. ಎಫ್. ನಾನ್ ಮ್ಯೆನಿಂಗ್ ಏರಿಯಾಕ್ಕೂ ಜಾರಿಗೆ ಕೊಡಬೇಕೆಂದಿ ದ್ದೇವೆ. ಇದರ ಬಗ್ಗೆ ಯಾರೂ ಸಂಶಯಪಡಬೇಕಾ ಗಿಲ್ಲ. ಮಾನ್ಯ ಸದಸ್ಯರು ಕೊಟ್ಟಿರುವ ಉತ್ತಮ ಸಲಹೆಗಳನ್ನೆಲ್ಲ ಸರ್ಕಾರದವರು ಪರಿಶೀಲನೆ ಮಾಡು ತ್ತಾರೆಂದು ಭರವಸೆ ಕೊಡುತ್ತೇನೆ.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ (ಶಿರಹಟ್ಟಿ).—ತಾವು ಈ ಸ್ಕಾಲರ್‌ಷಿಪ್‌ಗಳ ವಿಚಾರ ವನ್ನೇನೂ ತಿಳಿಸಲೇ ಇಲ್ಲವಲ್ಲ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆರ್ಥಿಕ ಸಚಿವ ರಾದ ಶ್ರೀ ಮರಿಯಪ್ಪನವರು ಈ ಪ್ರಶ್ನೆಗೆ ಉತ್ತರ ಕೊಡಬೇಕಾಗಿದೆ. ಆದರೆ ಈ ಬಗ್ಗೆ ಹೆಚ್ಚಿನ ವಿವರ ಗಳನ್ನೆಲ್ಲಾ ಡಿಮ್ಯಾಂಡ್‌ಗಳ ಬಗ್ಗೆ ಚರ್ಚೆನಡೆಯು ವಾಗ ಹೇಳಲಾಗುತ್ತದೆ.

ಶ್ರೀ ಬಿ. ರಾಚಯ್ಯ (ಚಾಮರಾಜನಗರ—ಅನು ಸೂಚಿತ ಜಾತಿಗಳು).—ಮುನಿಸಿಪಾಲಿಟಿಗಳ ವಿಚಾರ ದಲ್ಲಿ ಒಂದು ಕ್ಲಾರಿಫಿಕೇಷನ್......

[*Minister for Education rose.*]

ಅಧ್ಯಕ್ಷರು.—ಈ ರೀತಿ ಎಲ್ಲ ಮಾನ್ಯ ಸದಸ್ಯರೂ ಪ್ರಶ್ನೆ ಹಾಕಲು ಕಾಲಾವಕಾಶವಿಲ್ಲ. ನೀವು ಈ ವಿಚಾರಗಳನ್ನೆಲ್ಲ ಮಂತ್ರಿಗಳ ಛೇಂಬರಿನಲ್ಲಿ ತಿಳಿಯ ಬಹುದು. ತಾವು ಇಲ್ಲಿಗೆ ಸ್ವಲ್ಪ ಹೊತ್ತಿನ ಹಿಂದೆ ಸಭೆಯಲ್ಲಿರಲಿಲ್ಲ. ಏನೋ ಒಂದೆರಡು ಪ್ರಶ್ನೆಗಳಿದ್ದರೆ ಅದಕ್ಕೆ ಅವಕಾಶಕೊಡಬಹುದು. ಆದರೆ ಈಗ ಹೀಗೆ ಒಬ್ಬೊಬ್ಬರಿಗೆ ಪ್ರಶ್ನೆ ಕೇಳಲು ಅವಕಾಶ ಕೊಟ್ಟರೆ ಅನೇಕ ಮಾನ್ಯ ಸದಸ್ಯರು ನಮಗೂ ಅವಕಾಶ ಕೊಡಿ ಎಂದು ಕೇಳುತ್ತಾರೆ. ಆದರೆ ಅಷ್ಟಕ್ಕೆಲ್ಲ ಈಗ ಕಾಲಾವಕಾಶವಿಲ್ಲ; ವೇಳೆಯಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಏನಾದರೂ ಅಂಥ ವಿಚಾರ ಗಳಿದ್ದರೆ ಅದನ್ನು ಮಂತ್ರಿಗಳ ಛೇಂಬರಿನಲ್ಲಿ ತಿಳಿಯುವಂತೆ ತೀರ್ಮಾನ ಹೇಳಿದ್ದಾಗಿದೆ. ಹಾಗೆ ತೀರ್ಮಾನವಾದ ಮೇಲೂ ಈ ರೀತಿ ಮಾಡುತ್ತಿರು ವುದು ಸರಿಯಲ್ಲ.

ಶ್ರೀ ಬಿ. ರಾಚಯ್ಯ.—ನಾನೊಬ್ಬನೆ ಕೇಳುವುದು. ಒಂದೇ ಒಂದು ವಿಚಾರವಿದೆ......

ಅಧ್ಯಕ್ಷರು.—ಹಾಗಾದರೆ ಮತ್ಯಾರೂ ಮಾತ ನಾಡಗೊಡಿಸುವುದಿಲ್ಲ ಎಂಬ ಬಗ್ಗೆ ಈಗ ನೀವು ಜವಾ ಬ್ದಾರಿ ಹೊರುತ್ತೀರಾ?

ಶ್ರೀ ಎ. ಮುನಿಯಪ್ಪ.—ಅಂಥ ಪ್ರಾಮುಖ್ಯವಾದ ಸಂಗತಿಗಳೇನಾದರೂ ಇದ್ದರೆ ಕಡೆಯಲ್ಲಿ ಅವುಗಳನ್ನು ಕೇಳಬಹುದೆಂದು ಮಾನ್ಯ ಮಂತ್ರಿಗಳೇ ತೀರ್ಮಾನ ಕೊಟ್ಟಿದ್ದರೂ ತಾವು ಅವಕಾಶವನ್ನೇಕೆ ಕೊಡ ಬಾರದು?

ಅಧ್ಯಕ್ಷರು.—ಅಂಥ ಪ್ರಾಮುಖ್ಯ ಸಮಾಚಾರಗಳಿ ದ್ದರೆ ಅವಕಾಶಕೊಡೋಣ.

ಶ್ರೀ ಬಿ. ರಾಚಯ್ಯ.—ಎಲ್ಲ ಮುನಿಸಿಪಾಲಿಟಿ ಗಳಿಗೂ ನೀರನ್ನು ಒದಗಿಸಕ್ಕ ಬಗ್ಗೆ ಸರ್ಕಾರದವರು ಈ ಮುನಿಸಿಪಾಲಿಟಿಗಳಿಗೆ ಸಾಲ ಮಂಜೂರುಮಾಡು ತ್ತೇವೆಂದು ಹೇಳಿದ್ದರು. ಆದರೆ ಇತ್ತೀಚೆಗೆ ಆ ಸಾಲ ಕೊಡತಕ್ಕ ರೂಲ್ಸನ್ನ ರಿವೈಸ್‌ಮಾಡಿ ಬೇರೆ ರೂಪ ದಲ್ಲಿ ಸಾಲ ಕೊಡುತ್ತಿದ್ದಾರೆ. ಈ ಒಂದು ಬದಲಾವಣೆಯಿಂದ ಅನೇಕ ಮುನಿಸಿಪಾಲಿಟಿಗಳು ನೀರುಸರಬರಾಯಿ ಬಗ್ಗೆ ಕಾರ್ಯ ಪ್ರಾರಂಭಿಸಿ ಅರ್ಧಂ ಬರ್ಧ ಕೆಲಸಮಾಡಿ ಹಣವಿಲ್ಲದೆ ಈ ಕಾರ್ಯಗಳು ಹಾಗೇ ನಿಂತುಹೋಗಿರುತ್ತವೆ. ಈ ವಿಚಾರದಲ್ಲಿ ಸರ್ಕಾರದವರ ಅಭಿಪ್ರಾಯವೇನೆಂಬುದನ್ನು ತಿಳಿಯ ಬೇಕಾಗಿದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅವರು ಈ ವಿಚಾರವನ್ನು ಏಕೋ ಬಹಳ ಜೋರಾಗಿ ಕೇಳುತ್ತಿ ದ್ದಾರೆ. ಆದರೆ ಇದರಲ್ಲಿರತಕ್ಕ ಸ್ವಾರಸ್ಯವಿಷ್ಟೆ. ಈ ಹಿಂದೆ ಸರ್ಕಾರದವರು ಚಾಮರಾಜನಗರ ಮುನಿಸಿ ಪ್ಯಾಲಿಟಿಗೆ ನೀರಿನ ಸರಬರಾಯಿ ಬಗ್ಗೆ 12 ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿ ಮೂರು ಲಕ್ಷ ರೂಪಾಯಿಗಳನ್ನಾಗಲೇ ಕೊಟ್ಟಿದ್ದಾರೆ. ಆದರ ಅವರಿಗೀಗ ಫರ್ದರ್‌ಲೋನ್ ಬೇಕಾಗಿದೆ. ಅದಕ್ಕೆ ಸಾಲ ತೀರಿಸಲು ಇರತಕ್ಕ ವರಮಾನ ಮತ್ತು ಸೆಕ್ಯೂರಿಟಿ ಕೇಳಿದ್ದೇವೆ. ಆ ವಿಚಾರದಲ್ಲಿ ಅವರಿಂದ ಉತ್ತರ ಬಂದಕೂಡಲೆ ಆದಷ್ಟು ಜಾಗ್ರತೆ ಆ ವಿಚಾರವನ್ನು ಫೈಸಲ್ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಹರಿಜನರ ಅಸ್ಪೃಶ್ಯತೆ ಯನ್ನು ತೊಡೆದುಹಾಕಲು ಏನು ಯೋಜನೆಮಾಡಿ ದ್ದೀರಿ? ಎಲ್ಲೆಲ್ಲಿ ಪ್ರಚಾರ ನಡೆಸಿದ್ದೀರಿ? ಯಾವ ತರಹೆಯಲ್ಲಿ ಅಸ್ಪೃಶ್ಯತೆಯನ್ನು ನಿವಾ ರಣೆ ಮಾಡಬೇಕೆಂದು ಆಲೋಚಿಸಿದ್ದೀರಿ? ಹರಿಜನರ ಅಭಿವೃದ್ಧಿ ಬಗ್ಗೆ ನೇಮಿಸಿರತಕ್ಕ ಸ್ಪೆಷಲ್ ಆಫೀಸರಿಗೆ ಕೆಲವು ಹೆಚ್ಚಿನ ಅಧಿಕಾರಗಳನ್ನೇನಾದರೂ ಕೊಟ್ಟಿ ದ್ದೀರಾ? ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ನೀವು ಕೇಳುತ್ತಿರುವುದು ಯಾವ ತರಹೆ ಕ್ಲಾರಿಫಿಕೇಷನ್! ಅಥವಾ ನೀವೇನಾದರೂ ಈಗ ಮತ್ತೊಂದು ಭಾಷಣವನ್ನೇ ಮಾಡಲು ಹೊರಟ ಹಾಗೆ ಕಾಣುತ್ತಿದೆ.

ಶ್ರೀ ಎ. ಮುನಿಯಪ್ಪ.—ಹರಿಜನರಿಗೆ ಮನೆ, ಇನ್ನೂ ಅನೇಕ ವಿಚಾರಗಳ ಬಗ್ಗೆ ಸರ್ಕಾರ ಜರೂರು ಕಾರ್ಯ ಕ್ರಮಗಳನ್ನು ಕೈಗೊಳ್ಳಲು ಏನು ಮಾಡಿದ್ದಾರೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೆಲವು ವಾರಪತ್ರಿ ಕೆಗಳಿಗೆ ಧನಸಹಾಯ ನೀಡಿದ್ದೇವೆ. ಈ ದಿವಸ ಹರಿ ಜನೋದ್ಧಾರದ ಬಗ್ಗೆ ಸರ್ಕಾರ ಏನೇನು ಆಜ್ಞೆ ಗಳನ್ನು ಹೊರಡಿಸಿದೆ, ಯಾವ ಯಾವ ಮಾದರಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಿದೆ ಎನ್ನತಕ್ಕ ವಿಚಾರಗಳ ನ್ನೆಲ್ಲ ಪಾಂಚಜನ್ಯ ಎನ್ನತಕ್ಕ ವಾರಪತ್ರಿಕೆಯಲ್ಲೂ ಮತ್ತು ಇನ್ನೂ ಕೆಲವು ದಿನಪತ್ರಿಕೆಗಳಲ್ಲೂ ತಾವು ನೋಡಿರಬೇಕು. ಈ ಅಸ್ಪೃಶ್ಯತೆ ನಿವಾರಣೆಗಾಗಿ ಪ್ರಚಾರ, ಕಾನ್ಫರೆನ್ಸ್ ಹೀಗೆಲ್ಲ ಏನೇನು ಮಾಡ ಬೇಕೋ ಅದನ್ನೆಲ್ಲಾ ಮಾಡುತ್ತಿದ್ದೇವೆ. ಆದರೆ

(ಶ್ರೀ ಆರ್. ಚೆನ್ನಿಗರಾಮಯ್ಯ)

ಬರೀ ಪ್ರಚಾರ ಒಂದರಿಂದಲೇ ಅಸ್ಪೃಶ್ಯತೆ ಹೋಗುವುದಿಲ್ಲ. ಜನರ ಮನಸ್ಸು ಪರಿವರ್ತನೆ ಆಗಬೇಕು. ಈ ಜಾಡ್ಯ ಸಾವಿರಾರು ವರ್ಷದಿಂದ ಬೆಳೆದುಕೊಂಡು ಬಂದಿದೆ. ಈ ಬಗ್ಗೆ ಕಾರ್ಯಕ್ರಮಗಳು, ಕಾರ್ಯಕಾರೋನಿ ಇತ್ಯಾದಿಗಳನ್ನು ಮಾಡಿ ಇದನ್ನು ನಿರ್ಮೂಲ ಮಾಡಬೇಕು. ಅದಕ್ಕೆ ತಕ್ಕ ಪ್ರಯತ್ನ ನಡೆಸಿದ್ದೇವೆ. ಆ ಒಂದು ಮಾರ್ಗ ವಿನಾ ಹೀಗೆಲ್ಲ ಕಾನ್ಫರೆನ್ಸ್ ನಿಂದಲಾಗಲಿ ಅಥವಾ ಪ್ರಚಾರದಿಂದಲಾಗಲಿ ಇದು ಹೋಗತಕ್ಕದ್ದಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—ಭದ್ರಾವತಿ ನೀರಿನ ವ್ಯವಸ್ಥೆ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯ್ಕ (ಪುತ್ತೂರು).—ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರ ಭಾರತ ಘಟನಾವಳಿಯಲ್ಲಿ ಅಡಕಗಿದ್ದರೂ ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಮಾತನ್ನಾದರೂ ಆಡಿಲ್ಲ. ರಾಜ್ಯಾಂಗದಲ್ಲಿ ಅವಕಾಶವಿದ್ದರೂ ರಾಜ್ಯ ಸರ್ಕಾರ ಇದರ ಕಡೆಗೆ ಗಮನ ಕೊಡುತ್ತಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಷೆಡ್ಯೂಲ್ಡ್ ಟ್ರೈಬ್ಸ್, ಹಿಲ್‌ಟ್ರೈಬ್ಸ್ ವಿಚಾರದಲ್ಲಿ ಸೂಕ್ತ ಸಹಾಯ ನೀಡಲು ಕೇಂದ್ರ ಸರ್ಕಾರದವರೇ ಸಲಹೆ ನೀಡಿದ್ದಾರೆ. ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಈಗ ತಿಳಿಸಲು ಕಾಲಾವಕಾಶವಿಲ್ಲವಾದ್ದರಿಂದ ಡಿಮ್ಯಾಂಡುಗಳ ಬಗ್ಗೆ ಚರ್ಚೆ ನಡೆಯುವಾಗ ತಿಳಿಸುತ್ತೇನೆ.

(Sri L. B. BIRJE in Marathi)

ಅಧ್ಯಕ್ಷರು.—ಅವರು ಹೇಳಿದ್ದು ಬ್ಯಾಕ್‌ವರ್ಡ್ ಸ್ಕಾಲರ್‌ಷಿಪ್‌ನ್ನು ಈವರ್ಷ ಮಂಜೂರ್ ಮಾಡಿದ್ದರೂ ಹಣವನ್ನಿನ್ನೂ ಕೊಡದಿರಲು ಕಾರಣವೇನೆಂದು ಕೇಳುತ್ತಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ವಿಚಾರ ಗೊತ್ತಿಲ್ಲ. ವಿಚಾರ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—Centrally Sponsered Scheme ಎಂದು ಹೇಳಿ ಇಂಡಿಯಾ ಸರ್ಕಾರದವರು 14 ಲಕ್ಷದ 27 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. Central Assistance ಇದೆ ಎಂದು ಹೇಳಿ 16 ಲಕ್ಷ ಚಿಲ್ಲರೆ ನಮ್ಮ ಸರ್ಕಾರದವರು ಕೊಟ್ಟಿದ್ದಾರೆ. ಹಳೆಯ ಮೈಸೂರಿದ್ದಾಗಲೇ 19 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಈಗ Area ದ್ವಿಗುಣವಾಗಿರುವಾಗ ನ್ಯಾಯವಾಗಿ ಅಲ್ಲಿನ ಗ್ರಾಂಟ್ ಕೂಡ ದ್ವಿಗುಣವಾಗಬೇಕಾಗಿತ್ತು. ಅಂಥದರಲ್ಲಿ ಈಗ ಮನೆ ಕಟ್ಟುವುದಕ್ಕೆ 11 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ವಿದ್ಯಾಭ್ಯಾಸ ತೆಗೆದುಕೊಂಡರೆ ಹೋದಸಾರಿ ನಾಲ್ಕು ಲಕ್ಷದ 34 ಸಾವಿರ ಕೊಟ್ಟಿದ್ದಾರೆ. ಈ ಸಾರಿ ಎರಡು ಲಕ್ಷದ 50 ಸಾವಿರ ಕೊಟ್ಟಿದೆ. ಇದರಲ್ಲಿ ಒಂದು ಲಕ್ಷದ 25 ಸಾವಿರ ಕೇಂದ್ರದಿಂದ ಬಂದ ಸಹಾಯ ದ್ರವ್ಯವಾಗಿದೆ. ಹೀಗಾಗಿ ಖಾಲಿ 16 ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರದವರು ಈಗಲೂ ಕೊಡುತ್ತಿದ್ದೀರಲ್ಲಾ ಏಕೆ ? ಹರಿಜನರ ಅಭಿವೃದ್ಧಿ ಈಗಾಗಲೇ ಜಾಸ್ತಿಯಾಗಿದೆಯೆಂದು ತಿಳಿದುಕೊಳ್ಳೋಣವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಏಕೆ ಕೇಂದ್ರ ಸರ್ಕಾರ, ಪ್ರಾಂತ್ಯ ಸರ್ಕಾರ ಎಂದು ಪ್ರತ್ಯೇಕ ಮಾಡುತ್ತೀರಿ ? 22 ಲಕ್ಷ ರೂಪಾಯಿಗಳು ಸಾಲದು, ಇನ್ನೂ ಕೊಡಿ ಎಂದು ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಹೋದ ವರ್ಷ 19 ಲಕ್ಷ ರೂಪಾಯಿಗಳನ್ನು ಕೊಟ್ಟಿರುವಾಗ ಈ ವರ್ಷ 11 ಲಕ್ಷ ರೂಪಾಯಿಗಳನ್ನು ಮಾತ್ರ ತಾವು ಹರಿಜನರ ಮನೆಗಳ ಬಗ್ಗೆ ಕೊಟ್ಟಿದ್ದೀರಿ. ಹಗಲೆಲ್ಲಾ ಪದೇ ಪದೇ ಕೇಳಬೇಕೆಂದಿದ್ದೀರಾ ? ಕೇಳಿ ಕೇಳಿ ನಮಗೆ ಸಾಕಾಗಿ, ಸೋತಿದ್ದೇವೆ. ನೀವು ಪದೇಪದೇ ಇದೇ ಉತ್ತರ ಕೊಡುತ್ತಿದ್ದೀರಿ. ಕೇಂದ್ರ ಸರ್ಕಾರದವರು ಕೊಟ್ಟಿದ್ದೂ ನಮ್ಮದೇ ಎಂದು ಹೇಳುವುದು ಯಾವ ನ್ಯಾಯ ?

ಶ್ರೀ ವಿ. ವೆಂಕಟಪ್ಪ (ವಿದ್ಯಾ ಇಲಾಖೆಯ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಚರ್ಚೆ ನಡೆಯುತ್ತಿದ್ದ ಕಾಲದಲ್ಲಿ, ಬಹಳ ಜನ ಮಾತನಾಡುವಾಗ, ಈ ಸಭೆಯಲ್ಲಿರಲು ಅವಕಾಶವಿಲ್ಲದೆ ಹೋದದ್ದರಿಂದ ಬಹಳಮಟ್ಟಿಗೆ ಅವರು ಹೇಳಿರತಕ್ಕ ಎಲ್ಲ ವಿಷಯಗಳನ್ನೂ ಪೂರ್ಣವಾಗಿ ಗ್ರಹಿಸಿ ಉತ್ತರ ಹೇಳುವುದಕ್ಕೆ ಪ್ರಯತ್ನಪಡುತ್ತೇನೆಂದು ಹೇಳಲಾರೆ. ಕೆಲವು ವಿಷಯಗಳನ್ನು ಗುರುತುಹಾಕಿಕೊಂಡು ನನಗೆ ಕೊಟ್ಟಿದ್ದಾರೆ. ಅವುಗಳ ವಿಷಯದಲ್ಲಿ ಮಾತ್ರ ಉತ್ತರ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಅಲ್ಲದೆ, ಹೆಚ್ಚಿಗೆ ಹೇಳಬೇಕಾದ ಅಗತ್ಯವೂ ಇಲ್ಲವೆಂದು ನಂಬಿದ್ದೇನೆ. ಇದಕ್ಕಾಗಿ ಈ ಸಭಾ ಸದಸ್ಯರು ನನ್ನನ್ನು ಕ್ಷಮಿಸುತ್ತಾರೆಂದು ನಂಬಿದ್ದೇನೆ.

ಮೊದಲನೆಯ ದಿವಸ ಭಾಷಣಮಾಡಿದ ನನ್ನ ಮಿತ್ರರಾದ ಮಲ್ಲಾರಾಧ್ಯರು ವಿದ್ಯಾಭ್ಯಾಸದ ವಿಷಯದಲ್ಲಿ ಏನಾದರೂ ಹೇಳಿದ್ದರೆ ಅದನ್ನು ಅವರು ಯೋಚನೆ ಮಾಡಿ ಸರಿಯಾದ ರೀತಿಯಲ್ಲೇ ಹೇಳಿದ್ದಾರೆಂದು ನಾನು ಭಾವಿಸುತ್ತೇನೆ. ಅವರ ಮಾತಿನಲ್ಲಿ ನನಗೆ ಗೌರವವುಂಟು.

ಮೊದಲನೆಯದಾಗಿ ಅವರು ಹೇಳಿದ್ದಾರೆ, ಉಪಾಧ್ಯಾಯರುಗಳಿಗೆ, ಅದರಲ್ಲೂ ಖಾಸಗಿ ಸಂಸ್ಥೆಗಳ ಉಪಾಧ್ಯಾಯರುಗಳಿಗೆ ಸಂಬಳಸಾರಿಗೆಗಳನ್ನು ಹೆಚ್ಚುಮಾಡಿರತಕ್ಕ ವಿಷಯದಲ್ಲಿ ಸರ್ಕಾರದವರು ಅನುಸರಿಸಿರುವಂಥ ನೀತಿ ಸ್ವಲ್ಪವೂ ಸರಿಯಲ್ಲ, ಸರ್ಕಾರದವರು ಕಡ್ಡಾಯವಾಗಿ, ಸರ್ಕಾರದ ಅಧೀನದಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಏನು ಸಂಬಳವನ್ನು ಕೊಡುತ್ತಿದ್ದಾರೋ ಅದೇ ರೀತಿ ಇವರ ವಿಷಯದಲ್ಲೂ ಕೊಡಬೇಕೆಂದು ಒತ್ತಾಯಮಾಡಬೇಕೆಂದು ಹೇಳಿದ್ದಾರೆ. ಸರ್ಕಾರ ಈ ವಿಷಯವನ್ನು ಪರ್ಯಾಲೋಚನೆಮಾಡಿ, ಇದರಿಂದ ಏನು ಕಷ್ಟವಾಗಬಹುದೆಂದು ಮನಸ್ಸಿನಲ್ಲಿಟ್ಟುಕೊಂಡು, ಶ್ರೀ ಮಲ್ಲಾರಾಧ್ಯರು ಏನು ಅನುಮಾನಪಟ್ಟುಕೊಂಡಿದ್ದಾರೋ ಆ ಅನುಮಾನಕ್ಕೆ ಅವಕಾಶವಿಲ್ಲದಂತೆ ಮಾಡಿದೆಯೆಂದು ಹೇಳಬಯಸುತ್ತೇನೆ. 68 ಮುನಿಸಿಪಲ್ ಹೈಸ್ಕೂಲುಗಳ ಪೈಕಿ 65 ಮುನಿಸಿಪಲ್ ಹೈಸ್ಕೂಲುಗಳವರು ಸರ್ಕಾರದವರು ನಿಯಾಮಕಮಾಡಿರುವ ರೀತಿಯನ್ನೇ ಅನುಸರಿಸಿ ಸಂಬಳಸಾರಿಗೆಗಳನ್ನು ಕೊಡುವುದಕ್ಕೆ ಏರ್ಪಾಡುಮಾಡಿದ್ದಾರೆ. 77 ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳ ಪೈಕಿ 76 ಹೈಸ್ಕೂಲುಗಳವರು ಇದನ್ನು ಒಪ್ಪಿ, ಅದೇ ಪ್ರಕಾರ ಆಚರಣೆಗೆ ಈಗಾಗಲೇ ತಂದಿದ್ದಾರೆ. 146 ಖಾಸಗೀ ಸಂಸ್ಥೆಗಳಲ್ಲಿ 140 ಖಾಸಗಿ ಸಂಸ್ಥೆಗಳವರು ಇದನ್ನು ಒಪ್ಪಿಕೊಂಡು, ಅದರಂತೆ ಜಾರಿಗೆ ತಂದು, ಅದರಂತೆ ಹಣವನ್ನೂ ಕೂಡ ತೆಗೆದುಕೊಂಡಿದ್ದಾರೆ. ಆದ್ದರಿಂದ ಸ್ವಲ್ಪ ಹೆಚ್ಚು

ಕಡಮೆ ಎಲ್ಲವೂ ಆಗಿ ಕೆಲವು ಮಾತ್ರ ಉಳಿದಿದೆ. ಅವರು ಕೂಡ ಈ ನಿಯಮಕ್ಕೆ ಒಪ್ಪುತ್ತಾರೆ. ಆದ್ದರಿಂದ ಕಡ್ಡಾಯಮಾಡಬೇಕಾದ ಅವಶ್ಯಕತೆ ಬರುವುದಿಲ್ಲವೆಂದು ನಾನು ವಿಜ್ಞಾಪನೆ ಮಾಡಿಕೊಳ್ಳಬಯಸುತ್ತೇನೆ.

ಆಟಪಾಟಗಳಿಗೆ ಹಣವನ್ನು ಒದಗಿಸುತ್ತಿಲ್ಲವೆಂದು ಒಂದು ಮಾತು ಹೇಳಿದರು. ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಅವರ ಗಮನಕ್ಕೆ ತರಬಯಸುತ್ತೇನೆ. ಅವಶ್ಯಕತೆಯಿದ್ದರೆ ಬಡ್ಜೆಟ್ಟಿನ 429ನೆಯ ಪುಟವನ್ನು ನೋಡಬಹುದು.

ಮತ್ತೊಂದು ಸಲಹೆಯನ್ನು ಅವರು ಮಾಡಿದ್ದಾರೆ. ಎಲ್ಲಾ ಸ್ಕೂಲುಗಳಲ್ಲೂ sports fund ಖರ್ಚಾಗದೆ accumulate ಆಗಿದೆ, ಅದನ್ನು sportsಗೆ ವಿನಿಯೋಗ ಮಾಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಶ್ರೀ ಮಲ್ಲಾರಾಧ್ಯರು ಸೂಚನೆ ಕೊಡುವುದಕ್ಕೆ ಮುಂಚೆಯೇ ನಾನು ನವೆಂಬರ್ ತಿಂಗಳಿನಲ್ಲಿ ಕೆಲವು ಸ್ಕೂಲುಗಳನ್ನು ನೋಡಿದಾಗ, ಹೆಚ್ಚು ಹಣ ಈ ಬಾಬಿನಲ್ಲಿ ಉಳಿದಿದ್ದನ್ನು ನೋಡಿ ಅದನ್ನು ಕೊಡುವುದಕ್ಕೆ ಏನು ಏರ್ಪಾಡುಮಾಡಬೇಕೋ ಅದನ್ನು ಮಾಡಿದ್ದಲ್ಲದೆ, ಒಂದು ಸಾವಿರ ರೂಪಾಯಿಗಿಂತ ಹೆಚ್ಚಿಗೆ ಇದ್ದಂಥ ಸ್ಕೂಲುಗಳ ಪಟ್ಟಿಯನ್ನು ತರಿಸಿಕೊಂಡು ಅದನ್ನು ವಿದ್ಯಾರ್ಥಿಗಳಿಗೆ ವಿನಿಯೋಗಮಾಡಬೇಕೆಂದು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಆದ್ದರಿಂದ ಶ್ರೀ ಮಲ್ಲಾರಾಧ್ಯರ ಸೂಚನೆಯನ್ನು ಅಂಗೀಕರಿಸಿದ್ದೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಆಮೇಲೆ ಉಪಾಧ್ಯಾಯರುಗಳಿಗೆ 1958ನೆಯ ವರ್ಷದವರೆಗೂ ಕೆಲಸದಲ್ಲಿರುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಹಿಂದೆ ಆರ್ಡರ್‌ಮಾಡಿದ್ದರೂ ಈಗ 55 ವರ್ಷಕ್ಕೆ ರಿಟೈರ್ ಆಗುವಹಾಗೆ ಮಾಡಿರುವುದು ಸರಿಯಲ್ಲವೆಂದು ಹೇಳಿದ್ದಾರೆ, ಹಿಂದೆ ಯಾವ ಪರಿಸ್ಥಿತಿಯಿತ್ತೋ ಆ ಪರಿಸ್ಥಿತಿ ಈಗ ಬದಲಾವಣೆಯಾಗಿದೆ. ಆಗ ಸಾಕಷ್ಟು ತರಪೇತಾದ ಉಪಾಧ್ಯಾಯರುಗಳು ಸಿಕ್ಕುವುದಿಲ್ಲವೆಂದು ಹೇಳಿ, ತರಪೇತಾಗಿರುವ ಹಾಗೂ ಶಕ್ತಿ ಮತ್ತು ಪಾಠ ಹೇಳಿಕೊಡುವ ಯೋಗ್ಯತೆಯನ್ನು ಹೊಂದಿರುವ ಉಪಾಧ್ಯಾಯರುಗಳಿಗೆ ಮೂರು ವರ್ಷಗಳ extension ಕೊಡಬಹುದೆಂದು ಆಗ ಮಾಡಿತ್ತು. ಇದಾದಮೇಲೆ ಈಚೆಗೆ ಎರಡು ಕಷ್ಟ ಬಂದಿವೆ. ಈಗ ತರಪೇತಾದ ಜನ ಹೆಚ್ಚು ಮಂದಿ ಸಿಕ್ಕುತ್ತಿದ್ದಾರೆ. ಅದರಲ್ಲೂ ಹೊಸ ಮೈಸೂರಾದ ಮೇಲೆ ಅನೇಕರು ತರಪೇತಾಗಿ ನೇಮಕವಾಗದಿರುವವರು, ಅದರಲ್ಲೂ ಮಂಗಳೂರು ಒಂದರಲ್ಲೇ 1,200 ಜನ ಸಿಕ್ಕುತ್ತಿದ್ದಾರೆ. ಅವರುಗಳನ್ನು ಇನ್ನೂ ನೇಮಕಮಾಡುವುದಕ್ಕಾಗಿಲ್ಲ. ಉಪಾಧ್ಯಾಯರುಗಳಿಗೆ ತರಪೇತು ಮಾಡುವುದಕ್ಕೆ ಹೆಚ್ಚಿನ ಅವಕಾಶವನ್ನು ಕಲ್ಪನೆಮಾಡಿಕೊಳ್ಳಬೇಕೆಂದು ಹೇಳಿ 54 ಟ್ರೈನಿಂಗ್ ಸಂಸ್ಥೆಗಳನ್ನು ಬೇರೆ ಏರ್ಪಾಡುಮಾಡಿದ್ದೇವೆ. ಈ ವರ್ಷ ಇನ್ನೂ ಎರಡು ಸಂಸ್ಥೆಗಳನ್ನು ಏರ್ಪಾಡುಮಾಡಬೇಕೆಂದು ಮಾಡಿದ್ದೇವೆ. ಆದ್ದರಿಂದ ಈಗ ಸಾಕಷ್ಟು ಜನರನ್ನು ತರಪೇತುಮಾಡುವುದಕ್ಕೆ ಅವಕಾಶವಿರುವುದರಿಂದ, ಮತ್ತು ವಿದ್ಯಾವಂತರಾದ ಯುವಕರು ತಮಗೇನು ಅವಕಾಶಮಾಡಿದ್ದೀರಿ ಎಂದು ಕೇಳುವ ಪರಿಸ್ಥಿತಿಯಿರುವುದರಿಂದ ಮೊದಲು ಸಾದರಾದ ಆರ್ಡರನ್ನು ಸ್ವಲ್ಪ ಬದಲಾವಣೆಮಾಡಿದೆಯೆಂದು ವಿಜ್ಞಾಪನೆಮಾಡಿಕೊಳ್ಳುತ್ತೇನೆ.

1957ನೆಯ ಇಸವಿಯಲ್ಲಿ ಎಕ್ಸ್‌ಟೆನ್‌ಷನ್ನು ಕೊಟ್ಟಿರುವ ವರಿಗೆ ನಡೆಯುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟಿನ ಪ್ರಕಾರ ತಮಗೆ ಆ ರೀತಿ ಹುಕುಂ ಮಾಡುವುದಕ್ಕೆ ಅಧಿಕಾರವಿಲ್ಲ ಎನ್ನುವ ವಾದವನ್ನು ಹೇಳಿದ್ದೆ. ಅದನ್ನು ರಾಜ್ಯಾಂಗದ ದೃಷ್ಟಿಯಿಂದ ಪರಿಶೀಲಿಸಬೇಕು ಎಂದು ಹೇಳಿದ್ದೆ.

ಶ್ರೀ ಎ. ವೆಂಕಟಪ್ಪ.—ಪರಿಶೀಲಿಸಿದೆ. ಮೂರು ವರ್ಷದೊಳಗೇ ರಿಟೈರು ಮಾಡಬೇಕೆಂಬ ಆರ್ಡರನ್ನು ಜಾರಿಮಾಡಿದೆ. ಮತ್ತು ಆ ರೀತಿ ಏರ್ಪಾಡುಮಾಡಿದೆ.

ಇನ್ನು ಕಂಪಲ್ಸರಿ ಎಜುಕೇಷನ್ನಿನ ವಿಚಾರ. ಇದನ್ನು ಎಲ್ಲ ಕಡೆಗಳಲ್ಲಿಯೂ ಜಾರಿಗೆ ತರುವಂತೆ ಸೂಚನೆ ಕೊಟ್ಟಿದ್ದಾರೆ. ಇದರಲ್ಲಿರತಕ್ಕ ಕಷ್ಟ ಏನು ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದೆ, ಒಂದೇ ಸಲ "Free and compulsory Education" ಪ್ರೈಮರಿ ಶಾಲೆಗಳಲ್ಲಿ ಎಲ್ಲ ಕಡೆಗಳಲ್ಲೂ ಜಾರಿಗೆ ಬರುವಂತೆ ಮಾಡುವಂತಹುದು ಬಹಳ ಕಷ್ಟದ ಕೆಲಸ. ಸಾಕಷ್ಟು ತರಬಿಯತ್ತಾದ ಉಪಾಧ್ಯಾಯರುಗಳು ಸಿಗುವುದು ಕಷ್ಟವಾಗಿದೆ. ಇದರ ಜೊತೆಗೆ ಹಣ ಬೇಕಾಗಿರುವುದರಿಂದ ಇದನ್ನು ಏರ್ಪಾಡುಮಾಡುವುದಕ್ಕೆ ಕಷ್ಟವಾಗಿದೆ. ಆದರೆ ನಾವು 1961ರಿಂದ 1963ರ ಒಳಗಾಗಿ ಆರು ವರ್ಷದಿಂದ ಹನ್ನೊಂದು ವರ್ಷ ವಯಸ್ಸಾಗಿರತಕ್ಕ ಎಲ್ಲ ಬಾಲಕಬಾಲಕಿಯರಿಗೆ ವಿದ್ಯಾಭ್ಯಾಸವು ಕಡ್ಡಾಯವಾಗಿ ದೊರೆಯುವಂತೆ ಮಾಡಬೇಕೆಂದು ಹೇಳಿ ಇಂಡಿಯಾ ಸರಕಾರದವರು ಒಂದು ನಿಯಮವನ್ನು ಮಾಡಿದ್ದಾರೆ. ಅದರಂತೆ ನಾವೂ ಕೂಡ ಈ ರೀತಿಯಾಗಿ ಕಡ್ಡಾಯವಾಗಿ ಮಾಡಬೇಕೆಂದು ಇಲ್ಲಿ ಏರ್ಪಾಡುಗಳನ್ನು ಮಾಡಿಕೊಂಡಿದ್ದೇವೆ. ಈಗಾಗಲೇ ನಮ್ಮಲ್ಲಿ ಅನೇಕ ಕಡೆಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸ ಜಾರಿಯಲ್ಲಿದೆ. ಬೊಂಬಾಯಿಯ ಭಾಗಗಳಲ್ಲಿ ಸ್ವಲ್ಪ ಹೆಚ್ಚುಕಡಮೆ ಅನೇಕ ಶಾಲೆಗಳಲ್ಲಿ 500 ಜನಸಂಖ್ಯೆಗೆ ಮೇಲ್ಪಟ್ಟು ಹಳ್ಳಿಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸ ಜಾರಿಯಲ್ಲಿದೆ.

ಮೈಸೂರಿನಲ್ಲಿ ಒಂದೊಂದು ಜಿಲ್ಲೆಯಲ್ಲಿ, ಒಂದೊಂದು ತಾಲ್ಲೂಕಿನಲ್ಲಿ ಕಡ್ಡಾಯ ವಿದ್ಯಾಭ್ಯಾಸ ಜಾರಿಯಲ್ಲಿದೆ. ಇನ್ನು ಎಲ್ಲೆಲ್ಲಿ N.E.S. ಬ್ಲಾಕುಗಳನ್ನು C.D. ಬ್ಲಾಕುಗಳನ್ನು ಕೊಡಲಾಗಿದೆಯೋ ಅಂಥ ಕಡೆಗಳಲ್ಲೆಲ್ಲ ಈ ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆಕೊಡಬೇಕು ಎಂದು ನಿರ್ಧಾರಮಾಡಿದ್ದೇವೆ. ಈಗ ದೇಶದಲ್ಲಿ ಸುಮಾರು 262 ಬ್ಲಾಕುಗಳು ಬೇಕಾಗಿವೆ. ಇದರಲ್ಲಿ 129 ಬ್ಲಾಕುಗಳನ್ನು ಕೊಡಲಾಗಿದೆ. ಈ ವರ್ಷ ಹತ್ತು ಬ್ಲಾಕುಗಳನ್ನು ಕೊಡಲಾಗಿದೆ. 129 ಬ್ಲಾಕುಗಳು ಪೂರ್ತಿಯಾಗಿವೆ. ಇನ್ನು 133 ಬ್ಲಾಕುಗಳನ್ನು 1961ನೆಯ ಇಸವಿ ಪೂರ್ತಿಯಾಗುವುದರೊಳಗೆ ಕೊಡಬೇಕೆಂದು ಹೇಳಿರುವುದರಿಂದ ಸಾಧ್ಯವಾದಮಟ್ಟಿಗೂ 1961ನೆಯ ಇಸವಿಯ ಹೊತ್ತಿಗೆ ಈ ಕಂಪಲ್ಸರಿ ಎಜುಕೇಷನ್ನನ್ನು ಕೂಡ ಪೂರ್ಣವಾಗಿ ಜಾರಿಗೆ ತರುವುದಕ್ಕೆ ಸರ್ವ ಪ್ರಯತ್ನವನ್ನು ಮಾಡಿಕೊಂಡು ಹೋಗುತ್ತಿದ್ದೇವೆ ಎಂದು ಇಲ್ಲಿ ನಾನು ತಿಳಿಸಲು ಇಷ್ಟಪಡುತ್ತೇನೆ. ಇನ್ನೂ ಪ್ರಯತ್ನ ನಡೆಯುತ್ತಿದೆ.

ಎಲ್ಲಿ ಕಡ್ಡಾಯವಾದ ವಿದ್ಯಾಭ್ಯಾಸ ಜಾರಿಯಲ್ಲಿದೆಯೋ ಅಲ್ಲಿ ಸರಿಯಾಗಿ ನಡೆಯುವುದಿಲ್ಲ. ಸರಿಯಾಗಿ ಜಾರಿಗೆ ತರುವುದು ಬಹಳ ಕಷ್ಟದ ಕೆಲಸ ಆದುದರಿಂದ

(ಶ್ರೀ ವಿ. ವೆಂಕಟಪ್ಪ)

ಮೈಸೂರಿನಲ್ಲಿ ಈಗಿರತಕ್ಕ ಹಾಗೆ ಸಾಕಷ್ಟು ಒತ್ತಾಯದ ಕೆಲಸ ನಡೆಯುತ್ತಿಲ್ಲ ಎಂದು ಇಲ್ಲಿ ತಿಳಿಸಬೇಕಾಗಿದೆ. ಆದುದರಿಂದ ಇದನ್ನು ಪರಿಶೀಲನೆಮಾಡಿ ಸರಿಯಾದ ರೀತಿಯಲ್ಲಿ ನಡೆಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ವಿಚಾರಮಾಡಿ ಎಲ್ಲೆಲ್ಲಿ ಈ ಕಡ್ಡಾಯ ವಿದ್ಯಾಭ್ಯಾಸವನ್ನು ಅನ್ವಯಿಸಿ ಜಾರಿಗೆ ತರುವುದಕ್ಕೆ ಏನು ಏರ್ಪಾಡು ಮಾಡಬೇಕೋ ಅವನ್ನೆಲ್ಲ ಮಾಡಲು ಪ್ರಯತ್ನಪಡುತ್ತಿದ್ದೇವೆ.

ಈ ವರ್ಷ ಹೈದರಾಬಾದು ಕರ್ಣಾಟಕದಲ್ಲಿ ವಿದ್ಯಾಭ್ಯಾಸ ಸ್ವಲ್ಪ ಹಿಂದುಳಿದಿದೆ ಎಂದು ಶ್ರೀಮತಿ ಬಸವರಾಜೇಶ್ವರಿಯವರು ಮತ್ತು ಶ್ರೀ ಅಣ್ಣಾರಾಯರೂ ತಿಳಿಸಿದ್ದಾರೆ; ಮತ್ತು ಈ ಭಾಗಕ್ಕೆ ಸಾಕಷ್ಟು ಉತ್ತೇಜನ ಕೊಟ್ಟಿಲ್ಲ ಎಂದು ಹೇಳಿದರು. ಇದರಲ್ಲಿ ಶ್ರೀ ಅಣ್ಣಾರಾಯರು ಸ್ವಲ್ಪ ಉತ್ಪ್ರೇಕ್ಷೆಯಿಂದಲೂ ಹೇಳಿದರು. ಸ್ಕೂಲನ್ನು ಕೊಟ್ಟರೇನೋ ಕೊಟ್ಟರು, ಆದರೆ ಸ್ಕೂಲು ಕೊಟ್ಟಿರುವ ಕಡೆ ಉಪ್ಯಾಧಾಯರೇ ಇಲ್ಲ ಎಂದು ಹೇಳಿದರು. ಇದು ಸರಿ ಎಂದು ಇಲ್ಲಿ ನಾನು ಒಪ್ಪಲಾರೆ. ಯಾವಾಗಲೂ ಹೊಸದಾಗಿ ಸ್ಕೂಲನ್ನು ಸ್ಥಾಪನೆ ಮಾಡಿದರೆ ಆಗ ಉಪಾಧ್ಯಾಯರನ್ನೂ ಮತ್ತು ಅಲ್ಲಿಗೆ ಬೇಕಾದ ಏರ್ಪಾಡನ್ನೂ ಮಾಡಬೇಕಾದುದು ಅಗತ್ಯ. ಹಾಗೆ ಮಾಡಿಯೇ ಮಾಡುತ್ತೇವೆ. ಹಾಗೆ ಮಾಡದಿದ್ದರೆ ಅದು ಸರಿಯಲ್ಲ ಮತ್ತು ಬುದ್ಧಿ ಇರುವವರಾರೂ ಆ ರೀತಿ ಮಾಡಲಾರರು. ಆ ರೀತಿ ಆಗಿರಲಾರದು ಎಂದು ತಿಳಿದುಕೊಂಡಿದ್ದೇನೆ. ಇಲಾಖೆಯವರಿಗೂ ಇಂತಹ ಕಡೆಗಳಿಗೆ ಹೆಚ್ಚಿನ ಅವಕಾಶ ಕೊಡಬೇಕು ಎನ್ನುವುದೂ ಪೂರ್ಣವಾಗಿ ಗೊತ್ತಿದೆ.

ಈ ವರ್ಷ 365 ಸ್ಕೂಲುಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 161 ಸ್ಕೂಲುಗಳನ್ನು ಹೈದರಾಬಾದು ಕರ್ನಾಟಕದ ಭಾಗಗಳಿಗೇ ಕೊಟ್ಟಿದ್ದೇವೆ. ಇದನ್ನು ಕಡೆಗಣ್ಣಿನಿಂದ ನೋಡುತ್ತಿದ್ದೇವೆ ಅಥವಾ ಸಾಕಷ್ಟು ಗಮನವನ್ನು ಕೊಟ್ಟಿದ್ದರೂ ಇಲ್ಲವೆಂದು ಹೇಳತಕ್ಕ ವಾದ ಸರಿಯಲ್ಲ ಎಂದು ನಾನು ಅವರಲ್ಲಿ ವಿಜ್ಞಾಪನೆ ಮಾಡಿ ಕೊಳ್ಳುತ್ತೇನೆ.

ನಮ್ಮ ಮಿತ್ರರಾದ ಶ್ರೀ ರೇವಣಸಿದ್ದಪ್ಪನವರು ಒಂದು ವಿಷಯವನ್ನು ಸಭೆಯ ಗಮನಕ್ಕೆ ತಂದರು. ಶಾಲೆಗಳಲ್ಲಿ ಕೆಲವು ಸಾಮಗ್ರಿಗಳನ್ನು ಕೊಳ್ಳುವುದರಲ್ಲಿ ಅದರಲ್ಲೂ ಹೋಮ್‌ಸೈನ್ಸಿಗೆ ಬೇಕಾದ ಸಾಮಗ್ರಿಗಳನ್ನು ಕೊಂಡುಕೊಳ್ಳತಕ್ಕ ವಿಚಾರದಲ್ಲಿ ಬಹುಮಟ್ಟಿಗೆ ಅನ್ಯಾಯ ನಡೆದಿದೆ ಮತ್ತು ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಇದು ಅವರಿಗೂ ಗೊತ್ತಿರತಕ್ಕ ವಿಷಯ ; ಹೀಗೇಕೆ ಹೇಳಿದರೋ ಕಾರಣ ತಿಳಿಯಲಿಲ್ಲ ನಾನು ತಿಪಟೂರಿಗೆ ಹೋಗಿದ್ದಾಗ ಅವರೂ ಸಹ ನನ್ನ ಜೊತೆಯಲ್ಲೇ ಇದ್ದರು. ಈ ವಿಷಯವು ನನ್ನ ಗಮನಕ್ಕೆ ಬಂದ ಕೂಡಲೇ ಅಲ್ಲೇ ಆಂಟೀಕರಪ್‌ಷನ್ನಿನ ಅಧಿಕಾರಿಗಳನ್ನು ಕರೆದು ಅವರು ಇದನ್ನು ಪರಿಶೀಲನೆಮಾಡಿ ಅವರ ಅಭಿಪ್ರಾಯಗಳನ್ನು ಕೊಡಬೇಕೆಂದು ಹೇಳಿದೆ. ಈ ಸ್ಕೂಲು ಮತ್ತು ಕಾಲೇಜುಗಳಿಗೆ ಪದಾರ್ಥಗಳನ್ನು ಸರಿಯಾಗಿ ತರಿಸಲಾಗುತ್ತಿದೆಯೋ ಇಲ್ಲವೇ ಎಂದು ಇದನ್ನೆಲ್ಲ ವಿಚಾರಮಾಡಿ ಮತ್ತು ಪರಿಶೀಲನೆಮಾಡಿ ಈಗ ಒಂದು ರಿಪೋರ್ಟನ್ನು ಸರಕಾರದ ಗಮನಕ್ಕೆ ಕಮಿಷನ್ನಿನವರು ಕಳುಹಿಸಿಕೊಟ್ಟಿದ್ದಾರೆ. ಇದನ್ನು ವಿಚಾರ ಮಾಡುತ್ತಿದ್ದೇವೆ. ಇದರಲ್ಲಿ ಯಾರೇ ತಪ್ಪು ಮಾಡಿರಲಿ ಅಂತಹವರ ಮೇಲೆ ಸರಿಯಾದ ಕ್ರಮವನ್ನು ಕೈಗೊಳ್ಳದೆ ಸರಕಾರದವರು ಬಿಡುವುದಿಲ್ಲ ಎಂದು ನಾನು ಶ್ರೀ ರೇವಣಸಿದ್ದಪ್ಪನವರಿಗೆ ತಿಳಿಸಲಿಚ್ಛಿಸುತ್ತೇನೆ.

ಇನ್ನು ಶ್ರೀ ಡಿ. ಹೆಚ್. ರುದ್ರಪ್ಪನವರು ಮಲ್ಟಿಪರ್‌ಪಸ್ ಹೈಸ್ಕೂಲುಗಳಲ್ಲಿ ತಾಂತ್ರಿಕ ವಿದ್ಯಾಭ್ಯಾಸವನ್ನು ಹೆಚ್ಚಾಗಿ ಕೊಡತಕ್ಕ ಸೌಕರ್ಯಗಳಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿದ್ದಾರೆ. ಇದು ಸರಕಾರದ ಉದ್ದೇಶವೂ ಆಗಿದೆ. ಈ ವರ್ಷ ಬಹುಮಟ್ಟಿಗೆ ತಾಂತ್ರಿಕ ವಿದ್ಯಾಭ್ಯಾಸವನ್ನು ಹೆಚ್ಚು ಮಾಡುವುದಕ್ಕೋಸ್ಕರ ವಿಧ್ಯಾರ್ಥಿಗಳಿಗೆ ಹೆಚ್ಚು ಅವಕಾಶಗಳನ್ನು ಕೊಡುವುದಕ್ಕೆ ಎಂದು ಈ ವರ್ಷದಲ್ಲೇ ಇದಕ್ಕೆ ಸಂಬಂಧಪಟ್ಟ ರೀಜನಲ್ ಕಮಿಟಿಯವರು, ವಿಜ್ಞಾಪನೆ ಮಾಡಿಕೊಂಡಂತೆ, ಈ ಸಂಖ್ಯೆಯನ್ನು ಹೆಚ್ಚು ಮಾಡಿದೆ. ಈ ವರುಷವೇ ಸುಮಾರು 900 ಜನ ವಿದ್ಯಾರ್ಥಿಗಳಿಗೆ ಅನುಕೂಲ ದೊರೆಯುವಂತೆ ಏರ್ಪಾಡು ಮಾಡಲಾಗಿದೆ. ಮುಂದಿನ ವರ್ಷದಿಂದ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಐದು ಪಾಲಿಟೆಕ್ನಿಕ್ ಶಾಲೆಗಳು ಸ್ಥಾಪನೆಯಾಗಬೇಕು ಎಂದು ಏರ್ಪಾಡು ಮಾಡಿದೆ. ಇದರಲ್ಲಿ ಒಂದು ಕಾಲೇಜನ್ನು ಇಂಡಿಯಾ ಸರಕಾರದವರು ತೆರೆಯತಕ್ಕದ್ದು ಮತ್ತು ನಾವು ಒಂದು ಪಾಲಿಟೆಕ್ನಿಕ್ ಕಾಲೇಜನ್ನು ಕೇಂದ್ರ ಸರಕಾರದ ನೆರವಿನಿಂದ ಸ್ಥಾಪನೆ ಮಾಡಬೇಕೆಂದು ಯೋಚನೆಇಟ್ಟುಕೊಂಡಿದ್ದೇವೆ ಆದುದರಿಂದ ಈ ವಿಷಯದಲ್ಲಿ ಸಾಕಷ್ಟು ಕೆಲಸ ನಡೆದಿದೆ. ಯಾವ ವಿಧದಲ್ಲಿಯೂ ಸ್ವಲ್ಪವೂ ಮನಸ್ಸಿಗೆ ತೆಗೆದುಕೊಳ್ಳದೆ ಉದಾಸೀನಮಾಡುತ್ತಾರೆ ಎನ್ನುವ ಭಾವನೆ ಸರಿಯಾದುದಲ್ಲ. ಹೀಗೆ ಒಂದು ವರ್ಷದಲ್ಲೇ ಮೈಸೂರಿನಲ್ಲಿ ಎಷ್ಟೋ ವರ್ಷಗಳಿಂದ ಇಂತಹ ಕೆಲಸವಾಗಿಲ್ಲ ಎಂದು ಹೇಳಿದರೆ ಅದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿದ್ದೇನೆಂದು ತಿಳಿದುಕೊಳ್ಳಬಾರದು. ಆದಷ್ಟು ಮಟ್ಟಿಗೆ ಪ್ರಯತ್ನಪಡುತ್ತಿದ್ದೇವೆ.

ಇನ್ನು ಕಟ್ಟಡಗಳ ವಿಷಯದಲ್ಲಿ ಅನೇಕರು ಹೇಳಿದ್ದಾರೆ. ಸ್ಕಾಲರ್‌ಷಿಪ್ ವಿಷಯದಲ್ಲಿ ಸಹ ಹೇಳಿದ್ದಾರೆ. ಇದಕ್ಕೆ ಈಗಾಗಲೇ ಪ್ರಶ್ನೆಗಳ ಸಮಯದಲ್ಲಿ ಉತ್ತರ ಕೊಟ್ಟಿದ್ದೇನೆ. ಎಲ್ಲ ಕೋಮಿನವರಿಗೂ, ಯಾರು ಯಾರಿಗೆ ಸ್ಕಾಲರ್‌ಷಿಪ್ ಸಂದಾಯವಾಗುತ್ತಿತ್ತೋ ಅವರೆಲ್ಲರಿಗೂ ಇನ್ನೂ ಕೊಡುತ್ತಿದ್ದೇವೆ. ಸ್ಕಾಲರ್‌ಷಿಪ್‌ಗಳನ್ನು ಶೇಕಡ 68ರಷ್ಟು ಹೆಚ್ಚು ಮಾಡಿದ್ದೇವೆ. ಅದು ಬಹುಮಟ್ಟಿಗೆ ಸಮರ್ಪಕವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಕಟ್ಟಡಗಳನ್ನು ಕಟ್ಟತಕ್ಕ ವಿಷಯದಲ್ಲಿ ಮೂರು ವರ್ಷಗಳ ಕೆಳಗೆ ಒಂದು ಯೋಜನೆಯನ್ನು ಹಾಕಲಾಗಿತ್ತು. Cheap design Scheme ಎಂದು 750 ರೂಪಾಯಿಗಳನ್ನು ಸರ್ಕಾರದವರು ಕೊಡುವುದು ಉಳಿದುದನ್ನು ಹಳ್ಳಿಯವರು ಹಾಕಿಕೊಂಡು ಕಟ್ಟಡವನ್ನು ಕಟ್ಟತಕ್ಕದ್ದು ಎಂದು ಯೋಜನೆಯನ್ನು ಮಾಡಿದರು. ಅದರ ಪ್ರಕಾರ ಮೊದಲನೆಯ ವರ್ಷ ಏಳೂವರೆ ಸಾವಿರ ರೂಪಾಯಿ ಮಾತ್ರ ಖರ್ಚಾಯಿತು. ಎರಡನೆಯ ವರ್ಷ ಹತ್ತು ಸಾವಿರ ರೂಪಾಯಿ ಮಾತ್ರ ಖರ್ಚಾಯಿತು. ಏಕೆ ಹೀಗಾಯಿತು ಯೋಚನೆ ಮಾಡುವುದರಲ್ಲಿ ಅದರಲ್ಲಿ ಅನೇಕ ತೊಡಕುಗಳಿದ್ದುದು ಕಂಡುಬಂತು. ಮೊದಲು ಮಂಜೂರಾಗಬೇಕು. ಮಂಜೂರಾದ ಮೇಲೆ ಬಿಲ್ಲಿನ ಹಣವನ್ನು ತೆಗೆದುಕೊಳ್ಳಲು ವರ್ಷಗಟ್ಟಲೆ ಆಗುತ್ತಿತ್ತು. ಹಣ ಪಡೆಯಲು ಬಿಲ್ ಪ್ರಿ-ಆಡಿಟ್ ಆಗುವ ಪದ್ಧತಿ ಇತ್ತು. ಅಕೌಂಟೆಂಟ್

ಜನರಲ್ ಹತ್ತಿರ ಹೋದಹೊರತು ಬಿಲ್ ಪಾಸ್ ಆಗುವ ಹಾಗೆಯೇ ಇರಲಿಲ್ಲ. ಅದಕ್ಕಾಗಿ ಅನೇಕರು ಬೇಜಾರು ಪಟ್ಟುಕೊಂಡು ತಾವು ಹಣವನ್ನು ಮೊದಲು ಖರ್ಚು ಮಾಡಿ ನಂತರ ಹಣವನ್ನು ವಾಪಸು ಪಡೆಯಲು ಅಲೆಯುವುದಕ್ಕೆ ಇಷ್ಟಪಡದೆ ಇದ್ದರು. ಅದರಿಂದ ಜನರು ಮುಂದೆ ಬರುತ್ತಿರಲಿಲ್ಲ. ನಾನು ಮಂತ್ರಿಯಾಗಿ ಬಂದ ಕೂಡಲೇ ಮೈಸೂರು ದೇಶದ ಎಲ್ಲ ಜಿಲ್ಲೆಗಳಲ್ಲಿಯೂ, ಕಾರವಾರ ಜಿಲ್ಲೆಯನ್ನು ಬಿಟ್ಟು, ಪ್ರವಾಸ ಮಾಡಿದ್ದೇನೆ. ನನ್ನ ಪ್ರವಾಸ ಕಾಲದಲ್ಲಿ ಎಲ್ಲ ಅಧಿಕಾರಿಗಳನ್ನೂ, ವಿದ್ಯಾ ಇಲಾಖೆಯ ಅಧಿಕಾರಿಗಳು ಮಾತ್ರವಲ್ಲ, P.W.D. ಅಧಿಕಾರಿಗಳು, ರೆವಿನ್ಯೂಅಧಿಕಾರಿಗಳು ಮತ್ತು ಡಿಸ್ಟ್ರಿಕ್ಟ್‌ಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ಬರಮಾಡಿಕೊಂಡು ಸ್ಕೂಲು ಕಟ್ಟಡವನ್ನು ಕಟ್ಟುವುದರಲ್ಲಿರತಕ್ಕ ತೊಂದರೆಗಳೇನು ಎಂದು ಅವರೊಡನೆ ಚರ್ಚಿಸಿ, ನಾನೂ ಪರಿಶೀಲನೆಮಾಡಿ ತೊಂದರೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಪಟ್ಟೆ. ಆ ಪ್ರಯತ್ನ ಫಲಕಾರಿಯಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಈಗ, ಒಂದು ರೂಮಿಗೆ 1,500 ರೂಪಾಯಿಗಳವರೆಗೂ ಸರ್ಕಾರದವರು ಕೊಡತಕ್ಕದ್ದು ಮತ್ತು ಹಳ್ಳಿಯವರು ಇದರ ಮೇಲ್ಪಟ್ಟು ಏನು ಬೀಳುತ್ತದೆಯೋ ಅದನ್ನು ಹಾಕಿಕೊಂಡು ಕೆಲಸಮಾಡತಕ್ಕದ್ದು ಎಂದು ವಿಧಾಯಕ ಮಾಡಿದ್ದೇವೆ. ಶ್ರೀ ಪುಟ್ಟಸ್ವಾಮಿಯವರು, 750 ರೂಪಾಯಿಗಳನ್ನು ಕೊಡುವುದಕ್ಕೇ ಜನ ಹಿಂಜರಿಯುವಾಗ 1,500 ರೂಪಾಯಿ ಒಂದು ರೂಮಿಗೆ ಮಾಡಿಬಿಟ್ಟರೆ ಬಹಳ ಕಷ್ಟವಾಗುತ್ತದೆಯಲ್ಲವೇ ಎಂದು ಪ್ರಶ್ನೆ ಮಾಡಿದರು. ನಾನು ಇದನ್ನೆಲ್ಲ ಯೋಚನೆ ಮಾಡಿ, ಹಳ್ಳಿಯವರಿಗೆ ಅದರಿಂದ ತೊಂದರೆ ಯಾಗಬಾರದು ಎನ್ನುವ ಉದ್ದೇಶದಿಂದ ಮಾಡಿದ್ದೇನೆ. ಎಲ್ಲರೂ ಇದಕ್ಕೆ ಒಪ್ಪಿಕೊಂಡಿದ್ದಾರೆ,

ಶ್ರೀ ಡಿ. ಮೂಕಪ್ಪ.—ಈ ರೀತಿ 750 ರೂಪಾಯಿಗಳನ್ನು ಸರ್ಕಾರದಿಂದ ಕೊಡುವುದಕ್ಕೆ ಮುಂಚೆ ಗ್ರಾಮಸ್ಥರು 750 ರೂಪಾಯಿ ಡಿಪಾಜಿಟ್ ಕಟ್ಟಬೇಕು ಎಂದು ಒಂದು ಯೋಜನೆಯನ್ನು ಮಾಡಿತ್ತು. ಡಿಪಾಜಿಟ್ ಕಟ್ಟಿದ ಹಣ ಕಂಟ್ರಾಕ್ಟ್‌ದಾರರಿಗೆ ಪಾವತಿಯಾಗಿಲ್ಲವೆನ್ನುವುದು ಗೊತ್ತಿದೆಯೆ?

ಶ್ರೀ ವಿ. ವೆಂಕಟಪ್ಪ.—ಈಗ ಆ ರೀತಿಯ ಕಡ್ಡಾಯವೂ ಇಲ್ಲ. ಹಣವನ್ನೂ ಕೊಡಬೇಕಾಗಿಲ್ಲ. ಈಗಿನ ಯೋಜನೆಯ ಪ್ರಕಾರ ಹಣವನ್ನು ಮಂಜೂರುಮಾಡುವವರು ಡೆಪ್ಯುಟಿ ಕಮಿಷನರು. ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್ ಸೇರಿ ಆಯಾ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವದಕ್ಕೆ ಹಣವನ್ನು ಕೊಡಬೇಕು, ಯಾವ ಯಾವದು ಜಾಗ್ರತೆಯಾಗಬೇಕು ಎಂದು ಯೋಚನೆ ಮಾಡುತ್ತಾರೆ. ಡೆಪ್ಯುಟಿ ಕಮಿಷನರು ಮಂಜೂರು ಮಾಡುವವರು, ಅಮಲ್ದಾರರು ಅದನ್ನು ಇನ್ಸ್‌ಪೆಕ್ಟ್ ಮಾಡುವವರು ಮತ್ತು ಸಬ್ ಓವರ್ಸಿಯರ್ ಮೇಲ್ವಿಚಾರಣೆ ನೋಡುವವರು ಹೀಗೆ ಇದೆ. ಹಣವನ್ನು ನಾಲ್ಕುವೇಳೆ ಕೊಡಬೇಕು. ಮೊದಲನೆಯದು ತಳಹದಿಯಾದ ಕೂಡಲೇ, ಎರಡನೆಯ ಕಂತನ್ನು ಕಟ್ಟಡ ಎದ್ದಕೂಡಲೇ ಕೊಡಬೇಕು. ಮತ್ತೊಂದು ಕಂತನ್ನು ಮೇಲ್ಛಾವಣಿ ಹಾಕತಕ್ಕ ಕಾಲದಲ್ಲಿ ಆಮೇಲೆ ಎಲ್ಲ ಮುಗಿದ ಮೇಲೆ ಹೀಗೆ ನಾಲ್ಕು ವೇಳೆ ಕಟ್ಟಡದ ಕೆಲಸಕ್ಕೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕು ಎಂದು ಹಣವನ್ನು ಒದಗಿಸಿದ್ದೇವೆ. ಈಗಾಗಲೇ ಅನೇಕ ಕಡೆ ಕಟ್ಟಡಗಳಾಗಿವೆ. ನಾನು ಹೇಳುವುದಾದರೆ ಈ ವರ್ಷ 1957-58ರಲ್ಲಿ ಸುಮಾರು ಆರುಲಕ್ಷ ರೂಪಾಯಿ ಖರ್ಚಾಗುತ್ತದೆ ಶಿವಮೊಗ್ಗ, ಚಿತ್ರದುರ್ಗ, ಬೆಂಗಳೂರು ಮತ್ತು ಇನ್ನು ಕೆಲವು ಜಿಲ್ಲೆಗಳಲ್ಲಿ ಒಂದೊಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಿದ್ದಾರೆ; ಮತ್ತು ಇನ್ನೂ ಹಣಬೇಕು ಎಂದು ಕೇಳುತ್ತಿದ್ದಾರೆ. ಈ ಡೆಪ್ಯುಟಿ ಕಮಿಷನರುಗಳಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

ಅಧ್ಯಕ್ಷರು.—ಸೇರ್ಪಡೆಯಾಗಿರುವ ಪ್ರದೇಶಗಳಿಗೂ ಇದು ಅನ್ವಯಿಸುತ್ತದೆಯೇ?

ಶ್ರೀ ವಿ. ವೆಂಕಟಪ್ಪ.—ಎಲ್ಲ ಕಡೆಗೂ ಅನ್ವಯಿಸುತ್ತದೆ. ಬಹಳ ವಿಶ್ವಾಸದಿಂದ ಕೆಲಸವನ್ನು ನಿರ್ವಂಚನೆಯಿಂದ ಮಾಡಿರುವ ಎಲ್ಲ ಅಧಿಕಾರವರ್ಗದವರಿಗೂ ನಾನು ಕೃತಜ್ಞತೆಗಳನ್ನು ಹೇಳದೆ ತೀರದು.

Sri K. PUTTASWAMY (Mysore).—Under the old scheme it was Rs. 500 for each school. In the present scheme......

ಶ್ರೀ ವಿ. ವೆಂಕಟಪ್ಪ.—ಅದನ್ನು ಕೇಳಿದ್ದೀರಿ. ಉತ್ತರ ಹೇಳುತ್ತಿದ್ದೇನೆ. ಕಂಟ್ರಾಕ್ಟರುಗಳಿಗೆ ಕೊಡಬೇಕಾದರೆ ಏನು ಖರ್ಚಾಗುತ್ತದೆಂದು ನೋಡಿ ಮಾಡಿದ್ದೇವೆ. ನಾನು ಅನೇಕ ಹಳ್ಳಿಗಳನ್ನು ನೋಡಿದ್ದೇನೆ. ಇವೊತ್ತಿನ ದಿವಸ ಇಲ್ಲಿ (ಬೆಂಗಳೂರಲ್ಲಿ) ಇಟ್ಟಿಗೆಯ ಬೆಲೆ 35—40 ರೂಪಾಯಿಗಳಿದ್ದರೆ ಹಳ್ಳಿಗಳಲ್ಲಿ 15 ರೂಪಾಯಿ ಇದ್ದರೆ ಹೆಚ್ಚು. ಅವರೇ ಸ್ವಂತವಾಗಿ ಮಾಡಿಕೊಳ್ಳುವುದಾದರೆ ಹತ್ತು ರೂಪಾಯಿಗಳಲ್ಲಿ ಆಗುತ್ತದೆ. ಈ ರೀತಿಯಾಗಿ ಮಾಡುತ್ತಿದ್ದಾರೆ. ಊರಿನವರು ಸ್ವಲ್ಪ ಸಹಾಯ ಮಾಡಿದರೆ ಅವರ ಕೈಯಿಂದ ಹಣವನ್ನು ಹಾಕಬೇಕಾದದ್ದೇ ಇಲ್ಲ. ನಾವು ಎಲ್ಲವನ್ನೂ ನೋಡಿ 1,500 ರೂಪಾಯಿ ಎಂದು ಗೊತ್ತುಮಾಡಿದ್ದೇವೆ ಎಂದು ಶ್ರೀ ಪುಟ್ಟಸ್ವಾಮಿಯವರಿಗೆ ನಾನು ಹೇಳುತ್ತೇನೆ.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಬಳ್ಳಾರಿ ಜಿಲ್ಲೆಯ ಅನೇಕ ಗ್ರಾಮಗಳವರು ಹಣ ಕೊಡುತ್ತೇವೆಂದು ಮುಂದೆ ಬಂದಾಗ್ಯೂ ಕೂಡ ಏನೂ ನಡೆದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ವೆಂಕಟಪ್ಪ.—ಅದನ್ನು ವಿಚಾರ ಮಾಡಬೇಕು. ಇನ್ನೊಂದು ವಿಷಯವೇನೆಂದರೆ, ಅನೇಕ ಜನರು ಬಹಳ ವರ್ಷಗಳ ಹಿಂದೆ ಸರ್ಕಾರಕ್ಕೆ ಹಣವನ್ನು ಕೊಟ್ಟಿದ್ದಾರೆ. ಸ್ಕೂಲು ಕಟ್ಟಡಗಳನ್ನು ಕಟ್ಟಲು ಸರ್ಕಾರದವರು ಎಷ್ಟೆಷ್ಟು ಕೇಳಿದರೋ ಅಷ್ಟನ್ನು ಎಂದರೆ 500 ರೂಪಾಯಿ, 700 ರೂಪಾಯಿ, ಸಾವಿರ ರೂಪಾಯಿ, ಎರಡು ಸಾವಿರ ರೂಪಾಯಿ ಹೀಗೆ ಕೊಟ್ಟಿದ್ದಾರೆ. ಇದರ ಬಾಬ್ತು ಲಕ್ಷಾಂತರ ರೂಪಾಯಿಗಳು ಸರ್ಕಾರದ ಖಜಾನೆಯಲ್ಲಿದೆ. ಅದಕ್ಕೆ ಪ್ರತಿಯಾಗಿ ಕಟ್ಟಡಗಳನ್ನು ಕಟ್ಟಿಕೊಟ್ಟಿಲ್ಲ. ಎಲ್ಲೆಲ್ಲಿ ಹೀಗಾಗಿದೆ ಎನ್ನುವುದನ್ನು ಗೊತ್ತುಮಾಡುವುದೇ ಸ್ವಲ್ಪ ಕಷ್ಟವಾಗಿದೆ. ಇದರ ಸಂಬಂಧದಲ್ಲಿ ಒಂದು ಪಟ್ಟಿಯನ್ನು ತರಿಸಬೇಕಾಗಿದೆ. ಯಾವ ಯಾವ ಊರಿನವರು ಹಣವನ್ನು ಕೊಟ್ಟಿದ್ದಾರೆ ಎಂದು ತಿಳಿದು ಅವರು ಎಷ್ಟೇ ಹಣವನ್ನು ಕೊಟ್ಟಿರಲಿ ಸರ್ಕಾರದವರು ಕಟ್ಟಡವನ್ನು ಕಟ್ಟಿಕೊಡತಕ್ಕದ್ದು ಮತ್ತು ಅಂಥ ಹಳ್ಳಿಗಳಿಗೆ ಮೊದಲು ಪ್ರಿಫರೆನ್ಸ್ ಕೊಡತಕ್ಕದ್ದು ಎಂದು, ತೀರ್ಮಾನ ಮಾಡಿದ್ದೇವೆ.

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ.—ಸ್ಕೂಲು ಕಟ್ಟಡಗಳ ರಿಪೇರಿಯ ಸಲುವಾಗಿ ಒಂದು ಮಾತನ್ನು ಹೇಳಿದ್ದೆ.

ಶ್ರೀ ವಿ. ವೆಂಕಟಪ್ಪ.—ಇದರಲ್ಲಿ ಒಂದು ಕಷ್ಟವಿದೆ. ಹಿಂದೆ ಕಟ್ಟಡವನ್ನು ಯಾರೋ ಧರ್ಮವಾಗಿ ಕಟ್ಟಿ ಕೊಟ್ಟಿದ್ದರು. ಹಳ್ಳಿಯವರು ಕಟ್ಟಿ ಕೊಟ್ಟಿದ್ದರು, ವ್ಯಕ್ತಿಗಳು ಕಟ್ಟಿ ಕೊಟ್ಟಿದ್ದರು ಹೀಗೆ ಕಟ್ಟಡಗಳು ಬಂದಿವೆ. ಆ ಕಟ್ಟಡಗಳನ್ನು ಸರ್ಕಾರದ ಸುಫರ್ದಿಗೆ ತೆಗೆದುಕೊಂಡಿಲ್ಲ. ಇಂಜಿನಿಯರಿಂಗ್ ಇಲಾಖೆಯವರು ಕಟ್ಟಡವನ್ನು ಕಟ್ಟಿಸಿದವರಿಂದ ದಾನಪತ್ರ ಬಂದ ಹೊರತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿಬಿಟ್ಟರು. ನಾನು ಹೇಳುವುದೇನೆಂದರೆ ಇಷ್ಟು ವರ್ಷಗಳಿಂದ ನಡೆದುಕೊಂಡು ಬಂದಿರುವುದನ್ನು ಯಾರೂ ಸಹ ಕೊಟ್ಟಿರುವುದನ್ನು ನನ್ನದು ಎಂದು claim ಮಾಡುವುದಿಲ್ಲ. ಆದುದರಿಂದ ಯಾರು ಸಿಕ್ಕುತ್ತಾರೆಯೋ ಅವರಿಂದ ದಾನಪತ್ರಗಳನ್ನು ಬರೆಸಿಕೊಳ್ಳಿ. ಅವುಗಳನ್ನೆಲ್ಲ P.W.D.ಗೆ ವಹಿಸಿಕೊಂಡು ಆ ಕಟ್ಟಡಗಳು ರಿಪೇರಿಯಾಗಲು ಬೇಕಾದ ಹಣವನ್ನು ಒದಗಿಸಲು ಕೇಳಬೇಕೆಂದು ಗೊತ್ತುಮಾಡಿದೆ. ಉಳಿದುವನ್ನು ಸರ್ಕಾರದವರೇ ತೆಗೆದುಕೊಂಡು ರಿಪೇರಿ ಮಾಡಿಸಬೇಕಾಗುತ್ತದೆ. ಏಕೆಂದರೆ ರಿಪೇರಿಯಾಗದೆ ಆ ಕಟ್ಟಡಗಳು ಬಹುಕಾಲ ಉಳಿಯಲಾರವು. ಎಲ್ಲ ಕಟ್ಟಡಗಳನ್ನೂ ಒಂದು ವರ್ಷದಲ್ಲಿ ರಿಪೇರಿ ಮಾಡುತ್ತೇವೆ ಎಂದು ಹೇಳಲಾರೆ. ಎಷ್ಟೆಷ್ಟು ಕೆಲಸಗಳನ್ನು ಮಾಡಲು ಸಾಧ್ಯವೋ ಅಷ್ಟು ಕೆಲಸಗಳನ್ನೂ ಮಾಡುವುದಕ್ಕೆ ಪ್ರಯತ್ನಪಡುತ್ತೇವೆಂದು ಮಾತ್ರ ಹೇಳುತ್ತೇನೆ.

ನಾಲ್ಕೈದು ಪ್ರದೇಶಗಳು ಸೇರಿರುವುದರಿಂದ ವಿದ್ಯಾಭ್ಯಾಸದ ಕ್ರಮದಲ್ಲಿ ಬಹಳಮಟ್ಟಿಗೆ ವ್ಯತ್ಯಾಸವಿದೆ. ಅದನ್ನೆಲ್ಲಾ ಒಂದೇ ರೀತಿಗೆ ತರಬೇಕೆಂದು ಒಂದು ಕಮಿಟಿಯನ್ನು ನೇಮಿಸಲಾಗಿದೆ. ಆ ಸಮಿತಿಯಲ್ಲಿ ಆರಿತು ನುರಿತವರಿದ್ದಾರೆ. ಅವರ ಅಭಿಪ್ರಾಯವನ್ನು ಪಡೆದು, ವಿದ್ಯಾಭ್ಯಾಸಕ್ರಮವೆಲ್ಲಾ ಒಂದೇ ರೀತಿಯಾಗುವಂತೆ ಮಾಡಬೇಕಾಗಿರುತ್ತದೆ. ಕೆಲವು ಕಡೆಗಳಲ್ಲಿ ಪ್ರೈಮರಿ ಮತ್ತು ಮಿಡಲ್ ಸ್ಕೂಲ್‌ಗಳಲ್ಲಿ ಫೀಸ್ ಹಾಕುತ್ತಾ ಇದ್ದಾರೆ. ಹಳೆಯ ಮೈಸೂರಿನಲ್ಲಿ ಫೀಜು ಇಲ್ಲ.

ಒಬ್ಬ ಸದಸ್ಯರು.—ಬಳ್ಳಾರಿ ಜಿಲ್ಲೆಯಲ್ಲಿ ಇನ್ನೂ ವಸೂಲು ಮಾಡುತ್ತಾ ಇದ್ದಾರೆ.

ಶ್ರೀ ವಿ. ವೆಂಕಟಪ್ಪ.—ಹಳೆಯ ಕಾನೂನುಗಳೇ ಅಲ್ಲಿ ಜಾರಿಯಲ್ಲಿರುತ್ತವೆ. ನಾವು ಹೊಸದಾಗಿ ಅದನ್ನು ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕು.

ಅಧ್ಯಕ್ಷರು.—ಬಳ್ಳಾರಿ ಹಳೆಯ ಮೈಸೂರಿನಲ್ಲಿರುತ್ತದೋ, ಹೊಸ ಮೈಸೂರಿನಲ್ಲಿರುತ್ತದೋ ?

ಶ್ರೀ ವಿ. ವೆಂಕಟಪ್ಪ.—ಅದು ಪೂರ್ಣವಾಗಿ ಹಳೆಯ ಮೈಸೂರಿಗೆ ಸೇರಿ ಹೋಗಿದೆ ಎಂದು ಹೇಳಲಾರೆ. ಸರ್ಕಾರದವರು ಪರಿಶೀಲನೆಮಾಡಿ ಆದಷ್ಟು ಜಾಗ್ರತೆ ಒಂದೇ ರೀತಿಯ ಕ್ರಮವನ್ನು ಅನುಸರಿಸಿ, ಫೀಸ್ ತೆಗೆದುಹಾಕಬೇಕೆಂದು ಅಂದುಕೊಂಡಿದ್ದೇವೆ. ಈ ವಿಚಾರ ನಡೆದಿದೆ.

Sri C. J. MUCKANNAPPA.—I rise to a point of order. A doubt has been created in my mind. The Hon'ble Minister for Education said that he was yet doubtful about the integration of Bellary.

ಅಧ್ಯಕ್ಷರು.—ಅನುಮಾನವಿಲ್ಲ. ಏನೂ point of order ಇಲ್ಲ. ಸುಮ್ಮನೆ ಕಾಲ ಕಳೆಯುತ್ತದೆ.

ಶ್ರೀ ವಿ. ವೆಂಕಟಪ್ಪ.—ಆದ್ದರಿಂದ ಆದಷ್ಟು ಜಾಗ್ರತೆ ಯೋಚನೆ ಮಾಡುತ್ತೇನೆ. ಈಗ ಹೈಸ್ಕೂಲ್ ಕ್ಲಾಸುಗಳಲ್ಲಿ, ಒಂದೊಂದುಕಡೆ ಒಂದೊಂದು ವಿಧವಾದ ಫೀಸ್ ಇದೆ. ಬೊಂಬಾಯಿ ಪ್ರದೇಶದಲ್ಲಿ ಬಹಳ ಹೆಚ್ಚಾಗಿದೆ. ಮದ್ರಾಸ್ ಪ್ರದೇಶದಲ್ಲಿ ಅದಕ್ಕಿಂತ ಸ್ವಲ್ಪ ಕಡಮೆ ಇದೆ. ಹಿಂದಿನ ಮೈಸೂರಿನಲ್ಲಿ ಬಹಳ ಕಡಮೆ ಇದೆ. ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯ ಫೀಸ್ ಮಾಡಬೇಕಾದರೆ, ಹಳೆಯ ಮೈಸೂರು ಪ್ರದೇಶದಲ್ಲಿ ಫೀಸ್ ಸ್ವಲ್ಪ ಹೆಚ್ಚಿಗೆ ಮಾಡಲೇಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ಸಭೆಯ ಗಮನಕ್ಕೆ ತಂದೆ.

ಮತ್ತೊಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮೊದಲು ಪ್ರಾರಂಭ ಮಾಡಿದಾಗ, ಶ್ರೀಮಾನ್ ಮಲ್ಲಾರಾಧ್ಯರು ಮಾಡಿದ ಭಾಷಣದ ವಿಷಯದಲ್ಲಿ ನಾವುಗಳೆಲ್ಲಾ ಅವರು ಉತ್ತಮ ರೀತಿಯ ಭಾಷಣ ಮಾಡಿದರು ಎಂದು ತಿಳಿದುಕೊಂಡಿದ್ದೇವೆ. ನಮ್ಮ ಎದುರುಪಕ್ಷದಲ್ಲಿ ಕುಳಿತುಕೊಂಡು ಹೇಳಿದ ಮಾತ್ರಕ್ಕೆ, ಅವರ ಮಾತಿಗೆ ಮನ್ನಣೆ ಇಲ್ಲ, ಗೌರವ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಪ್ರತಿಭಟನೆ ಮಾಡತಕ್ಕಂಥ ಸ್ಥಾನದಲ್ಲಿ ಕುಳಿತುಕೊಂಡಿದ್ದೇವೆ ಎಂದ ಮಾತ್ರಕ್ಕೇ, ಹೇಗೆ ಬೇಕಾದರೂ ಹೇಳಿಬಿಡಬಹುದು ಎಂದು ಹೇಳುವುದು ಸರಿಯಲ್ಲ. ಈ ಸಭೆಯ ಗೌರವ, ಗಾಂಭೀರ್ಯವೇನು ಎನ್ನುವುದನ್ನು ಯಾರೂ ಮರೆಯಬಾರದು. ಈ ಬಜೆಟ್ಟನ್ನು ಒಂದು ಸುಳ್ಳಿನ ಕಂತೆ ಎಂದು ಹೇಳಿಬಿಟ್ಟರು. ಹೀಗೆ ಹೇಳಿಬಿಟ್ಟರೆ, ಕಾಮನ್‌ಸೆನ್ಸ್ ಇರತಕ್ಕಂಥ ಯಾವ ಮನುಷ್ಯನಾದರೂ ನಂಬುವುದಕ್ಕೆ ಸಾಧ್ಯವೇ ? ಯೋಚನೆ ಮಾಡಿ. ಹಾಗೆ ಹೇಳಬಾರದು. ಈ ಘಳಿಗೆಯೇ ಈ ಸ್ಥಾನವನ್ನು ಬಿಟ್ಟುಹೋಗಿ ಎಂದು ಹೇಳಿಬಿಟ್ಟರು. ಈ ಸ್ಥಾನವನ್ನು ಬಿಟ್ಟುಹೋಗುವುದಕ್ಕೆ ಸಿದ್ಧ, ಆದರೆ ಅದನ್ನು ತೆಗೆದುಕೊಳ್ಳುವವರು ಇರಬೇಕಲ್ಲ. ಅದಕ್ಕೆ ದೇಶದ ತೀರ್ಮಾನವಾಗಬೇಕು. ತೆಗೆದುಕೊಳ್ಳಬೇಡ ಎಂದು ನಾವು ಅನ್ನುವುದಿಲ್ಲ. ತೆಗೆದುಕೊಳ್ಳಿ ಅಂದರೆ, ತೆಗೆದುಕೊಳ್ಳುವುದಕ್ಕೆ ಯಾರು ಬರುತ್ತಾರೆ ? ಪುನಃ ದಾಸಯ್ಯನ ಹಣ. ಒಂದು ಹೋದರೆ, ಇನ್ನೊಂದು ದಾಸಯ್ಯನ ಹಣ ಬರುತ್ತದೆ. ಬರುವವರು ಯಾರು ? ನಮ್ಮವರೇ ಬರತಕ್ಕವರು. ಬಾಯಿಚಪಲ ತೀರಿಸಿಕೊಳ್ಳುವುದಕ್ಕೆ ಮಾತು ಬೇಡ. ಗಾಂಭೀರ್ಯದಿಂದ, ಒಳ್ಳೆಯ ರೀತಿಯಲ್ಲಿ ಕ್ರಿಟಿಸೈಸ್ ಮಾಡಿ. ನಾನೂ ಆ ಸ್ಥಾನದಲ್ಲಿ ಕೆಲಸವನ್ನು ಮಾಡಿರತಕ್ಕಂಥವನು. ಜವಾಬ್ದಾರಿಯನ್ನು ಅರಿತು, ವಹಿಸಿಕೊಂಡು, ಹಾಗೆ ವಹಿಸಬಲ್ಲ ದೃಷ್ಟಿಯಿಂದ, ಮಾತನಾಡುವುದಾದರೆ, ಗೌರವ ಮನ್ನಣೆ ದೊರೆಯುತ್ತದೆ.

ಈ ಎರಡು ಮಾತುಗಳನ್ನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ಸಂಸ್ಥಾನಾವಳಿ ಏಡೆಡ್ ಹಾಸ್ಟೆಲ್‌ಗಳು, ಹರಿಜನರ ಸಂಖ್ಯೆ ಹಿಂದೆ ಎಷ್ಟಿತ್ತೋ, ಈಗಲೂ ಅಷ್ಟೇ ಇವೆ. ಈಗ ಅನೇಕ ಹರಿಜನ ಹುಡುಗರು ಆ ಹಾಸ್ಟಲುಗಳಿಗೆ ಅರ್ಜಿಹಾಕಿ, ಸ್ಥಾನ ಸಿಕ್ಕದೆ ನಿರಾಶರಾಗಿ ಹೋಗುತ್ತಿದ್ದಾರೆ. ದುಡ್ಡು ಖರ್ಚು ಮಾಡಿ ಅವರು ಓದುವುದಕ್ಕಾಗುವುದಿಲ್ಲ. ಆದ್ದರಿಂದ ಈ ವರ್ಷ ಪ್ರತಿಯೊಂದು ಹಾಸ್ಟೆಲಿಗೂ ಕೊನೆಯ ಪಕ್ಷ ಹತ್ತು ಹತ್ತು ಹುಡುಗರ ಸಂಖ್ಯೆ ಜಾಸ್ತಿಮಾಡಿ ಕೊಡಬೇಕು.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ, ಪ್ರೈಮರಿ ಸ್ಕೂಲ್ ಹಾಸ್ಟೆಲ್ ಮಾಡುವುದಕ್ಕೆ, ಅಲ್ಲಿ ಈವಾಗ ಸ್ಕೂಲ್ ಇದ್ದಕಡೆ, ಮಕ್ಕಳಿಗೆ ಜಾಗ ಕೊಡುವುದಿಲ್ಲ ಎಂದು

ತಕರಾರು ಆಗಿದೆ. ಸ್ಕೂಲ್ ಇದ್ದ ಕಡೆ ಇವರು ಕಳುಹಿಸುವುದಿಲ್ಲ, ವಿದ್ಯಾಭ್ಯಾಸಕ್ಕೆ ಹಿಂದೆ ಯಾವ ರೀತಿ ಗ್ರ್ಯಾಂಟ್ ಕೊಡುತ್ತಾ ಇದ್ದಿರೋ, ಅದೇ ರೀತಿ, ಪ್ರೈಮರಿ ಸ್ಕೂಲ್‌ಗಳಿಗೆ ಗ್ರ್ಯಾಂಟ್‌ಗಳನ್ನು ಮಾಮೂಲಿನಂತೆ ಕೊಡಬೇಕು. ಸ್ಕೂಲ್ ಇರಲಿ, ಇರದಿರಲಿ, ಹಾಸ್ಟೆಲ್‌ನಲ್ಲಿ ವಿದ್ಯಾಭ್ಯಾಸ ಮಾಡಿಸಬೇಕು.

ಶ್ರೀ ವಿ. ವೆಂಕಟಪ್ಪ.—ಈಗ ಹೊಸದೇನೂ ಅಲ್ಲ, ಹಿಂದಿನಿಂದ ಬಂದಿರತಕ್ಕದ್ದು. ಊರಿನ ಹುಡುಗರಿಗೆ ಕೊಡುವುದಾದರೆ ಹೊರಗಡೆಯಿಂದ ಬರುವವರಿಗೆ ಅನುಕೂಲ ಕಡಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಹಾಗೆ ಮಾಡಿದ್ದಾರೆ. ಊರಿನಲ್ಲಿ ಇರತಕ್ಕವರು ಕೂಡ ಬಡವರು. ಅವರಿಗೂ ಅನುಕೂಲಮಾಡಿಕೊಡಬೇಕು. ಅದನ್ನು ಪರಿಶೀಲನೆಮಾಡಿ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡಲಾಗುತ್ತದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ತುಮಕೂರು ತಾಲ್ಲೂಕಿನಲ್ಲಿ ಏಳೆಂಟು ಸ್ಕೂಲುಗಳ ಕಟ್ಟಡ ಕಟ್ಟಿದ್ದರೂ ಅವುಗಳನ್ನು ಗೌರ್ನಮೆಂಟಿಗೆ ತೆಗೆದುಕೊಂಡಿಲ್ಲ. ಜಾಗ್ರತೆ ಅವನ್ನು ತೆಗೆದುಕೊಳ್ಳುವಂತೆ ಮಾಡುತ್ತೀರಾ?

ಶ್ರೀ ವಿ. ವೆಂಕಟಪ್ಪ.—ಮಾಡಿಸುತ್ತೇನೆ.

Sri F. H. MOHSIN.—Sir, I had raised a question of levying of fees in primary schools. In municipal schools there is a practice of charging fees for schools run by them. Of course, Hon'ble Minister may say that fees will not be charged bys chools run by Government. In our areas especially primary schools are run by municipal boards. Will the Govern ment issue nstructions not to levy fees?

ಶ್ರೀ ವಿ. ವೆಂಕಟಪ್ಪ.—ಇದನ್ನು ಪೂರ್ಣವಾಗಿ ವಿಚಾರ ಮಾಡುತ್ತೇನೆ. ಚೀಫ್ ಮಿನಿಸ್ಟರು ಆ ವಿಚಾರದಲ್ಲಿ ಹೇಳುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳುಬಾಗಿಲು).—ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ನಡೆಯುತ್ತಿರುವ ಹೈಸ್ಕೂಲುಗಳನ್ನು ಸರ್ಕಾರದವರು ತೆಗೆದುಕೊಳ್ಳುವ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನು?

ಶ್ರೀ ವಿ. ವೆಂಕಟಪ್ಪ.—ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಇರುವುದನ್ನು ತೆಗೆದುಕೊಳ್ಳುವುದು ಸಾಧ್ಯವಾಗಲಾರದು ಎಂದು ಸರ್ಕಾರದ ಅಭಿಪ್ರಾಯ.

ಶ್ರೀ ಎಸ್. ಪಿ. ತಳವಾರ್‌ಕರ್ (ರಾಯಬಾಗ್).—(ಮರಾಠಿಯಲ್ಲಿ) ಟ್ರೈನಿಂಗ್ ಕಾಲೇಜಿಗೆ ಹೋಗುವವರಿಗೆ ಸಂಪೂರ್ಣ ಸಂಬಳ ಸಿಕ್ಕುತ್ತಿಲ್ಲ. ಅವರಿಗೆ ಸ್ಕಾಲರ್‌ಷಿಪ್ ಅಥವಾ ಸಾಲ ಕೊಟ್ಟರೆ ತೊಂದರೆಯಾಗುತ್ತದೆ. ಆದ್ದರಿಂದ ಸಂಪೂರ್ಣ ಪಗಾರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ವಿ. ವೆಂಕಟಪ್ಪ.—ಅದು ನಾವು ಮಾಡಿದ ಏರ್ಪಾಡು ಅಲ್ಲ. ಹಿಂದಿನಿಂದ ಬಂದಿರುವುದು. ಪರಿಶೀಲನೆಮಾಡಿ ಯಾವರೀತಿ ಒಂದು ಏರ್ಪಾಡು ಮಾಡಬೇಕು ಎಂಬುದನ್ನು ಯೋಚನೆ ಮಾಡುತ್ತೇವೆ.

*ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಆಯವ್ಯಯಪಟ್ಟಿಯ ಮೇಲೆ ದೀರ್ಘವಾಗಿ ಶ್ರೀ ವೈಕುಂಠ ಬಾಳಿಗರವರು ಭಾಷಣವನ್ನು ಕೊಡುತ್ತಾರೆ. ಈ ಆಯವ್ಯಯ ಪಟ್ಟಿಯನ್ನು ವಿಮರ್ಶೆಮಾಡುವಂಥ ಮಹನೀಯರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದುದಕ್ಕೋಸ್ಕರ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಕೊಡುವುದಕ್ಕೋಸ್ಕರ ಈ ಭಾಷಣವನ್ನು ಮಾಡುತ್ತಿದ್ದೇನೆ. ಈ ಆಯವ್ಯಯ ಪಟ್ಟಿಯನ್ನು ಅನೇಕರು ಸ್ವಾಗತಿಸಿದ್ದಾರೆ. ಇದರಲ್ಲಿ ಯಾವ ಮುಚ್ಚುಮರೆಯೂ ಇಲ್ಲ ಎಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಯಾವ ಪಕ್ಷದವರೇ ಸರ್ಕಾರವನ್ನು ನಡೆಸಲಿ ಅದರಲ್ಲಿ ಮುಚ್ಚುಮರೆ ಮಾಡುವ ಸಂಗತಿ ಇಲ್ಲ. ತಾತ್ಕಾಲಿಕವಾಗಿ ಒಂದು ಪಕ್ಷದವರು ರಾಜ್ಯಭಾರ ನಡೆಸುತ್ತಾರೆ. ಆಡಳಿತದ ವಿಷಯದಲ್ಲಿ ಎಲ್ಲಾ ಪಕ್ಷದವರ ಅಭಿಮತವನ್ನೂ ಪಡೆಯಬೇಕಾದ ಅಗತ್ಯವಿರುವುದರಿಂದ ಎಲ್ಲಾ ವಿಷಯಗಳನ್ನೂ ಮುಚ್ಚುಮರೆ ಇಲ್ಲದೆ ಇಡಬೇಕಾದದ್ದು ನಮ್ಮ ಕರ್ತವ್ಯ. ಆದ್ದರಿಂದ ಆ ರೀತಿ ಇಟ್ಟಿದ್ದೇವೆ. ಹೊಸ ರಾಜ್ಯ ಸ್ಥಾಪನೆ ಆದ ಮೇಲೆ ನಮ್ಮ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇತ್ತು ಎಂಬುದನ್ನು ಹಿಂದೆಯೇ ತಿಳಿಸಿದ್ದೇನೆ. ಈಗ ತಮ್ಮೆಲ್ಲರ ಸಹಕಾರದಿಂದ ಮತ್ತು ಹೆಚ್ಚಾಗಿ ಫೈನಾನ್ಸ್ ಕಮಿಷನ್‌ನವರ ಸಹಾಯದಿಂದ ಮತ್ತು ಕೇಂದ್ರ ಸರ್ಕಾರದವರ ಸಹಾಯದಿಂದ ನಮ್ಮ ಹಣಕಾಸಿನ ಭದ್ರತೆಗೆ ಸಂಬಂಧಪಟ್ಟ ವಿಚಾರವನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಇದರಲ್ಲಿ ಜಗ್ಗರಿ ಇಲ್ಲ; ಮತ್ತು ಕಣ್ಣಾಮುಚ್ಚಾಲೆ ಆಟವಿಲ್ಲ, ಅಥವಾ ಬಣ್ಣ ಬಳಿದಂಥ ಬೊಂಬೆಯ ಆಟವಿಲ್ಲ. ಅಷ್ಟು ತೀಕ್ಷ್ಣಬುದ್ಧಿ ಇರತಕ್ಕ ಸಭಾಸದಸ್ಯರಲ್ಲಿ ಹಾಗೆ ಮಾಡುವುದಕ್ಕೆ ಹೋದರೆ ಬೆಚ್ಚಿಬೀಳುತ್ತೇವೆ. ಅದನ್ನೆಲ್ಲಾ ಬಿಟ್ಟು ಯಾವ ಅಂಕಿ ಅಂಶಗಳನ್ನೂ ಮರೆಮಾಚದೆ ಮತ್ತು ಏನು ವರಮಾನ ಬರಬೇಕು ಅದನ್ನು ಕೂಡ ಬಹಳ ಕಡಮೆಯಾಗಿ ಇಟ್ಟುಕೊಂಡಿದ್ದೇವೆ. ನಾವು 100 ರೂಪಾಯಿ ಬರಬೇಕು ಎಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರೆ 98 ರೂಪಾಯಿ ತೆಗೆದುಕೊಂಡಿದ್ದೇವೆ. ಆ ರೀತಿ ಬರಬೇಕಾದ್ದು ತೆಗೆದುಕೊಂಡು ವೆಚ್ಚ ಮಾಡುವುದನ್ನು ಕೂಡ ಸಾಧ್ಯವಾದಮಟ್ಟಿಗೆ ಎಲ್ಲೆಲ್ಲಿ ಕಡಮೆ ಮಾಡಬೇಕು ಎಂಬುದನ್ನು ವಿಮರ್ಶೆಮಾಡಿ ಮಾಡಿದ್ದೇವೆ. ಅದನ್ನು ಅರಿತು ಬಹಳ ಚೆನ್ನಾಗಿ ಅಪ್ರಿಷಿಯೇಟ್ ಮಾಡಿದ್ದಾರೆ. ಕೆಲವರು ಮಾತ್ರ ಅದರಲ್ಲಿ ಸ್ವಲ್ಪ ತಪ್ಪು ಕಂಡುಹಿಡಿದಿದ್ದಾರೆ. ತಪ್ಪು ಕಂಡುಹಿಡಿಯಬೇಕಾದದ್ದು ಅಗತ್ಯ. ಎಲ್ಲರೂ ಬಡ್ಜೆಟ್ಟನ್ನು ಹೊಗಳಬೇಕಾಗಿಲ್ಲ. ಕೆಲವರು ಇದು ಸಿಕ್‌ಮ್ಯಾನ್ಸ್ ಬಡ್ಜೆಟ್ ಎಂದು ನನ್ನ ಕಾಯಿಲೆ ತೆಗೆದುಕೊಂಡು ವ್ಯಥೆಪಟ್ಟಿದ್ದಾರೆ. ಇದು ಖಂಡಿತ ಸಿಕ್‌ಮ್ಯಾನ್ಸ್ ಬಡ್ಜೆಟ್ ಆಗಿದ್ದರೆ ಇಷ್ಟು ತಿಣುಕಬೇಕಾಗಿತ್ತೇ, ಇಷ್ಟು ಕಷ್ಟಪಡಬೇಕಾಗಿತ್ತೇ? ಫೈನಾನ್ಸ್ ಕಮಿಷನ್ ಮುಂದೆ ನಮ್ಮ ದೇಶದ ವಿಷಯವನ್ನು ಚೆನ್ನಾಗಿ ಇಟ್ಟಿದೆ. ಈ ಹೊಸ ರಾಜ್ಯವು ದೃಢಕಾಯವಾಗಿರಬೇಕು, ಭದ್ರಕಾಯವಾಗಿರಬೇಕು, ತನ್ನ ಶಕ್ತಿಯಿಂದ ಮುಂದೆ ಬರತಕ್ಕ ಕಷ್ಟಗಳನ್ನು ನುಂಗಿಕೊಂಡು ದುಡಿಯಬೇಕಾಗುತ್ತದೆ. ಈಶ್ವರ ಹೇಗೆ ವಿಷವನ್ನು ಕುಡಿದು ಮುಂದಕ್ಕೆ ಹೋಗಬಯಸಿದನೋ ಹಾಗೆಯೇ ರಾಜ್ಯ ಕಟ್ಟಬೇಕಾದರೆ ಕಷ್ಟಪಟ್ಟು ಮುಂದೆ ಹೋಗಬೇಕು. ಇದು ರಾಜ್ಯಗಳ ಪ್ರದೇಶಗಳೂ ಒಂದು ಮಟ್ಟದಲ್ಲಿದ್ದರೆ ಪರವಾಯಿಲ್ಲ. ಆದರೆ ಇದು ಯೂನಿಟ್ಟುಗಳ ಅಂಕಿ ಅಂಶಗಳು ಗೊತ್ತಿಲ್ಲದೆ ಇರುವಾಗ ಮೊದಲನೆಯ ಬಾರಿ ಅದನ್ನು ವರ್ಕ್ ಔಟ್ ಮಾಡಿ ಅಂಕಿ ಅಂಶಗಳನ್ನು ತಯಾರುಮಾಡಿ ಇಷ್ಟರ ಮಟ್ಟಿಗೆ ಪರವಾಯಿಲ್ಲ ಎನ್ನುವ ಹಾಗೆ ಮಾಡಿರುವುದನ್ನು ಕೆಲವರು ಮನಗಂಡಿದ್ದಾರೆ. ಆದ್ದರಿಂದ ನನ್ನ ಕಾಯಿಲೆ ಈ ಬಡ್ಜೆಟ್ಟಿಗೆ ಬಂದಿಲ್ಲ. ದಯವಿಟ್ಟು ಕ್ಷಮಿಸಬೇಕು. ದೇಶ ಸುಭದ್ರವಾಗಿದೆ. ನಾವು

(ಶ್ರೀ ಟಿ. ಮರಿಯಪ್ಪ)

ಸಾಲ ಎತ್ತುವುದಕ್ಕೆ ಹೋದಾಗ ಜನರು ಉತ್ಸಾಹದಿಂದ ಅದನ್ನು ತುಂಬಿಸರು. ಅದು ಒಂದರಿಂದಲೇ ಭದ್ರವಾಗಿದೆ ಎಂದು ಹೇಳುವುದಿಲ್ಲ. ಸಾಲ ಸಿಕ್ಕಿರುವುದರಿಂದ ಭದ್ರವಾಗಿದೆ ಎಂದು ಹೇಳುವುದಿಲ್ಲ ತಮ್ಮ ಕಣ್ಣುಗಳಿಂದ ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆ. ಹಾಗೆ ಭದ್ರವಾಗಿದೆ ಎಂದು ಹೇಳಿ ಕೈಲಾಗದೆ ಶಕ್ತಿ ಮೀರಿ ಮಾಡುವುದಕ್ಕಾಗುವುದಿಲ್ಲ. ನನ್ನ ಶಕ್ತಿಮೀರಿ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಇದಕ್ಕೆ ಒಂದು ಮಿತಿ ಇದೆ. ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಸಹಾಯದ ಜೊತೆಗೆ ಇನ್‌ಟರ್ನಲ್ ರಿಸೋರ್ಸಸ್ ಮ್ಯಾಕ್ಸಿಮೈಸ್ ಮಾಡಿದ್ದೇವೆ. ಹಾಗಾದರೂ ನಮ್ಮ ರೆವಿನ್ಯೂ ಬಡ್ಜೆಟ್ ಖೋತಾ ಆಗಿದೆ. ನಾನು ಒತ್ತಿ ಒತ್ತಿ ಹೇಳಿವೆ. ದೇಶ ಭದ್ರತೆಯಿಂದ ಇರಬೇಕಾದರೆ ದೇಶದ ಭದ್ರತೆಯನ್ನು ಕಾಪಾಡುವುದಕ್ಕೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಮೆ ಮಾಡಲೇ ಬೇಕು. ದೇಶವನ್ನು ಒಂದೇಸಾರಿ ಕಟ್ಟುವುದಕ್ಕೆ ಆಗುವುದಿಲ್ಲ. ಒಂದೇಸಾರಿ ಕಟ್ಟುತ್ತೇವೆಂದು ಮನಸ್ಸಿನಲ್ಲಿ ಇಟ್ಟುಕೊಂಡರೆ ಅದು ಬರಿಯ ಭ್ರಾಂತಿ. ಹಣ ಸ್ಯಾಂಕ್ಷನ್ ಮಾಡಬಹುದು. ಅದು ಡ್ರೇನ್ ಕೆಳಗೆ ಹೋಗುತ್ತದೆ. ಮನುಷ್ಯ ಮಾಡುವುದಕ್ಕೆ ಒಂದು ಮಿತಿ ಇದೆ. ನನಗೆ ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟೇ ಮಾಡಬಲ್ಲೆ. ಎಂಥ ದೃಢಕಾಯನಿಗೂ ಜೀರ್ಣಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಪ್ರತಿಯೊಂದು ರೂಪಾಯಿಗೂ ಪ್ರತಿಫಲ ಬರುವುದಿಲ್ಲ ಎಂದು ನಾನು ಒತ್ತಿ ಒತ್ತಿ ಹೇಳಿದ್ದೇನೆ. ಸರ್ಕಾರಕ್ಕೆ ಈ ಸಭಾಸದಸ್ಯರ ಸಹಕಾರವಿರಲೇ ಬೇಕು. ನಾವು ನಿಮ್ಮನ್ನು ರಿಫ್ಲೆಕ್ಟ್ ಮಾಡುತ್ತೇವೆ. We are after all a barometer. ಈ ಹೌಸ್‌ನಲ್ಲಿ ನಲ್ಲಿ ಟೆಂಪರೇಚರ್ ಜಾಸ್ತಿ ಆಗಿದ್ದರೆ ಕಷ್ಟಕಾಲ ಆಗಿರುತ್ತದೆ. ನಾನ್‌ಪ್ಲಾನ್ಡ್ ವೆಚ್ಚಗಳನ್ನು ಹೆಚ್ಚಿಗೆ ಮಾಡುವಂತೆ ಹೇಳಬೇಡಿ. ಈ ವರ್ಷ ಅಲ್ಲದಿದ್ದರೆ ಮುಂದಿನ ವರ್ಷ ಮಾಡೋಣ. ಯಾವುದರಿಂದ ರಿಟರ್ನ್ ಬರುತ್ತದೆ ಅದನ್ನು ಮಾತ್ರ ಮಾಡಬೇಕಾಗುತ್ತದೆ; ಎರಡು ಪರ್ಸೆಂಟ್ ಬರಲಿ ಮಾಡುತ್ತೇವೆ.

ಖರ್ಚುಗಳನ್ನು Remunerative ಹಾಗೂ unremunerative ಎಂದು Plan ಮತ್ತು non-Plan ಎಂಬುದಾಗಿಯೂ ವಿಂಗಡಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರಣ್ಣಗೌಡರಿಗೆ ಅನೇಕ ಪ್ರಶ್ನೆಗಳನ್ನು ಸದಸ್ಯರು ಕೇಳಿದ್ದಾರೆ. ಅವುಗಳಿಗೆಲ್ಲ ಅವರು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ಬ್ರಿಟಿಷರು ನಮ್ಮ ದೇಶ ಬಿಟ್ಟು ಹೋದ ಒಂದು ವರ್ಷದಲ್ಲಿಯೇ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಸಾಕಷ್ಟು ಕಾಲಾವಕಾಶ ಬೇಕು. ಆದುದರಿಂದ ಆ ರೀತಿಯಾಗಿ ಸದಸ್ಯರು ನಮಗೆ ಹೇಳಬಾರದು; ಹಾಗು ನಾವು ಕೇಳಬಾರದು. ಆಕ್ಷೇಪಣೆ ಮಾಡಿರಿ. ಬೇಡವೆನ್ನುವದಿಲ್ಲ. ಆದರೆ ನಮಗೆ ಇರತಕ್ಕ resources ಎಷ್ಟು ಇದೆ, ಎಂಬುದನ್ನು ಗಮನಿಸಬೇಕಾಗುತ್ತದೆ. ಟ್ಯಾಕ್ಸ್ ಹೆಚ್ಚಿಗೆ ಮಾಡಬಾರದು ಎಂದು ಸಲಹೆ ಮಾಡುತ್ತಾರೆ. ಅದೇ ರೀತಿಯಾಗಿ ಈ ವರ್ಷ ಹೊಸ ಟ್ಯಾಕ್ಸ್ ಹಾಕುವ ಪ್ರೊಪೋಜಲ್ ಮಾಡಿಲ್ಲ. ಆದರೆ ಇದನ್ನೆಲ್ಲಾ ದಕ್ಷತೆಯಿಂದ ಪರಿಶೀಲಿಸುತ್ತೇವೆ. ಇನ್ನೂ ಯಾವುದರ ಮೇಲೆ ಟ್ಯಾಕ್ಸ್ ಹಾಕಬಹುದು ಎಂಬುದನ್ನೂ ನೋಡುತ್ತೇವೆ. ಇನ್ನೂ ಯಾವುದರ ಮೇಲೆ ಟ್ಯಾಕ್ಸ್ ಹಾಕಲು ಬರುವುದೋ ಅಂಥಾದ್ದೊಂದನ್ನೂ ಬಿಡುವುದಿಲ್ಲ. ಈ ವಿಷಯದಲ್ಲಿ ಮಸೂದೆಯನ್ನು ತಯಾರು ಮಾಡಿ ಸಭೆಯ ಮುಂದೆ ಇಡುತ್ತೇವೆ. ಹೊಸದಾಗಿ ಟ್ಯಾಕ್ಸ್ ಹಾಕದೆ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಪೂರ್ತಿಗೊಳಿಸುವುದು ಸಾಧ್ಯವಿಲ್ಲ. ಈಗ ಯಾವ ವಿಧವಾದ ಹೊಸ ತೆರಿಗೆಯನ್ನೂ ವಿಧಿಸಿಲ್ಲ. ಆದರೆ ಯೋಜನೆಯ ಕೊನೆಯ ಎರಡು ವರ್ಷ ಬಹಳ ಕಠಿಣ ಸ್ಥಿತಿಯಲ್ಲಿರುವುದು. ಸಭೆಯ ಮುಂದೆ ಮಂಡಿಸಲಾಗುವ ಏಕ ರೀತಿಯ ತೆರಿಗೆಯ ಕಾನೂನಿಂದ ಹೆಚ್ಚಿನ ಆದಾಯವನ್ನು ತರಬಹುದೆಂದು ಭಾವಿಸಲಾಗಿದೆ. ಅಗತ್ಯವಾಗಿ ವೆಚ್ಚಮಾಡಬೇಕಾಗಿರುವ ಕಾರ್ಯಗಳಿಗೆ ಹಣವನ್ನು ಒದಗಿಸಲು ಯೋಜನೆಯ ಕೊನೆಯ ಎರಡು ವರ್ಷ ತೆರಿಗೆಗಳನ್ನು ನೀಡಲು ಸಿದ್ಧರಾಗಿರಬೇಕು! ರಾಜ್ಯದ ಆರ್ಥಿಕ ಪರಿಸ್ಥಿತಿ ಸುಭದ್ರತೆಯಿಂದ ಕೂಡಿದೆ. ಆದರೆ ನಾವು ನಮ್ಮ ಮಿತಿಯನ್ನು ಮೀರದಂತೆ ವೆಚ್ಚ ಮಾಡಬೇಕಾಗಿದೆ. ಆದ್ದರಿಂದ ಕಡೆಯ ಆ ಎರಡು ವರ್ಷಗಳಲ್ಲಿ ಬಹಳ ಕಷ್ಟವಾಗುತ್ತದೆ. ಸಾಕಷ್ಟು ಹಣ ಇಲ್ಲದೇ ಹೋದರೆ ಡೆವಲಪ್‌ಮೆಂಟ್ ಮಾಡುವುದು ಶಕ್ಯವಿಲ್ಲ. ಹೆಚ್ಚು ಕಂದಾಯ ವಿಧಿಸಲು ಸಾಧ್ಯವಿಲ್ಲ. ಆದಕಾರಣ ಟ್ಯಾಕ್ಸ್ ಕೊಡಲು ಮನಸ್ಸು ರೆಡಿ ಮಾಡಬೇಕು. ಟ್ಯಾಕ್ಸ್ ಯಾರು ಹೊರಬಲ್ಲರೋ ಅಂಥವರ ಬೆನ್ನು ಮೂಳೆ ಮುರಿದುಹೋಗುವಷ್ಟು ಟಾಕ್ಸ್ ಹಾಕಿಬಿಟ್ಟಿದ್ದೇವೆ ಎಂಬ ವಾದವನ್ನು ನಾನು ಒಪ್ಪುವುದಿಲ್ಲ, ಡೆವಲಪ್‌ಮೆಂಟ್ ಆಗಬೇಕಾದರೆ ಹಣ ಖರ್ಚು ಮಾಡಬೇಕಾಗುತ್ತದೆ. ಕಡೆಯ ದರ್ಜೆಯಲ್ಲಿರುವವರನ್ನು ಬಿಟ್ಟು ಉಳಿದವರ ಮೇಲೆ ಟ್ಯಾಕ್ಸ್ ಹಾಕುವುದು ಸಾಧ್ಯವಿದೆ. ಇದನ್ನೆಲ್ಲಾ ತಿಳಿದುಕೊಂಡಿರತಕ್ಕ ಪ್ರಾಜ್ಞರು ಈ ಸಭೆಯಲ್ಲಿ ಇದ್ದಾರೆ.

ಇನ್ನು ಬಹಳ ತೆರಿಗೆಗಳ ಬಾಕಿಯನ್ನು ವಸೂಲು ಮಾಡುವದರಲ್ಲಿ ಸರಕಾರ ವಿಫಲವಾಗಿದೆ, ನಿಶ್ಶಕ್ತವಾಗಿದೆ ಎಂದು ಸದಸ್ಯರು ಟೀಕೆ ಮಾಡಿದರು. ಆದರೆ ಸ್ವಲ್ಪ ಯೋಚನೆ ಮಾಡಬೇಕು. ಒಂದು ಮನೆಯಿಂದ ಮತ್ತೊಂದು ಮನೆಗೆ ಸಾಮಾನುಗಳನ್ನು ತೆಗೆದುಕೊಂಡು shift ಮಾಡಲು ಎಷ್ಟೋ ಕಾಲ ಕಳೆದುಹೋಗುತ್ತದೆ. ಈ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಕಾಲಾವಕಾಶಬೇಕು. ಈ ರೀತಿ ಸದಸ್ಯರು ಮಾಡಿದ ಆಪಾದನೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಬಾಕಿಯನ್ನು ವಸೂಲು ಮಾಡಲು ಅಗತ್ಯವಿರುವ ಕ್ರಮವನ್ನು ಕೈಕೊಳ್ಳಲಾಗಿದೆ. ಆದ್ದರಿಂದ ದಯವಿಟ್ಟು ಮನಸ್ಸಿನಲ್ಲಿರುವ ಇಂಥ ಭಾವನೆಯನ್ನು ಸದಸ್ಯರು ಅಳಿಸಿಬಿಡಬೇಕು. ಸೇಲ್ಸ್‌ಟ್ಯಾಕ್ಸ್ ಇದೊಂದು ಹೊಸ ಆಕ್ಟು. ಇದು 1ನೆಯ ಅಕ್ಟೋಬರ್ 1957ಕ್ಕೆ ಜಾರಿಯಲ್ಲಿ ಬಂದಿದೆ. ಈ ಕಾನೂನನ್ನು ಸುವ್ಯವಸ್ಥಿತ ರೀತಿಯಲ್ಲಿ ಜಾರಿಗೆ ತರಲು ಸ್ವಲ್ಪ ಕಾಲ ಬೇಕಾಯಿತು. ಅದರಿಂದ ಬಾಕಿವಸೂಲು ಮಾಡುವದರಲ್ಲಿ ಸ್ವಲ್ಪ ತಡವಾಗಿದೆ. Latest figures ಕೊಡುತ್ತೇನೆ. ಈ ಹೊಸ ಕಾನೂನನ್ನು ಜಾರಿಗೆ ತರುವಾಗ ಡಿಪಾರ್ಟ್‌ಮೆಂಟ್ organise ಮಾಡಬೇಕು, rules frame ಮಾಡಬೇಕು. ಹೊರಗಡೆಯಿಂದ ಎಷ್ಟೋ ಅಧಿಕಾರಿಗಳು ಬಂದಿದ್ದಾರೆ. ಮೈಸೂರಿನಲ್ಲಿರುವ ಪರಿಸ್ಥಿತಿ ಈಗ ಅವರಿಗೂ ಗೊತ್ತಾಗಿದೆ. ಅವರೆಲ್ಲಾ ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ. ಯಾವುದನ್ನಾದರೂ ಮೊದಲು ಪ್ರಾರಂಭಿಸುವಾಗ ಬಹಳ ಕಷ್ಟವಿರುತ್ತದೆ. ಸೇಲ್ಸ್ ಟ್ಯಾಕ್ಸ್ ಬಾಕಿ ವಸೂಲಿಯ ವಿಚಾರವಾಗಿ latest figures ಹೇಳುತ್ತೇನೆ.

Sales Tax Arrears:—

	Rs.
Arrears as on 1-11-1956.	56,44,873
Arrears from 1-11-1956 to 31-3-1957 ...	41,46,482
Total ...	97,91,355

	Rs.
Collection from 1-11-1956 to 31-12-1957 ...	34,07,339
Current demand from 1-4-1957 to 31-12-1957	1,79,57,343
Collection	1,43,98,469

ಆದುದರಿಂದ current demand ನಲ್ಲಿ ಬಹಳ ಮಟ್ಟಿಗೆ collect ಮಾಡಿದ್ದಾರೆ. Arrears ವಸೂಲು ಮಾಡುವದಕ್ಕೆ ಸಮಜಾಯಿಷಿ ಕೊಡುವುದು ಬಹಳ ಕಷ್ಟ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಎರಡು ಮೂರು ವರ್ಷಗಳಾದಮೇಲೆ ಅಸೆಸ್‌ಮೆಂಟ್ ಮಾಡುವ ರೂಢಿ ಬಂದಿದೆ. ಸಮಜಾಯಿಷಿ ಮಾಡಿ ಕೊಡಬೇಕಾಗಿದೆ. ಹೈದರಬಾದ್ ಪ್ರದೇಶದಲ್ಲಿ ಇನ್ನೂ ರಿಕಾರ್ಡು ತಯಾರುಮಾಡಬೇಕಾಗಿದೆ. ಅಲ್ಲಿಯ ವ್ಯಾಪಾರಸ್ಥರು ಉಪಯೋಗಿಸುವ ಉರ್ದು ಭಾಷೆಯಲ್ಲಿ ಲೆಕ್ಕ ಪತ್ರಗಳನ್ನು ತಿಳಿದುಕೊಂಡು ಕೆಲಸ ಮಾಡುವುದು ಬಹಳ ಕಷ್ಟವಾಗಿದೆ.

	Rs.
Collection from 1-11-1956 to 31-12-1957 ...	34,07,339
Collection-current Demand from 1-4-1957 to 31-12-1957 ...	1,43,98,469
Balance of arrears as on 31-12-1957 ...	63,84,016
Balance of current Demand	35,58,874

Action Taken :—	Rs. in lakhs.
Prosecution launched to the extent of ...	2,37
Recovery certificates issued to the extent of ...	47
Stay Orders ...	13,73,000
Appeals Pending	2,32,000
Write off (recommendation) ...	1,90,000
Departmental action taken ...	38,000 pending
Conviction in the court about ...	4,000

ಅಧ್ಯಕ್ಷರು.—ಈ ವಿವರಗಳನ್ನೆಲ್ಲಾ ಸದಸ್ಯರಿಗೆ ಒದಗಿಸಿದರೆ ಚೆನ್ನಾಗಿರುತ್ತದೆ. ಈ D.C.B. Statement ಎಲ್ಲ ಸದಸ್ಯರಿಗೆ ಸರ್ಕ್ಯುಲೇಟ್ ಮಾಡಿದರೆ ಉತ್ತಮವಾಗುತ್ತದೆ. ಅದರಿಂದ ಎಲ್ಲರಿಗೆ ಉಪಯೋಗವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—D.C.B. statement ಕೊಡುತ್ತೇನೆ. ಅಧಿಕಾರಿಗಳು ಬಾಕಿ ಹಣವನ್ನು ವಸೂಲು ಮಾಡುತ್ತಿದ್ದಾರೆ. ಬಾಕಿ ವಸೂಲು ಮಾಡುವುದನ್ನು ದಯಮಾಡಿಟ್ಟು ನಿಲ್ಲಿಸಿರಿ ಎಂದು ಸದಸ್ಯರು ಟೆಲಿಗ್ರಾಂ ಕಳಿಸುತ್ತಿದ್ದಾರೆ. ಈ ರೀತಿ ದಯವಿಟ್ಟು ಬಾಕಿ ವಸೂಲು ಮಾಡುವುದನ್ನು ನಿಲ್ಲಿಸಿ ಎಂದು ಟೆಲಿಗ್ರಾಮ್ ಕಳಿಹಿಸಿಕೊಡುವುದು ಬೇಡ. ಅದನ್ನು ನಿಲ್ಲಿಸಬೇಕು. ಬಾಕಿಯನ್ನು ವಸೂಲು ಮಾಡುವುದರ ಸಂಬಂಧದಲ್ಲಿ ಸದಸ್ಯರು ಸರಕಾರದೊಡನೆ ಸಹಕರಿಸಬೇಕು. ಈಗಾಗಲೇ 30-40 ಸಾವಿರ ರೂಪಾಯಿಗಳವರೆಗೆ ಸ್ಟೇ ಆರ್ಡರ್ ಆಯಿತು. ಆದರೆ ಈಗ ಟೆಲಿಗ್ರಾಮು ಬಂದರೂ ಸುಮ್ಮನೇ ಇರುತ್ತೇವೆ. ಯಾವ ಕ್ರಮ ತೆಗೆದುಕೊಂಡಿಲ್ಲ.

ಒಬ್ಬ ಸದಸ್ಯರು.—ಟೆಲಿಗ್ರಾಮ್ ಯಾರು ಕೊಟ್ಟಿದ್ದಾರೆ, ಸ್ವಾಮಿ, ?

ಶ್ರೀ ಟಿ. ಮರಿಯಪ್ಪ.—ಹೀಗೆಯೇ ಇದ್ದಾರೆ, XYZ. ಅವರ ಹೆಸರುಗಳನ್ನು disclose ಮಾಡುವುದಿಲ್ಲ. ನಿಲ್ಲಿಸಿ ಎಂದು ಹೇಳುವದರಲ್ಲಿ ಅಷ್ಟೇನು ತಪ್ಪು ಇಲ್ಲ. ಅದು ಮುಖ್ಯವಲ್ಲ. ಆದರೆ ಅವರ intention ಏನಿದೆ ನೋಡಿ. ಹಣ ಕೊಡಲು ಶಕ್ತಿ ಇದ್ದರೂ ಹಣ ಕೊಡುವುದಕ್ಕೆ ಮನಸ್ಸಿಲ್ಲ. ಒಂದು ವೇಳೆ ನಾವೇನಾದರೂ ಹಾಗೆ ಮಾಡಿದರೆ ವ್ಯಕ್ತಿ ನೋಡಿ ಮಣೆ ಹಾಕುತ್ತಾರೆಂದು ಜನರು ನಮಗೆ ದೂಷಣೆ ಕೊಡುತ್ತಾರೆ.

ಒಬ್ಬ ಸದಸ್ಯರು.—ಯಾವ area ದಿಂದ ಟೆಲಿಗ್ರಾಂ ಬಂದಿದೆ ಹೇಳುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಹೊಸ ಮೈಸೂರು ರಾಜ್ಯದಲ್ಲಿಯ area ದಿಂದ ಬಂದಿದೆ.

ದಯವಿಟ್ಟು ಸದಸ್ಯರು ನಮಗೆ ರಚನಾತ್ಮಕ ಸಲಹೆ ಕೊಡಬೇಕು. ಬಡ್ಜೆಟ್ ಮೆಮೊರಾಂಡಂನಲ್ಲಿ ಅನೇಕ ವಿಷಯಗಳನ್ನು ಕೊಟ್ಟಿದೆ. ಅವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಬೇರೆ ಬೇರೆ ಕಡೆಗೆ ಪೆನ್ಸಿಲ್ ಗುರುತು ಹಾಕಿ ಬರೆದುಕೊಳ್ಳಬೇಕು. ನಾನು ಈ ಸಭೆಯಲ್ಲಿದ್ದು 30 ವರ್ಷಗಳಾದುವು. ಎಲ್ಲಾ ವಿಷಯವನ್ನು ಸೂಕ್ಷ್ಮವಾಗಿ ಅಭ್ಯಾಸಮಾಡಿ ಮಾತನಾಡಬೇಕು. ಬಡ್ಜೆಟ್ ಪೇಜು 10ರಲ್ಲಿ ಈ ಅಂಕಿ ಅಂಶಗಳನ್ನು ಕೊಟ್ಟಿದೆ. T.A. ಮತ್ತು D.A. ವಿವರಕೊಟ್ಟಿದೆ. ಬುದ್ಧಿವಂತಿಕೆಯಿಂದ ಯೋಚನೆ ಮಾಡಿನೋಡಬೇಕು. ಯಾವುದನ್ನು ನೋಡದೆ assets ಗಿಂತ liabilities ಜಾಸ್ತಿಯಾಗಿದೆ ಎಂದು ಹೇಳಿದರೆ ಏನು ಪ್ರಯೋಜನವಾಗುತ್ತದೆ ? ದಕ್ಷತೆಯಿಂದ ಬಡ್ಜೆಟ್ ಮೆಮೋರಾಂಡಂ ನೋಡಬಾರದೆ ? Should they not be fair to us ? ಸುಲಭವಾಗಿ ತಿಳಿಯುವ ಹಾಗೆ ಎಲ್ಲ ವಿವರಗಳನ್ನು ಕೊಟ್ಟಿದ್ದೇವೆ. ತುಂಗಭದ್ರಾ, ಘಟಪ್ರಭಾ ಯೋಜನೆಗಳ ಅಸೆಟ್ಸ್ ವಿವರ ಬಂದಿಲ್ಲ. If you run us down, tomorrow somebody will run you down. ಸ್ಟೇಟ್ ರನ್ ಡೌನ್ ಮಾಡುವುದು ಒಳ್ಳೆಯದಲ್ಲ. But you should not run down a state, because if we raise a loan, what should happen ? ನಮಗೆ ಶಕ್ತಿ ಇಲ್ಲ, ದೌರ್ಬಲ್ಯವಿದೆ ಎಂದು ಬೇಕಾದರೆ ಹೇಳಬಹುದು. ನಮ್ಮ ರಾಜ್ಯದ ಆರ್ಥಿಕಪರಿಸ್ಥಿತಿ ಸುಭದ್ರತೆಯಿಂದ ಕೂಡಿದೆ. ಆದರೆ ನಾವು ನಮ್ಮ ಮಿತಿಯನ್ನು ಮೀರದಂತೆ ವೆಚ್ಚಮಾಡಬೇಕಾಗಿದೆ. ಆದಕಾರಣ ದೇಶದ ಆರ್ಥಿಕ ಭದ್ರತೆಯನ್ನು ಕಾಪಾಡೋಣ. ಬಡ್ಜೆಟ್ ಮೇಲೆ ಮಾತನಾಡುವುದಾದರೆ ಶ್ರೀಮಾನ್ ಮಲ್ಲಾರಾಧ್ಯರವರು ಮಾತನಾಡಿದ ರೀತಿ

(ಶ್ರೀ ಟಿ. ಮರಿಯಪ್ಪ)

ಯನ್ನು ಅನುಸರಿಸಬೇಕು. ಅವರು ಬಡ್ಜೆಟ್ಟನ್ನು ಆಳವಾಗಿ ಅಭ್ಯಾಸಮಾಡಿ ಅಂಕಿ ಅಂಶಗಳನ್ನು ವಿವರಿಸಿ ಸೂಚನೆಗಳನ್ನೂ ಸಲಹೆಗಳನ್ನೂ ಕೊಟ್ಟಿದ್ದಾರೆ. ಈ ರೀತಿಯಾಗಿ ಮಾತನಾಡಿದರೆ ಒಳ್ಳೆಯದಾಗುತ್ತದೆ. ಬಿಕಾನೀರ್ ಬ್ಯಾಂಕು, ಬೊಂಬಾಯಿ ಸರಕಾರಕ್ಕೆ ಕೊಡದೆ ನಮಗೆ ಲೋನ್ ಕೊಟ್ಟಿದೆ, 75 ಲಕ್ಷ ರೂಪಾಯಿ ನಮ್ಮ ಸರಕಾರದ ಲೋನ್‌ನಲ್ಲಿ investment ಮಾಡಿದೆ. ಇದು ನಮ್ಮ ರಾಜ್ಯದ ಹಣಕಾಸಿನ ಭದ್ರತೆಯನ್ನು ತೋರಿಸುತ್ತದೆ.

ಶ್ರೀ ಕೆ. ಕೆಂಚಪ್ಪ.—ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ತೋರಿಸಿರತಕ್ಕ ಅಸೆಟ್ಸಿಗಿಂತ ಎಕ್. ಇ. ಎಸ್. ಬ್ಯಾಂಕಿನಲ್ಲಿ ತೋರಿಸಿರತಕ್ಕ ಅಸೆಟ್ಸ್ ಹೆಚ್ಚಿದೆ. ಅದು ಹೇಗೆ ಹೇಳಿ ?

ಶ್ರೀ ಟಿ. ಮರಿಯಪ್ಪ.—ಸ್ಟೇಟನ್ನು ಮಾತ್ರ ರನ್‌ಡೌನ್ ಮಾಡಬೇಡಿ. ಬಡ್ಜೆಟ್ ಏನಾದರೂ ಡಿಫಿಸಿಟ್ ಆದರೆ, ಆಗ ಕ್ರಿಟಿಸೈಜ್‌ಮಾಡಿ, ಪರವಾಗಿಲ್ಲ.

ಕೊನೆಯಲ್ಲಿ ಮಾನ್ಯಸದಸ್ಯರೆಲ್ಲರೂ ನಾನು ಖಾಯಿಲೆಯಿಂದ ಜಾಗ್ರತೆಯಾಗಿ ಗುಣಮುಖನಾಗಬೇಕೆಂದು ಕೋರಿದ್ದಕ್ಕೆ, ಎಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದು ಕ್ಲಾರಿಫಿಕೇಷನ್, ಸ್ವಾಮಿ.

ಅಧ್ಯಕ್ಷರು.—ಈಗ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಅರ್ಥಸಚಿವರು ಆರೋಗ್ಯವಾಗಿಲ್ಲ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಅವರು ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ನಿಂತಿದ್ದಾರೆ. ಕ್ಲಾರಿಫಿಕೇಷನ್ ಕೇಳುವುದರಲ್ಲಿ ಏನೂ ತಪ್ಪು ಇಲ್ಲ. ಹಣಕಾಸಿನ ಮಂತ್ರಿಗಳು ಅನಾರೋಗ್ಯದ ಕಾರಣದಿಂದ ಮಧ್ಯೇ ಮಧ್ಯೇ ಉತ್ತರ ಹೇಳದೆ ಇದ್ದರೂ, ಇತರ ಮಂತ್ರಿಗಳು ಯಾರಾದರೂ ಉತ್ತರ ಕೊಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಈ ವರ್ಷದ ಬಡ್ಜೆಟ್ ಮೆಮೊರ್ಯಾಂಡಂನಲ್ಲಿ ಪುಟ 12ರಲ್ಲಿ ಯೂನಿಯನ್ ಎಕ್ಸೈಜು ಡ್ಯೂಟೀಸ್, ರಸೀಟ್ ಸೈಡಿನಲ್ಲಿ additional duties of excise ಎಂಬ ಬಾಬಿನಲ್ಲಿ 136.27 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ ಮತ್ತು ಪುಟ 23ರಲ್ಲಿ ಸೇಲ್ಸ್‌ಟ್ಯಾಕ್ಸ್ ಹೆಡ್ಡಿನಲ್ಲಿಯೂ ಕೂಡ ರೆವಿನ್ಯೂ ಬಾಬಿನಲ್ಲಿ additional duties of excise in lieu of Sales-tax ಗೂ 136·27 ಲಕ್ಷ ರೂಪಾಯಿಗಳನ್ನು ತೋರಿಸಿದ್ದಾರೆ. ಇದರ ಅರ್ಥವೇನು ?

ಅಧ್ಯಕ್ಷರು.—ಶ್ರೀಮಾನ್ ರಾಜಯ್ಯಶೆಟ್ಟರು ಅದನ್ನೇ ಕೇಳಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಅದೇನೂ ಡಬ್ಬಲ್ ಎಂಟ್ರಿ ಅಲ್ಲ. We expect more revenue. ಇದರಿಂದ ನಮಗೆ ಐದುಕೋಟಿ 88 ಲಕ್ಷ ಚಿಲ್ಲರೆ ಆದಾಯ ಬರುತ್ತದೆ. ಇನ್ನೂ ಜಾಸ್ತಿ ಆದಾಯ ಬರುತ್ತದೆಂದು ಆ ರೀತಿ ತೋರಿಸಿದ್ದೇವೆ.

Sri C. K. RAJAIAH SETTY.—The Hon'ble Minister has not replied to that point.

Sri T. MARIAPPA.—We expect more revenue and also . . . .

Sri C. K. RAJAIAH SETTY.—Now The Hon'ble Minister says that he expects more revenue which is different from what he said while speaking on the Sales Tax (Amendment) Bill. I do not know how he can say something different from what has been given

*Sri B. VAIKUNTA BALIGA (Minister for Labour and Legal Affairs).—Sir, I have heard many debates on the Budget but this has been most lively and interesting with plenty of details. I would have loved to refer to various points in greater detail but in view of the fact that there is sufficient explanation rendered and in view of the paucity of the time that is available, I propose to be very brief.

My friend Sri Mariappa has rendered all the explanation that is necessary with regard to the finances of the State and also with regard to various items of criticisms that were levelled against Government. I may only say further that so far as the present capacity of the State is concerned either with regard to internal resources or by way of raising loans, it is certainly much better than what it was in the previous years. I may also say that with regard to the existing fiscal laws, as has already been mentioned, they have not been in operation for the last 12 months.

There are various enterprises which have been taken up which will lead to better life and better facilities.

I would have referred to certain items in greater detail but since they are likely to be raised during the course of the debate on Demands I am not doing so. I must not, however, fail to say that even today when compared with other sister States the taxation that is prevailing in the Mysore State is low either with regard to land revenue or water rates and we are lagging behind. But it is not my suggestion that we should immediately collect more taxes from the people. I must certainly not fail to mention that there is that background which must not be forgotten.

I will now proceed to refer to one or two items which particularly touch my portfolio. On the 5th of April, in the course of the debate, my friend Sri Arumugham appears to have

observed that in the appointment of Government pleaders one supposed to be a junior of mine has been appointed. He could have asked me and got from me further details. I am sure he will have the same affection for me as before and will continue to have greater caution before making such a statement. No pleader who has ever been my junior has been appointed as Government Pleader. I have a number of juniors but none of them has been appointed as Government pleader. I do not know which particular individual he had in his mind. To say that a particular individual among the three persons was at any time my junior is farthest from the truth. It would have been very wise and proper if he had ascertained the facts before saying on the floor of the House that the Minister for Labour had chosen to appoint a junior of his own to work as a Government Pleader.

AN HON'BLE MEMBER.—What is wrong ?

Sri B. VAIKUNTA BALIGA.—Sir, a question is put : what is wrong ? If the insinuation is there it is wrong ; it is a wrong premise. When the premises are wrong then the inference is equally wrong.

I must not fail to refer to one more aspect, *i.e.*, what my friend Sri M. C. Narasimhan appears to have said that he had heard something with regard to the Cabinet secret said to have been divulged by me. Here again he is in as wrong a position as my friend Sri Arumugham. I will leave it at that.

Sri C. M. ARUMUGHAM.—How many Government pleaders the Hon'ble Minister has appointed ?

Sri B. VAIKUNTA BALIGA.—I have appointed three Government pleaders none of whom has ever been my junior. The gravamen of the charge that a junior of mine has been appointed as a Government pleader is entirely wrong and I repudiate it. I do not want to use a stronger language.

Lastly I wish to refer to what my friend Sri Srinivas Shetty did say that there was something wrong with the party. I do not know what he had in his mind. Evidently he wishes that the party should not be in power. If that is his desire he can certainly go on carrying on propaganda in a proper place and in a proper manner.

Sri V. SRINIVAS SHETTY.—Very legitimate.

Sri B. VAIKUNTA BALIGA.—He thinks it is very legitimate. Again he takes a wrong premise particularly when he says that there is no discipline. He will have to prove it. The proof of the pudding is in the eating. When the voting takes place every member of the party like a disciplined soldier will support the Budget and see that we go on.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಸ್ವಾಮಿ ಅಧ್ಯಕ್ಷರೇ, ಈಗಾಗಲೆ ಸಾಕಾದಷ್ಟು ಸದಸ್ಯರು ಎದುರು ಪಕ್ಷದಿಂದ ಮಾತನಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಸಮರ್ಪಕವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಅನೇಕ ಜನ ಸದಸ್ಯರು ಒಳ್ಳೆಯ ಯೋಗ್ಯವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಬಹು ಜನ ಸದಸ್ಯರು ಈ ಸಭೆಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಕೆಲವು ಸದಸ್ಯರು ಅದಕ್ಕೆ ಅವಕಾಶ ಕೊಡಲಿಲ್ಲವಲ್ಲಾ ಎಂದು ವ್ಯಸನವಾದರೂ ಅದನ್ನು ಉಳಿಸಿಕೊಂಡು ಬರುತ್ತಾರೆಂದು ನಂಬಿ ಆ ಬಗ್ಗೆ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶ್ರೀನಿವಾಸಶೆಟ್ಟರು ನೀವೆಲ್ಲಾ ಒಡೆದು ಹೋಗುತ್ತೀರಿ, ಕಾಂಗ್ರೆಸ್ ಸಂಸ್ಥೆ ಉಳಿಯುವುದಿಲ್ಲ, ಎಲ್ಲಾ ಹಾಳಾಗುತ್ತಿದ್ದೀರಿ, ನಾವೂ ಹಾಳಾಗುತ್ತಿದ್ದೇವೆ, ನೀವೂ ಹಾಳಾಗುತ್ತಿದ್ದೀರಿ ಎಂದು ಹೇಳಿದರು. ಅವರ ವಿಚಾರದಲ್ಲಿ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾವಿಂದು ಪ್ರಜಾಪ್ರಭುತ್ವದಲ್ಲಿದ್ದೇವೆ. ನಾವು ಒಡೆದರೂ ವಿರೋಧ ಪಕ್ಷ ಒಡೆಯಬಾರದು. ತಮ್ಮಗಳ ಸೇವೆಯಿಂದ, ಶಕ್ತಿಯಿಂದ, ಸೂಕ್ತ ಕಾರ್ಯಕ್ರಮದಿಂದ ತಾವು ಬಲಗೊಳ್ಳಬೇಕೆಂಬುದು ನನ್ನ ಇಷ್ಟ. ಆ ಒಂದು ದೃಷ್ಟಿಯಿಂದ ವಿರೋಧ ಪಕ್ಷದವರು ಒಡೆಯಬಾರದು, ಪಕ್ಷ ಚೆನ್ನಾಗಿರಬೇಕು ಎಂದು ಹಾರೈಸುತ್ತೇನೆ. ಏಕೆಂದರೆ ಪ್ರಜಾಪ್ರಭುತ್ವ ಯೋಗ್ಯ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಟೀಕೆ ಇರಬೇಕು, ವಿಧಾಯಕವಾಗಿ ಟೀಕೆ ಮಾಡಬೇಕು ಮತ್ತು ಟೀಕೆ ಮಾಡಿದರೆ ಸಾಕಾದಷ್ಟು ಯೋಗ್ಯವಾಗಿರಬೇಕು. ಅಲ್ಲದೆ ಒಟ್ಟುಗೂಡಿ ಕೆಲಸ ಮಾಡಬೇಕು. ಈ ದೃಷ್ಟಿಯಿಂದ ವಿರೋಧಪಕ್ಷ ಬಲವಾಗಲೆಂದು ಹಾರೈಸುತ್ತೇನೆ. ಆಗುವುದು ಬಿಡುವುದು ಅವರ ಯೋಗ್ಯತೆಯನ್ನನುಸರಿಸಿ ಆಗತಕ್ಕದ್ದಾಗಿದೆ. ನಮ್ಮ ವಿಚಾರದಲ್ಲಿ ಬಹುಶಃ ಇತ್ತೀಚಿನ ಪತ್ರಿಕೆಗಳನ್ನೋದಿ "ನೀವು ಒಡೆದು ಹೋಗುತ್ತೀರಿ" ಎಂದು ಹೇಳಿದ್ದಾರೆ. ಹಾಗಾಗಲೆಂಬ ಒಂದು ಆಸೆ ಅವರಲ್ಲಿರುವುದರಿಂದಲೋ ಏನೋ ಹಾಗೆ ಅವರು ಒಂದು ಅಭಿಪ್ರಾಯ ಸೂಚಿಸಿ ತೀರಾ ಕಟುವಾಗಿ ಟೀಕೆ ಮಾಡುವುದಕ್ಕೆ ಹೋಗಿರಬೇಕು. ಬಹುಶಃ ಹಾಗಿರಲಿಕ್ಕಿಲ್ಲ. ಈ ದಿವಸ ಕಾಂಗ್ರೆಸ್ ಪಕ್ಷ ಬಿಟ್ಟರೆ ಬೇರೆ ಬಲವಾದ ಪಕ್ಷವಿಲ್ಲ, ದೇಶದಲ್ಲಿ ಕೇಯೋಸ್—ಅರಾಜಕತೆ ಬಂದು ಹೋದೀತು. ನಾವು ನಾವು ಕೌರವ ಪಾಂಡವರಂತೆ

(ಶ್ರೀ ಎಸ್. ನಿಜಲಿಂಗಪ್ಪ)

ವ್ಯಾಜ್ಯವಾಡಬಹುದು. ಆದರೆ ಬೇರೆಯವರೊಡನೆ ಜಗಳವಾಡಬೇಕಾದ ಸಂದರ್ಭವೊದಗಿದರೆ 105 ಜನ ಕಾಂಗ್ರೆಸ್ ಸದಸ್ಯರೆಲ್ಲಾ ಒಟ್ಟಿಗೆ ಸೇರುವರೆಂಬುದನ್ನು ಯಾರೂ ಮರೆಯಬಾರದು. ಈ ದಿವಸ ನಾನು ಮುಖ್ಯಮಂತ್ರಿಯಾಗಿರಬಹುದು. ನಾಳೆ ಇನ್ನೊಬ್ಬರು ನನ್ನ ಸ್ಥಾನಕ್ಕೆ ಬರ ಹುದು. ಹೇಗಾದರೂ ಕಾಂಗ್ರೆಸ್ಸಿನವರೇ ಈ ಸ್ಥಾನದಲ್ಲಿರುತ್ತಾರೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಮತ್ತೆ ಕೆಲವು ಟೀಕೆಗಳು ಬಂದಿವೆ. ಏಳು ಗಂಟೆಯಾಗುತ್ತಾ ಬಂದಿರುವುದರಿಂದ ಸೂಕ್ಷ್ಮವಾಗಿ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಡಿಸ್ಪೋಸಲ್ ಆಫ್ ಪೇಪರ್ಸ್ ಬಹಳ ತಡವಾಗುತ್ತಿದೆ ಯೆಂಬ ಆಕ್ಷೇಪವಿದೆ. ಎಷ್ಟೋ ಕಷ್ಟದಿಂದ ಕೆಲಸ ಮಾಡಬೇಕಾಗಿದೆಯೆಂದು ಈಗಾಗಲೇ ಮಾನ್ಯ ಸ್ನೇಹಿತರನೇಕರು ಹೇಳಿದ್ದಾರೆ. ಐದು ಭಾಗಗಳು ಸೇರಿ ಐದು ಕಾನೂನುಗಳು ಒಂದಾಗಬೇಕಾವರೆ, ಐದು ಕಡೆಯ ರಿಕಾರ್ಡುಗಳು ಬರುವ ಆ ಸಂದರ್ಭದಲ್ಲಿ ಬಹುಶಃ ಶ್ರೀ ಟಿ. ಮರಿಯಪ್ಪನವರು ಹೇಳಿರುವ ಮಾತನ್ನು ಒಪ್ಪಿಕೊಂಡು ನಾವು ಮಾಡಿರುವ ಕೆಲಸ ಬಹಳ ಅಗಾಧವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟೇ ಅಲ್ಲದೆ ಈ ಸಂದರ್ಭದಲ್ಲಿ ಈ ಸಭೆಯ ಎದುರು ಪಕ್ಷಗಳ ಸದಸ್ಯರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ಮತ್ತು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಐದು ಭಾಗ ಒಂದಾಗುವಾಗ ಸಂಬಂಧಪಟ್ಟ ಕಾರ್ಯಗಳಲ್ಲಿ, ಉದ್ಯಮಗಳಲ್ಲಿ ಎಲ್ಲರ ಸಹಾಯ, ಸಹಕಾರ ದೊರಕಿದೆಯೆಂದು ಕೃತಜ್ಞತೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಬಹಳ ಕಷ್ಟವಾದ ಕೆಲಸ. ಈ ಐದು ಭಾಗಗಳ ಕಾನೂನು, ಭಾಷೆ ಮುಂತಾದ್ದರಲ್ಲಿ ವ್ಯತ್ಯಾಸವಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಆದರೆ ಆರು ತಿಂಗಳುಗಳಿಂದ ದಕ್ಷತೆಯಿಂದ ಕೆಲಸ ಕಾರ್ಯವಾಗುತ್ತಿದೆ, ಏನೂ ತಡವಾಗುತ್ತಿಲ್ಲ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಮೊದಲೆಷ್ಟು ಕೆಲಸವಾಗುತ್ತಿತ್ತೋ ಅದರ ಎರಡರಷ್ಟು ಕೆಲಸ ಸೆಕ್ರೆಟೇರಿಯಟ್‌ನಲ್ಲಿ ಆಗುತ್ತಿದೆ. ಸೆಕ್ರೆಟೇರಿಯಟ್ ಮೆಷೀನರಿ ಸಹ ಈಗ ಸುಧಾರಿತವಾಗಿದೆ. ಅದಕ್ಕೆ ಸುಗಮವಾದ ಮಾರ್ಗವನ್ನನುಸರಿಸಿ ಅಸ್ತಿಭಾರ ಹಾಕಿ ಬುನಾದಿಯಾಗಿ ಒಳ್ಳೆಯ ವ್ಯವಸ್ಥೆ ಮಾಡಲಾಗಿದೆ.

ಆಡಳಿತದಲ್ಲಿ ದಕ್ಷತೆಯಿಲ್ಲವೆಂದು ನನ್ನ ಸ್ನೇಹಿತರು ಹೇಳಿದ್ದಾರೆ. ದಕ್ಷತೆಯಿರಲಿ ಇಲ್ಲದಿರಲಿ ಆ ರೀತಿ ಹೇಳದಿದ್ದರೆ ಅವರ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಅದೊಂದು ಹಳೆಯ ವಾಡಿಕೆ, ಯಾವಾಗಲೂ ಹಾಗೆ ಹೇಳುವುದು ಪೂರ್ವದಿಂದಲೂ ಬಂದಿರುವುದು. ವಿರೋಧಪಕ್ಷ ಹಾಗೆ ಹೇಳದಿದ್ದರೆ ಅದಕ್ಕೂ ಸಮಾಧಾನವಾಗುವುದಿಲ್ಲ, ಕೇಳದಿದ್ದರೆ ನಮಗೂ ಸಮಾಧಾನವಾಗುವುದಿಲ್ಲ; ಈ ಸ್ಥಿತಿಯಿದೆ. ಆದ್ದರಿಂದ ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಒಬ್ಬ ಒಳ್ಳೆಯ ಚಿತ್ರಗಾರ ಒಂದೇ ತರಹದ ಎರಡು ಸುಂದರ ಚಿತ್ರಗಳನ್ನು ಬರೆದ. ಮೊದಲು ಒಂದನ್ನು ಮನೆಯ ಮುಂದಿಟ್ಟು ಅದರಲ್ಲಿ ಬಹಳ ಯೋಗ್ಯವಾದ ಭಾಗ ಯಾವುದು, ಕಣ್ಣೇ, ಮೂಗೇ, ಕಾಲೇ, ಕೈಯೇ ಎಂಬುದನ್ನು ಗುರುತುಹಾಕಿ ಎಂದು ಹೇಳಿದ. ಬಹಳ ಒಳ್ಳೆಯ ಭಾಗ ಯಾವುದೆಂಬುದನ್ನು ಸೂಚಿಸುವಂತೆ ಹೇಳಿದ. ಎಲ್ಲರೂ ಬಂದರು, ಸಹಸ್ರಾರು ಜನ ನೋಡಿದರು. ಅವರಿಗೆ ತೋರಿದ ಕಡೆ ಗುರುತು ಹಾಕಿದರು. ಬೆಳಗ್ಗೆಹೋಗಿ ನೋಡಿದರೆ ಆ ಚಿತ್ರದ ಪ್ರತಿಯೊಂದು ಭಾಗಕ್ಕೂ ಒಂದೊಂದು ಗುರುತು ಹಾಕಿ ಎಲ್ಲಾ ಚೆನ್ನಾಗಿದೆಯೆಂದು ಸೂಚಿಸಿದ್ದರು. ಮತ್ತೆ ಅದೇ ಚಿತ್ರದ ಇನ್ನೊಂದು ಕಾಪಿಯನ್ನು ಮನೆಯ ಮುಂದಿಟ್ಟು ಕೆಟ್ಟ ಭಾಗ ಗುರುತು ಹಾಕಿ ಎಂದು ಹೇಳಿದ. ಯಥಾ ಪ್ರಕಾರ ಬೆಳಗ್ಗೆ ಹೋಗಿ ನೋಡಿದಾಗ ಒಳ್ಳೆಯದೆಂದು ಸೂಚಿಸಿದ್ದ ಭಾಗಗಳಗೆಲ್ಲಾ ಕೆಟ್ಟದ್ದೆಂದು ಗುರುತುಮಾಡಿದ್ದರು. ಹೀಗೆ ಯಾವ ದೃಷ್ಟಿಯಿಂದ ನೋಡಿದರೆ ಆ ರೀತಿ ಕಾಣುತ್ತದೆ. ಒಳ್ಳೆಯ ದೃಷ್ಟಿಯಿಂದ ನೋಡಿದರೆ ಒಳ್ಳೆಯದಾಗಿಯೇ ಕಾಣುತ್ತದೆ, ಕೆಟ್ಟ ದೃಷ್ಟಿಯಿಂದ ನೋಡಿದರೆ ಕೆಟ್ಟುದಾಗೆಯೇ ಕಾಣಿಸುತ್ತದೆ. ಕೆಲವರು ಕೇಳಿದರೂ ಕೇಳದವರ ಹಾಗಿರುತ್ತಾರೆ, ನೋಡದೆ ಕಣ್ಣು ಮುಚ್ಚಿಕೊಂಡಿರುತ್ತಾರೆ. ಏನೇ ಮಾಡಿದರೂ ಕೆಲವರ ಮನಸ್ಸಿಗೆ ಸಮಾಧಾನವಾಗುವುದಿಲ್ಲ; ಮಾಡಿರುವುದನ್ನು ಎದ್ದು ನೋಡುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ದಕ್ಷತೆಯ ವಿಚಾರದಲ್ಲಿ ನಾನು ಇಷ್ಟು ಅರಿಕೆಮಾಡುತ್ತೇನೆ: ನಾವೆಲ್ಲಾ $1\frac{1}{2}$ ವರ್ಷದಿಂದ ಬಹಳ ದಕ್ಷತೆಯಿಂದ ಕೆಲಸ ಮಾಡಿದ್ದೇವೆಂದು ಹೇಳುವುದಿಲ್ಲ. ಇನ್‌ಎಫಿಷಿಯೆನ್ಸಿಯನ್ನು ಒಂದೇ ಸಲ ತಪ್ಪಿಸುವುದಕ್ಕಾಗುವುದಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಅದನ್ನು ಹೋಗಲಾಡಿಸುವುದಕ್ಕೆ ಅವಕಾಶವಿದೆ. ಇದಕ್ಕಾಗಿ ಪ್ರತಿ ದಿವಸವೂ ಪ್ರಯತ್ನ ಮಾಡುತ್ತಿದ್ದೇವೆ. ಒಂದು ವಿಚಾರವನ್ನು ಬಹಳ ಸಂತೋಷದಿಂದ ಹೇಳುತ್ತೇನೆ: ಈ ಸರ್ಕಾರದಲ್ಲಿ ದಕ್ಷತೆ ದಿನೇ ದಿನೇ ಹೆಚ್ಚುತ್ತಿದೆ, ಮೊದಲು ಆರು ತಿಂಗಳಲ್ಲಾಗುತ್ತಿದ್ದ ಕೆಲಸ ಈ ದಿವಸ ಎರಡು ತಿಂಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗಿದೆ. ಇದು ಹೆಮ್ಮೆಯ ವಿಷಯ.

ಮತ್ತೊಂದು ವಿಚಾರ ಎಲ್ಲ ಮಿತ್ರರೂ ಪ್ರಸ್ತಾಪ ಮಾಡಿರುವುದು ಸೀನಿಯಾರಿಟಿ ಲಿಸ್ಟಿಗೆ ಸಂಬಂಧಪಟ್ಟಿದೆ. ನೌಕರರು, ಅಧಿಕಾರಿಗಳು, ದೊಡ್ಡ ಸಂಬಳದವರು, ಕಡಮೆ ಸಂಬಳದವರು ಎಲ್ಲರೂ ಕೂಡ ಸಂಬಳ ವಗೈರೆ ವಿಚಾರಗಳಲ್ಲಿ ವ್ಯತ್ಯಾಸವಿದ್ದರೂ ಸಹಕರಿಸಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಹಳೆಯ ಮೈಸೂರಿನವರು, ಹೊಸದಾಗಿ ಬಂದವರು ಎಂಬ ಭಿನ್ನತೆಯಿಲ್ಲದೆ ಎಲ್ಲರೂ ಒಂದಾಗಿ ಚೆನ್ನಾಗಿ ಕೆಲಸ ನಿರ್ವಹಿಸುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಕೆಲಸದಿಂದ ಸಮಾಧಾನವಾಗಿದೆ, ತೃಪ್ತಿಯಾಗಿದೆ. ಆದರೆ ಬೊಂಬಾಯಿ ಪ್ರಾಂತದಿಂದ ಬಂದಿರುವವರಿಗೆ ಹೆಚ್ಚು ಸಂಬಳ ಬರುತ್ತದೆ. ಹಳೆಯ ಮೈಸೂರಿನವರಿಗೇನು ಅನುಕೂಲಮಾಡಿದ್ದೀರಿ ಎಂದು ಹಳೆಯ ಮೈಸೂರಿನವರು ಆಡಿಕೊಳ್ಳುತ್ತಾರೆ. ಮೈಸೂರಿನಲ್ಲಿದ್ದ ಹಳಬರಿಗೆ ಅನುಕೂಲ ಮಾಡಿದ್ದಾರೆ, ಹೊಸದಾಗಿ ಹೈದರಾಬಾದ್, ಬೊಂಬಾಯಿ, ಕೊಡಗು ಮುಂತಾದ ಕಡೆಗಳಿಂದ ಬಂದವರಿಗೇನೂ ಇಲ್ಲ ಎಂದು ಹೊಸ ಪ್ರದೇಶದವರು ಆಡಿಕೊಳ್ಳುತ್ತಾರೆ. ಈ ರೀತಿ ಒಂದು ಜಿಜ್ಞಾಸೆಯಿದೆ. ಇದನ್ನು ಆದಷ್ಟು ಜಾಗ್ರತೆ ತೊಡೆದು ಹಾಕಬೇಕೆಂಬುದೇ ಸರ್ಕಾರದ ಉದ್ದೇಶ. ಆ ದೃಷ್ಟಿಯಿಂದ ನಾವು ಅಧಿಕಾರವಹಿಸಿಕೊಂಡ ಒಂದು ವಾರದಲ್ಲಿ ಒಂದು ಸಮಿತಿ ಏರ್ಪಾಡುಮಾಡಿ ಹೊಸದಾಗಿ ಇದನ್ನೆಲ್ಲಾ ಪರಿಶೀಲಿಸುತ್ತಿದ್ದೇವೆ. ಗೆಜೆಟೆಡ್ ಮತ್ತು ನಾನ್-ಗೆಜೆಟೆಡ್ ಆಫೀಸರುಗಳ ವಿಚಾರವನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಈಗ ಆಯಾ ಪ್ರದೇಶಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಸೀನಿಯಾರಿಟಿಯನ್ನು ಡಿಸ್ಟರ್ಬ್‌ಮಾಡಿಲ್ಲ. ಒಟ್ಟಿನಲ್ಲಿ ಸಂಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಸೀನಿಯಾರಿಟಿ ಲಿಸ್ಟ್ ತಯಾರಾಗುತ್ತಿದೆ. ಈ ಸಂದರ್ಭದಲ್ಲಿ ಅನೇಕರಿಗೆ ಅನುಮಾನ ಬಂದಿದೆ. ಕೆಲವು ತತ್ತ್ವಗಳ ಮೇಲೆ ಒಂದು ವ್ಯವಸ್ಥೆ

ಮಾಡಿದ್ದೇವೆ. ಪ್ರಶ್ನೋತ್ತರಗಳ ಕಾಲದಲ್ಲಿ ಈ ವಿಚಾರವನ್ನು ಅನೇಕ ಸಾರಿ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ಅದನ್ನನುಸರಿಸಿ ಸೀನಿಯಾರಿಟಿ ಲಿಸ್ಟ್ ಮಾಡಿದೆವು. ಹಾಗೆ ಮಾಡಿದ ಮೇಲೆ ಎಲ್ಲಾ ಅಧಿಕಾರಿಗಳಿಗೂ, ನೌಕರರಿಗೂ, 'ಈರೀತಿ ಮಾಡಿದ್ದೇವೆ, ನಿಮ್ಮ ಅಭಿಪ್ರಾಯಗಳನ್ನು ಹೇಳಬೇಕು, ತಕರಾರಿದ್ದರೆ ಸೂಚಿಸಬೇಕು. ಎಂದು ಅವಕಾಶ ಕೊಟ್ಟೆವು ಆ ಮೇಲೆ ತಕರಾರನ್ನು ವಿಚಾರಮಾಡಿ ನಾವಾಗಲಿ ಅಥವಾ ಸೆಕ್ರೆಟೇರಿಯಟ್ ಕಮಿಟಿಯಾಗಲೀ ತೀರ್ಮಾನ ಮಾಡುವುದು ಬೇಡ, ಅದನ್ನು ಕೇಂದ್ರಸರ್ಕಾರದ ಉನ್ನತ ಅಧಿಕಾರಿಗಳು ಮಾಡಲಿ ಎಂದು ಪಂಜಾಬಿನಿಂದ ಒಬ್ಬರನ್ನೂ, ಬಂಗಾಳದಿಂದ ಒಬ್ಬರನ್ನೂ ಕರೆಸಿ ಅವರ ಕೈಗೆ ಸೀನಿಯಾರಿಟಿ ಪಟ್ಟಿ ಕೊಟ್ಟು ತಕರಾರಿರುವುದನ್ನು ಕ್ರಮವಾಗಿ ವಿಚಾರ ಮಾಡಿ ತಿಳಿದುಕೊಳ್ಳುವಂತೆ ಅವರಿಗೆ ಸೂಚಿಸಲಾಯಿತು. ಅವರು ಆ ರೀತಿ ತಿಳಿದುಕೊಂಡು, ಬಹುಶಃ ಗೆಜೆಟೆಡ್ ಆಫೀಸರುಗಳ ಪಟ್ಟಿಯನ್ನು ತಯಾರು ಮಾಡಿ ನಮಗೆ ಕಳುಹಿಸುತ್ತಾರೆ. ಅವರು ಕೊನೆಯದಾಗಿ ತೀರ್ಮಾನ ಮಾಡುವುದಿಲ್ಲ. ಸರ್ಕಾರದವರು ಅದನ್ನೆಲ್ಲಾ ಪರಿಗಣಿಸಿ ಏನು ತಕರಾರು ಬಂದಿದೆ ಎಂಬುದನ್ನು ನೋಡಿ ನ್ಯಾಯವಾದ ರೀತಿಯಲ್ಲಿ ಮಾಡಬೇಕೆಂದು ತೀರ್ಮಾನಮಾಡಿಕೊಂಡಿದ್ದೇವೆ. ತಾತ್ಕಾಲಿಕವಾಗಿ ಕೆಲಸ ನಡೆಸುವುದಕ್ಕೆ ಅಲ್ಲಲ್ಲಿ ಕೆಲವು ಅಧಿಕಾರಿಗಳನ್ನು ನಿಯಮಿಸಿಕೊಂಡಿದ್ದೇವೆ. ಪ್ರಮೋಷನ್ ಇತ್ಯಾದಿಗಳನ್ನು ತಾತ್ಕಾಲಿಕವಾಗಿ ಕೊಟ್ಟಿದ್ದೇವೆ. ಎಲ್ಲಾ ಆರ್ಡರ್‌ನಲ್ಲೂ ತಾತ್ಕಾಲಿಕವಾಗಿ ಎಂದು ಬರೆದಿದ್ದೇವೆ. ಹೀಗೆ ಆಗತಕ್ಕ ಸಂದರ್ಭದಲ್ಲಿ ಅಲ್ಲಲ್ಲಿ ಕೆಲವು ಅಸಮಾಧಾನಗಳಿಗೆ ಕಾರಣವಾದರೂ ಕೂಡ ಕೊನೆಯಲ್ಲಿ ಎಲ್ಲರಿಗೂ ಸಮಾಧಾನಕರವಾಗಿರಬೇಕೆಂಬ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದೇವೆ. ನಾನ್ ಗೆಜೆಟೆಡ್‌ಗೂ ಅಷ್ಟೇ, ಗೆಜೆಟೆಡ್‌ಗೂ ಅಷ್ಟೆ. ಈ ರೀತಿ ಕೆಲಸ ನಡೆದುಬರುತ್ತಾ ಇದೆ. ಯಾರಿಗೂ ಅನ್ಯಾಯವಾಗಿಲ್ಲ. ಹೊಸದಾಗಿ ಪೇಸ್ಕೇಲ್ಸ್ ಮಾಡಿದ್ದೇವೆ. ಹೊರಗಡೆಯಿಂದ ಬಂದಿರತಕ್ಕವರಿಗೂ ಅವಕಾಶ ಕೊಟ್ಟಿದ್ದೇವೆ. ಮತ್ತು ಹಳೆಯ ಮೈಸೂರಿನಲ್ಲಿ ಏನು ನೌಕರರ ಸಂಬಳ ಕಡಮೆ ಇತ್ತು ಅದನ್ನು ಜಾಸ್ತಿಮಾಡಿದ್ದೇವೆ. ಇತ್ತೀಚೆಗೆ ಬರಬರುತ್ತಾ ಅನೇಕ ಇಲಾಖೆಗಳಲ್ಲಿ ಜಾಸ್ತಿ ಸಂಬಳಬೇಕೆಂದು ಕೇಳುತ್ತಾ ಇದ್ದಾರೆ. ಅದನ್ನು ಪರಿಗಣಿಸಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಆದ್ದರಿಂದ ನಾನು ಆ ನೌಕರರಿಗೆ ಮತ್ತು ಅಧಿಕಾರಿಗಳಿಗೆ ನಿವೇದನೆ ಮಾಡಿಕೊಳ್ಳುತ್ತೇನೆ; ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಮತ್ತು ನಾವು ಏನು ತೀರ್ಮಾನಮಾಡುತ್ತೇವೆಯೋ ಅದರ ಮೇಲೆ ಕೇಂದ್ರ ಸರ್ಕಾರದವರಿಗೆ ಅಪೀಲು ಹೋಗುವುದಕ್ಕೆ ಅವಕಾಶ ಇದೆ ಎಂದು ಕಾಣುತ್ತದೆ. ಹೀಗಾಗಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ. ನನ್ನ ಸ್ವಂತ ಅಭಿಪ್ರಾಯ ಹೇಳಬೇಕಾಗಿದ್ದರೆ ನಮ್ಮ ದೇಶದಲ್ಲಿ ಸರ್ಕಾರಿ ನೌಕರರ ಸಂಬಳ ಅದರಲ್ಲೂ ಕೆಳದರ್ಜೆ ನೌಕರರ ಸಂಬಳ ಬಹಳ ಕಡಮೆ. ಇನ್ನು ಐದು ಹತ್ತು ವರ್ಷಗಳಲ್ಲಿ ಯಾವುದೇ ಸರ್ಕಾರ ಇರಲಿ, ನೌಕರರ ಸಂಬಳ 100ರೂಪಾಯಿಗಳಿಗಿಂತ ಕಡಮೆ ಇರಬಾರದು ಎಂದು ನನ್ನ ಅಭಿಪ್ರಾಯ. ಅದರಂತೆ ಕೆಲಸಮಾಡಬೇಕೆಂದು ನಮ್ಮ ಸರ್ಕಾರದ ಉದ್ದೇಶ. ಈ ರೀತಿ ಸುಖವಾಗಿರಬೇಕು. ಯಾವ ಜನರ ದುಡಿಮೆಯ ಮೇಲೆ, ಕರ್ತವ್ಯನಿಷ್ಠೆಯ ಮೇಲೆ ಸರ್ಕಾರ ನಡೆಯುತ್ತದೆಯೋ ಆ ಜನರನ್ನು ಯೋಗ್ಯ ರೀತಿಯಲ್ಲಿ ತೃಪ್ತಿಪಡಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಆರೀತಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಯಾರೂ ಅದರಲ್ಲಿ ಅನುಮಾನ ಮಾಡಬಾರದು ಎಂದು ಹೇಳಿ, ಆ ನೌಕರರು ಮತ್ತು ಅಧಿಕಾರಿಗಳು ನಮ್ಮೊಡನೆ ಯಾವ ರೀತಿಯಲ್ಲಿ ಈಗ ಸಹಕಾರ ಮಾಡುತ್ತಿದ್ದಾರೋ ಇದೇ ರೀತಿ ಮುಂದೂ ಮಾಡಬೇಕೆಂದು ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ದಕ್ಷತೆ ಹೇಗೆ ಹೆಚ್ಚಾಗಬೇಕು, ಖರ್ಚೇನಾದರೂ ಕಡಮೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದಕ್ಕೆ ಗೋರ್‌ವಾಲಾ ಅವರನ್ನು ನೇಮಕಮಾಡಿಕೊಂಡಿದ್ದೇವೆ. ಅವರ ವರದಿ ಬಂದ ತಕ್ಷಣ ನೋಡಿಕೊಂಡು ಸೂಕ್ತಕ್ರಮವನ್ನು ಕೈಕೊಳ್ಳುತ್ತೇವೆ.

ಸರ್ಕಾರಿ ಸರ್ವೀಸ್‌ನಲ್ಲಿ ಕೆಲಸಮಾಡುತ್ತಿರುವ ಈ ಅಧಿಕಾರಿಗಳಲ್ಲಿ ಬಹಳ ಲಂಚಕೋರತನ ಇದೆ ಎಂದು ಒಂದು ಟೀಕೆ ಇದೆ. ಬಹುಶಃ ಸರ್ಕಾರ ಎಂದು ಹುಟ್ಟಿತೋ ಅಂದಿನಿಂದ ಈ ದೂರು ಇದೆ ಎಂದು ಕಾಣುತ್ತದೆ. ಔಷಧಿ ಏನೋ ಒಂದೂ ಗೊತ್ತಾಗುವುದಿಲ್ಲ. ಆದರೆ ಕಡಮೆಮಾಡುವುದಕ್ಕೆ ಸಾಧ್ಯವಿದೆ. ಸಿಕ್ಕಾಗ ಬಲಿಹಾಕಿದರೆ—ಗ್ರಾಮ್ಯ ಶಬ್ದ ಉಪಯೋಗಿಸುತ್ತೇನೆ, ಕ್ಷಮಿಸಬೇಕು—ಎಲ್ಲ ಯಾವ ಅಧಿಕಾರಿ ಸಿಕ್ಕುತ್ತಾನೆಯೋ ಅವನನ್ನು ಬಲಿ ಹಾಕಿದರೆ ಅನುಕೂಲವಾಗುತ್ತದೆ ಎಂದು ಅನಿಸುತ್ತದೆ. ಬರಿಯ ಸಣ್ಣ ಸಣ್ಣ ನೌಕರರನ್ನು ಬಲಿ ಹಾಕುವುದಕ್ಕಿಂತ, ದೊಡ್ಡ ದೊಡ್ಡ ನೌಕರರು ಹಾಗೆ ಸಿಕ್ಕಾಗ ಹೆಚ್ಚಿನ ಶಿಕ್ಷೆಕೊಡಬೇಕೆಂದು ನನ್ನ ಅಭಿಪ್ರಾಯ. ಪಾಪ 50ರೂಪಾಯಿ ಸಂಬಳ ಬರತಕ್ಕ ಕಾನ್‌ಸ್ಟೇಬಲ್, ದಫೇದಾರ ಎಂಟು ಆಣೆ ತೆಗೆದುಕೊಂಡು ದೊಡ್ಡ ತಪ್ಪು ಮಾಡುವುದಿಲ್ಲ. 2000ರೂಪಾಯಿ ಸಂಬಳ ಬರತಕ್ಕ ಮನುಷ್ಯ ಅವನ ಆದಾಯಕ್ಕೆ ಅನುಸರಿಸಿ ತೆಗೆದುಕೊಳ್ಳುತ್ತಾನೆ. ಸಾವಿರ, ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡಾಗ ಆ ಮನುಷ್ಯನನ್ನು ಡಿಸ್‌ಮಿಸ್ ಮಾಡುವುದು ಆವಶ್ಯಕ. ಆ ಮನುಷ್ಯನಿಗೆ ಶಿಕ್ಷೆಕೊಡುವುದಕ್ಕೂ ಸಿದ್ಧ. ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ನಾನು ಸದಸ್ಯರನ್ನು ಅತ್ಯಂತ ಕಳಕಳಿಯಿಂದ, ದೈನ್ಯದಿಂದ ಬೇಡಿಕೊಳ್ಳುತ್ತೇನೆ. ಅನೇಕ ಸಲ ಇಂಥ ಮನುಷ್ಯ ಕೆಟ್ಟವನಿರುತ್ತಾನೆ, ಈ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಾನೆ ಎಂದು ಗೊತ್ತಿರುತ್ತದೆ. ಆದರೆ ಅದನ್ನು ನಮ್ಮ ಹತ್ತಿರ ಬಂದು ಹೇಳುವುದಿಲ್ಲ. ಮತ್ತು ಒಂದು ವಿಷಾದದಿಂದ ಹೇಳತಕ್ಕ ವಿಷಯವೆಂದರೆ ಯಾವುದೋ ಒಂದು ಅಭಿಮಾನದಿಂದ ಬಂದು ಹೇಳುವುದೂ ವುಂಟು. ಅವರು ನಮ್ಮ ಸ್ನೇಹಿತರು ಎಂದು ಕೆಲವರು ಒಂದು ಹೇಳುತ್ತಾರೆ, ಹಾಗೆ ಹೇಳುವಾಗ 'ಏನೋ ಬಿಡ್ರಿ ಪಾಪ, ಮಾಡಿದ್ದಾನೆ. ಕೈ ಬಿಡ್ರಿ' ಎಂದು ಹೇಳುವುದಕ್ಕೂ ಬರುತ್ತಾರೆ. ಶ್ರೀಮಾನ್ ವೀರಣ್ಣಗೌಡರು ಅದನ್ನು ಒತ್ತಿ ಒತ್ತಿ ಹೇಳಿದ್ದಾರೆ. ಅದಕ್ಕೆ ಮಾತ್ರ ಸಹಾಯಮಾಡುವುದಕ್ಕೆ ತಾವು ಬರಬೇಡಿ. ನಾನು ಅಧಿಕಾರದಲ್ಲಿ ಇದ್ದರೂ ಸರಿಯೇ, ಇಲ್ಲದೇ ಇದ್ದರೂ ಸರಿಯೇ, ನಾನು ಇರುವವರೆಗೂ ಇಂತಹ ಕೆಲಸಮಾಡಬೇಡಿ. ನಾನು ಅಧಿಕಾರ ಬಿಟ್ಟರೂ ಚಿಂತೆಯಿಲ್ಲ. ಯಾವ ಅಧಿಕಾರಿ ತಪ್ಪು ಮಾಡುತ್ತಾನೆಯೋ ಅವನಿಗೆ ಶಿಕ್ಷೆಮಾಡುವುದು ಆವಶ್ಯಕವಾದ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಈ ರೀತಿ ಕೆಲವು ಅಧಿಕಾರಿಗಳಿಗೆ ಶಿಕ್ಷೆ ಆಗಿದೆ. ಜನ ಹೇಳುತ್ತಾರೆ: ನಾನು ಬಹಳ ಮೃದುವಾದ ಮನುಷ್ಯ, ಈ ಮನುಷ್ಯ ಚೀಫ್ ಮಿನಿಸ್ಟರ್ ಕೆಲಸಕ್ಕೆ ಯೋಗ್ಯನಲ್ಲ, ಹೇಳುವುದನ್ನೆಲ್ಲಾ ಒಪ್ಪಿಕೊಳುತ್ತಾನೆ; ಆದ್ದರಿಂದ ಏನು ಅಧಿ

(ಶ್ರೀ ಎಸ್. ನಿಜಲಿಂಗಪ್ಪ)

ಕಾರ ನಡೆಸುತ್ತಾನೆಯೋ ಏನೋ ಎಂದು ಅನೇಕರ ಮನಸ್ಸಿನಲ್ಲಿದೆ. ಆದರೆ ಒಂದು ಮಾತು ಹೇಳುತ್ತೇನೆ. ಈ ವಿಚಾರ ಬಂದಾಗ ಮಾತ್ರ ಬಹಳ ಕಠಿಣವಾಗಿ ಇರುತ್ತೇನೆ. ನನ್ನ ಸಹೋದ್ಯೋಗಿಗಳಿಗಿಂತಲೂ ನಾನು ಬಹಳ ಕಠಿಣವಾಗಿರುತ್ತೇನೆ ಎಂದು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಎಂದೂ ದಯಾ ದಾಕ್ಷಿಣ್ಯಗಳಿಗೆ ಒಳಗಾಗುವುದಿಲ್ಲ. ಇದಕ್ಕೆ ನಿಮ್ಮ ಸಹಕಾರ ಬೇಕು. ಒಬ್ಬ ಅಧಿಕಾರಿಗೆ ಲಂಚಕೊಡಬೇಕಾದರೆ ಅದಕ್ಕೆ ಮತ್ತೊಬ್ಬನು ಇರಬೇಕು. ಎರಡುಕೈ ಸೇರದೆ ಚಪ್ಪಾಳೆ ಆಗುವುದಿಲ್ಲ. ಸಾರ್ವಜನಿಕರೂ ಸಹ ಇದಕ್ಕೆ ಸೇರುತ್ತಾರೆ. ಸೇರದಿದ್ದರೆ ಆಗುವುದಿಲ್ಲ. ಹೀಗಾಗಿ ಇದು ತಮ್ಮ ಕರ್ತವ್ಯ, ನನ್ನ ಕರ್ತವ್ಯ, ನಮ್ಮೆಲ್ಲರ ಕರ್ತವ್ಯ, ಈ ಮಾನ್ಯ ಸಭೆಯ ಎಲ್ಲರ ಕರ್ತವ್ಯ. ಏನಾದರೂಮಾಡಿ ಲಂಚಕೋರತನವನ್ನು ಕಡಮೆಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನಮಾಡಬೇಕು. ಖಂಡಿತ ನಾವು ನಿರ್ವಂಚನೆಯಿಂದ ಪ್ರಯತ್ನಮಾಡಿದರೆ, ದಯಾ ದಾಕ್ಷಿಣ್ಯ ಎಲ್ಲ ಬಿಟ್ಟರೆ ಇದು ಸಾಧ್ಯವಾಗುತ್ತದೆ ಎಂದು ಕಾಣುತ್ತದೆ. ಇದಕ್ಕೆ ತಮ್ಮ ಸಹಕಾರವನ್ನು ಕೋರುತ್ತೇನೆ.

ಇನ್ನು ಪ್ರೊಹಿಬಿಷನ್ ವಿಚಾರ. ಇದು ಬಹಳ ಕಷ್ಟವಾದ ಪ್ರಶ್ನೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ, ಒಂದು ಕಡೆ ಕುಡಿಯುವುದಕ್ಕೆ ನಿರ್ಬಂಧ ಹಾಕುವುದು ಮತ್ತೊಂದು ಕಡೆ ಉತ್ತೇಜನ ಕೊಡುವುದು, ಇದು ಸರಿಯಲ್ಲ. ಪೂರ್ತಿ ನಾವು ಈ ನೀತಿಯನ್ನು ಒಪ್ಪಬೇಕು, ಇಲ್ಲವೇ ತಿರಸ್ಕರಿಸಬೇಕು. ನನ್ನ ಅನುಭವದಲ್ಲಿ ಇವೊತ್ತು ಒಂದು ಕವಲು ಮನಸ್ಸಾಗಿದೆ, ಇಟ್ಟುಕೊಳ್ಳಬೇಕೆ ಬಿಡಬೇಕೇ ಎಂದು ಮಾನವ ದೃಷ್ಟಿಯಿಂದ, ನೀತಿಯ ದೃಷ್ಟಿಯಿಂದ ಎಲ್ಲ ದೃಷ್ಟಿಗಳಿಂದಲೂ ಇದು ಹೋಗಬೇಕು. ಇದು ಆಗುವಾಗ ಈಗಿನ ದೃಷ್ಟಿಯಿಂದ ನೋಡಿದರೆ ಕೆಲವು ಕಡೆ ಪಾನನಿರೋಧ ಇದೆ; ಕೆಲವು ಕಡೆ ಪಾನನಿರೋಧ ಇಲ್ಲ. ಹೀಗಿರುವಾಗ ಇದನ್ನು ಹೇಗೆ ಸಾಧನೆ ಮಾಡಬೇಕು ಎನ್ನುವುದೇ ಗೊತ್ತಾಗುವುದಿಲ್ಲ. ನಮ್ಮ ಆರ್ಥಿಕ ಮಂತ್ರಿಗಳಿಗೆ ಇದನ್ನು ಬಿಟ್ಟು ಬಿಡಬೇಕೆಂದರೆ ಮನಸ್ಸು ಬರುವುದಿಲ್ಲ. ಏಕೆಂದರೆ ಕಷ್ಟ. ತಕ್ಕಡಿ ತೂಗಬೇಕಲ್ಲ! ಆ ದೃಷ್ಟಿಯಿಂದ ಯೋಗ್ಯ ಎಂದರೂ ಮುಂದಿನ ವರ್ಷ ಈ ಬಡ್ಜೆಟ್ ಅಧಿವೇಶನದ ಒಳಗಾಗಿ ಯಾವುದಾದರೂ ಒಂದು ಕ್ರಮ ತೆಗೆದುಕೊಂಡು, ಇಟ್ಟುಕೊಳ್ಳುವುದಾದರೆ ಪೂರ್ತಿ ಎಲ್ಲಾ ಕಡೆಯೂ ಪಾನನಿರೋಧವನ್ನು ಜಾರಿಗೆ ತರುತ್ತೇವೆ. ಈ ರೀತಿ ಅರ್ಧ ಉಂಟು ಅರ್ಧ ಇಲ್ಲ ಎನ್ನತಕ್ಕ ವಿಚಾರ ತೀರ್ಮಾನವಾಗಿ ಈ ಸಭೆಯಮುಂದೆ ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಖಂಡಿತವಾಗಿ ಬರುತ್ತದೆ ಎಂದು ಖಂಡಿತವಾಗಿಯೂ ಹೇಳುತ್ತೇನೆ. ಪಾನನಿರೋಧ ಜಾರಿಗೆ ಬರಬೇಕೆಂದು ನನ್ನ ಮನಸ್ಸಿನಲ್ಲಿ ಇದೆ. ನಿಜವಾಗಿಯೂ ಕಾರ್ಯಗತವಾಗಬೇಕಾದರೆ, ಇದು ಬಹಳ ಕಷ್ಟದ ಮಾತು, ಬಹಳ ಕಷ್ಟ ಇದೆ, ಎಲ್ಲೋ ಒಂದು ರಾಜ್ಯದಲ್ಲಿ ಮಂತ್ರಿಗಳ ಕಾಂಪೌಂಡ್‌ನಲ್ಲೇ ಸಾರಾಯಿ ತಯಾರಾಗುತ್ತಿತ್ತು. ಪಾಪ ಅವರು ಏನು ಮಾಡುತ್ತಾರೆ?

ಒಬ್ಬ ಸದಸ್ಯರು.—ಮನೆಯ ಒಳಗೇ?

ಶ್ರೀ ಎಸ್. ನಿಜಲಿಂಗಪ್ಪ.—ಮನೆಯ ಒಳಗಲ್ಲ. ಅವರು ಬಹಳ ದೊಡ್ಡವರು. ಅದು ಬೊಂಬಾಯಿ ರಾಜ್ಯದಲ್ಲಿ ಆಯಿತು. ಬೊಂಬಾಯಿ ರಾಜ್ಯ ಎಂದರೆ ಬಹಳ ಕಠಿಣವಾಗಿ ಸರ್ಕಾರವನ್ನು ನಡೆಸತಕ್ಕ ಜನ. ಅಂತಹವರ ಮನೆಯ ಕಾಂಪೌಂಡಿನಲ್ಲೇ ಈ ರೀತಿ ನಡೆಯುತ್ತಾ ಇತ್ತು. ಮನುಷ್ಯತ್ವ ಒಂದು ಕೆಳದರ್ಜೆಗೆ ಹೋದಾಗ ಎಲ್ಲಿಗೆ ನಿಲ್ಲುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆಗಲೇ ನಾನು ಹೇಳಿದಂತೆ ತಾವುಗಳೆಲ್ಲರೂ ಸಹಕರಿಸುತ್ತೀರಿ ಎಂಬ ನಂಬಿಕೆಯಿಂದ ಇದನ್ನು ನಿಲ್ಲಿಸಬೇಕು, ನಿಲ್ಲಿಸುತ್ತೇವೆ. ಈ ದಿವಸ ಏನಾಗಿದೆ ಎಂದರೆ ಇದನ್ನು ಪೋಲೀಸ್‌ನವರಿಗೆ ವಹಿಸಿ ಬಿಟ್ಟಿದ್ದಾರೆ. ಆದ್ದರಿಂದ ಇದನ್ನು ಅವರ ಕೈತಪ್ಪಿಸಿ ಬೇರೆ ಏನಾದರೂ ಏರ್ಪಾಡು ಮಾಡಬೇಕು ಎನ್ನತಕ್ಕ ಒಂದು ಭಾವನೆ ನಮಗೆ ಬಂದಿದೆ. ಆದಷ್ಟು ಜಾಗ್ರತೆ ಅದನ್ನು ಕಾರ್ಯರೂಪಕ್ಕೆತಂದು ಪೋಲೀಸ್‌ನವರ ಕೈಯಿಂದ ತಪ್ಪಿಸುತ್ತೇವೆ. ಪೋಲಿಸ್‌ನವರ ಮೇಲೆ ಆಕ್ಷೇಪಣೆ ಮಾಡುತ್ತೇನೆಎಂದಲ್ಲ, ಯಾರೂ ಇಲ್ಲಿ ದೇವರ ಹಾಗೆ ಹುಟ್ಟಿರುವುದಿಲ್ಲ. ಪೋಲೀಸ್‌ನವರೂ ಕುಡಿಯುತ್ತಾರೆ, ಕುಡಿಯುವವನಿಗೂ ಕೊಡುತ್ತಾರೆ, ಮಕ್ಕಳು, ಮರಿ, ಮನೆಯವರಿಗೂ ಕೊಡುತ್ತಾರೆ. ಆದ್ದರಿಂದ ಇದು ಆವಶ್ಯಕ ಎಂದು ನಮಗೆ ಅನಿಸಿದೆ. ಸರ್ಕಾರದವರು ಈ ವಿಚಾರವನ್ನು ಅತ್ಯಂತ ತೀವ್ರತೆಯಿಂದ ಪರಿಶೀಲಿಸುತ್ತಾ ಇದ್ದಾರೆ.

ಇನ್ನು ಹರಿಜನರ ಮನೆಗಳ ವಿಚಾರದಲ್ಲಿ ಇಲ್ಲಿಯವರೆಗೂ ಸರ್ಕಾರ ಮನೆಯೊಂದಕ್ಕೆ 300 ರೂಪಾಯಿಗಳ ಸಹಾಯವನ್ನೊದಗಿಸುತ್ತಿತ್ತು. ನಮಗೆ ಮನೆಯೊಂದಕ್ಕೆ 500 ರೂಪಾಯಿಗಳ ಸಹಾಯವನ್ನಾದರೂ ನೀಡಬೇಕೆಂದು ಅಭಿಪ್ರಾಯವಿದೆ. ಆದರೆ ಈ ಬಗ್ಗೆ ತಕ್ಕಡಿಬೇರೆ ಸರಿತೂಗಿಸಬೇಕಾಗಿದೆ. ಆದರೆ ಬಾಕಿ ಬಾಬುಗಳಲ್ಲೇನಾದರೂ ಸ್ವಲ್ಪ ಹೆಚ್ಚು ಕಡಮೆಮಾಡಿ ಅಷ್ಟಿಷ್ಟನ್ನು ಉಳಿಸಿ ಈಗ ಸದ್ಯಕ್ಕೆ ಮನೆಯೊಂದಕ್ಕೆ 400 ರೂಪಾಯಿಗಳ ಧನ ಸಹಾಯ ನೀಡಬೇಕೆಂಬ ತೀರ್ಮಾನಕ್ಕೆ ಬರುವುದರಲ್ಲಿದ್ದೇವೆ. ಆದರೆ ಈಗ ಅವರಿಗೆ ಕೊಡಲಾಗುತ್ತಿರುವ ಸಹಾಯ ದ್ರವ್ಯವೇನಿದೆ ಅದರ ಬಗ್ಗೆ ನನಗೇನೋ ಅಷ್ಟು ತೃಪ್ತಿಯಿಲ್ಲ. ಅವರಿಗೂ ನಮಗೂ ಅಷ್ಟಿಷ್ಟು ತೃಪ್ತಿ ಉಂಟಾಗುವಷ್ಟರ ಮಟ್ಟಿಗೆ ಈ ಮೊಬಲಗನ್ನು ಹೆಚ್ಚುಮಾಡಬೇಕೆಂದು ಮನಸ್ಸುಮಾಡಿದ್ದೇವೆ. ನಾನು ನಿರ್ವಂಚನೆಯಿಂದ ಈ ಅಭಿಪ್ರಾಯವನ್ನು ತಮ್ಮ ಮುಂದಿಡುತ್ತಿದ್ದೇನೆ. ಇತರರಿಗೆ ನೀಡತಕ್ಕ ಸಹಾಯವನ್ನು ಸ್ವಲ್ಪ ಮಟ್ಟಿಗೆ ಕಡಮೆಮಾಡಿದರೂ ಚಿಂತೆಯಿಲ್ಲ, ಈ ಹರಿಜನರಿಗೆ ಮಾತ್ರ ಹೆಚ್ಚಿನ ಸಹಾಯ ನೀಡಬೇಕಾದ್ದು ಅಗತ್ಯ ಎಂದು ಹೇಳುತ್ತಿದ್ದೇನೆ. ಆದರೆ ಶ್ರೀ ಬಸವಲಿಂಗಪ್ಪನವರು ಒಂದು ಬುದ್ಧಿವಂತಿಕೆಯ ಮಾತನ್ನು ಹೇಳತಕ್ಕದ್ದರಲ್ಲಿ ಏನೂ ಜಾಣತನವಿಲ್ಲ. ನಾವು ಹರಿಜನರಿಗೆ ಈಗ ಕೊಡುತ್ತಿರುವ 300 ರೂಪಾಯಿಗಳ ಸಹಾಯಕ್ಕೆ ಬದಲಾಗಿ 400 ರೂಪಾಯಿಗಳ ಸಹಾಯ ನೀಡಬೇಕೆಂದು ಆಲೋಚನೆಮಾಡಿದ್ದೇವೆ.

ಇನ್ನು ವಿದ್ಯಾಭ್ಯಾಸದ ವಿಚಾರ. ನಾನು ಈ ಜನರಲ್ ಬಡ್ಜೆಟ್ ಚರ್ಚೆಯ ಬಗ್ಗೆ ಉತ್ತರ ಕೊಡುವಾಗ ಒಂದು ತತ್ತ್ವಾಧಾರದಮೇಲೆ ಮಾತನಾಡುತ್ತಿದ್ದೇನೆ. ಹಾಗೆ ಒಂದು ತತ್ತ್ವ ಪ್ರತಿಪಾದನೆ ಮಾಡತಕ್ಕಂಥಾ ಉತ್ತರಕ್ಕೆ ಒಂದು ಮಾನ್ಯತೆಯಿದೆ. ಆದರೆ ನಾವು ಇಲ್ಲಿಯವರೆಗೂ ಹೇಳಿರತಕ್ಕಂಥ ವಿಚಾರಗಳನ್ನೆಲ್ಲ ಕೇಳಿಕೇಳಿ ಸದಸ್ಯರಾದ ತಮ್ಮೆಲ್ಲರಿಗೂ ಬಹಳ ಬೇಜಾರಾಗಿರಬಹುದು. ಆದಾಗ್ಯೂ ತಾವೆಲ್ಲರೂ ನಮ್ಮ ಸಂಬಂಧಿಗಳಂತೆ ನಮ್ಮೊಡನೆ ಸಹಕರಿಸುತ್ತಿರುವುದಕ್ಕಾಗಿ ತಮ್ಮೆಲ್ಲರಿಗೂ ನಮ್ಮ ಧನ್ಯವಾದಗಳನ್ನರ್ಪಿಸುತ್ತೇನೆ. ಈಗ ಹೊಸರಾಜ್ಯದಲ್ಲಿ ನಡೆಯುತ್ತಿರುವ ಪ್ರಾಥಮಿಕ ವಿದ್ಯಾಭ್ಯಾಸಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಹಳೆಯ ಮೈಸೂರು—ಕೊಡಗು ಈ ಪ್ರಾಂತ

ದಲ್ಲಿರತಕ್ಕ ಮಿಡಲ್‌ಸ್ಕೂಲುಗಳಲ್ಲಿ ಯಾವಫೀಜೂ ಇರುವುದಿಲ್ಲ. ಇನ್ನುಳಿದ ಮೂರುಕಡೆಗಳಲ್ಲಿ ಬಾಲಕರು ಈ ಶಾಲೆಯಲ್ಲೂ ಫೀಜನ್ನು ಕೊಡುತ್ತಿದ್ದಾರೆ. ಆದರೆ ಬೊಂಬಾಯಿ ಕರ್ಣಾಟಕ ಪ್ರದೇಶದಲ್ಲಿ ಈ ಫೀಜೂ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗಿಯೇಇದೆ. ಈ ವ್ಯತ್ಯಾಸವನ್ನು ನಾನೂ ಮತ್ತು ನನ್ನ ಇತರ ಮಾನ್ಯ ಸಹೋದ್ಯೋಗಿಗಳೂ ತಪ್ಪಿಸಬೇಕೆಂದು ಆಲೋಚನೆ ಮಾಡಿದ್ದೇವೆ. ಪ್ರಾಥಮಿಕ ವಿದ್ಯೆ ಅನೇಕ ಬಾಬುಗಳಿಗೆ ಒಂದು ದೊಡ್ಡ ಬುನಾದಿ. ಆದುದರಿಂದ ಈ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಉಚಿತವಾಗಿ ಎಲ್ಲರಿಗೂ ದೊರೆಯತಕ್ಕ ಒಂದು ಏರ್ಪಾಡನ್ನು ಮಾಡೋಣವೆಂದು ಆಲೋಚನೆ ಮಾಡಿದ್ದೇವೆ.

ಇನ್ನು N.E.S. ಮತ್ತು C. D. ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಒಬ್ಬರು ಮನಸ್ಸಿಗೆ ಬಹಳ ನೋವನ್ನುಂಟು ಮಾಡತಕ್ಕಂಥ ವಿಚಾರವನ್ನೂ ಹೇಳಿದ್ದಾರೆ. ಈ ಬ್ಲಾಕುಗಳನ್ನು ಸರ್ಕಾರ ಈ ದಿವಸ ಕಾಂಗ್ರೆಸ್ ಮೆಂಬರುಗಳು ಯಾವ ಯಾವ ಕಾನ್‌ಸ್ಟಿಟ್ಯುಯೆನ್ಸಿಯಿಂದ ಚುನಾವಣೆಯಾಗಿ ಬಂದಿರುತ್ತಾರೋ ಅಂಥಾ ಚುನಾವಣಾ ಕ್ಷೇತ್ರಗಳಿಗೆ ಮಾತ್ರ ಕೊಡಲಾಗಿದೆಯೆಂದು ಒಂದು ಆಪಾದನೆ ಮಾಡಿದ್ದಾರೆ. ಇಂಥ ಆಕ್ಷೇಪಣೆಗೆ ಬುಡವಿಲ್ಲವೆಂದು ಒಂದು ಮಾತು ತಿಳಿಸಿದರೆ ಸಾಕು.

ಶ್ರೀ ಜಿ. ಎನ್. ಪುಟ್ಟಣ್ಣ.—ಯಾರು ಸ್ವಾಮಿ, ಆ ರೀತಿ ಆಕ್ಷೇಪಣೆ ಮಾಡಿರತಕ್ಕವರು ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ನೀವೇ ಎಂದು ಇಟ್ಟುಕೊಳ್ಳೋಣ. ನೀವು ನಾನ್‌ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೀರಿ. ನೀವು ಆರಿಸಿಬಂದ ಚುನಾವಣೆ ಕ್ಷೇತ್ರ ಕಾಂಗ್ರೆಸ್ಸಿನವರಿಗೆ ಸೇರಿದುದಲ್ಲವೆಂಬ ಭಾವನೆಯಿಂದ ನಮ್ಮ ಕ್ಷೇತ್ರಕ್ಕೆ ಈ ಬ್ಲಾಕುಗಳನ್ನು ಕೊಡದೆ ಕಾಂಗ್ರೆಸ್ ಸದಸ್ಯರು ಆರಿಸಿಬಂದಿರತಕ್ಕಂಥ ಚುನಾವಣೆ ಕ್ಷೇತ್ರಗಳಿಗೇ ಈ ಬ್ಲಾಕುಗಳನ್ನು ಕೊಟ್ಟಿದ್ದಾರೆಂದು ಒಂದು ಆಕ್ಷೇಪಣೆ ಎತ್ತಿದ್ದಾರೆ. ಆದರೆ ಈ ವಿಚಾರ ನಿಮ್ಮ ಚುನಾವಣಾ ಕ್ಷೇತ್ರಕ್ಕೇನೂ ಸಂಬಂಧಪಡುವುದಿಲ್ಲ. ಏಕೆಂದರೆ ನಿಮ್ಮ ಕ್ಷೇತ್ರ ನಾನ್ ಕಾಂಗ್ರೆಸ್ ಮೆಂಬರಿಗೆ ಸೇರಿದ್ದರೂ ಅಲ್ಲಿಗೆ ನಾವೀಗ ಒಂದಲ್ಲ ಎರಡು ಬ್ಲಾಕುಗಳನ್ನು ಕೊಟ್ಟಿದ್ದೇವೆ. ಇದರ ಸತ್ಯಾಂಶ ಹೀಗಿದೆ. 1957ನೆಯ ನವೆಂಬರಿನಲ್ಲಿ 60 ಬ್ಲಾಕುಗಳು ಮಂಜೂರಾಗಿ ಬಂದವು. ಆ ಪೈಕಿ 19 ಬ್ಲಾಕುಗಳು ಇರುವಕಡೆ ಯಾರೊಬ್ಬ ಕಾಂಗ್ರೆಸ್ ಮೆಂಬರೂ ಇರುವುದಿಲ್ಲ. ಈ ಸಭೆಯಲ್ಲಿ ಈ ದಿವಸ ಇರತಕ್ಕ ಕಾಂಗ್ರೆಸ್ ಮತ್ತು ನಾನ್ ಕಾಂಗ್ರೆಸ್ ಸದಸ್ಯರ ಬಲಾಬಲವನ್ನು ಗಮನಿಸಿದರೆ ಕಾಂಗ್ರೆಸ್ $\frac{3}{4}$ ಪಾಲು ನಾನ್‌ಕಾಂಗ್ರೆಸ್ $\frac{1}{4}$ ಪಾಲಿದೆ. ಹೀಗಿದ್ದರೂ ನಾವು ನಮ್ಮ ಪಾಲಿನಲ್ಲೂ ಖೋತಾಮಾಡಿಕೊಂಡು ನಿಮಗೆ ಸಹಾಯ ಮಾಡಿದ್ದೇವೆ. ಆದುದರಿಂದ ಆ ರೀತಿಯಾಗಿ ಮಾತನಾಡತಕ್ಕದ್ದು ಸರಿಯಾದದ್ದಲ್ಲ. ವಿನಾ ಕಾರಣ ಹೀಗೆಲ್ಲ ಮಾತನಾಡಿ ಒಬ್ಬರ ಮನಸ್ಸಿಗೆ ನೋವುಂಟು ಮಾಡುವುದು ಖಂಡಿತ ಸರಿಯಾದ್ದಲ್ಲ. ಈ ರೀತಿ ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿ ಮನಸ್ಸಿಗೆ ಅತ್ಯಂತ ನೋವುಂಟುಮಾಡತಕ್ಕದ್ದು ಯಾರೊಬ್ಬರಿಗೂ ಸರಿಯಾದ್ದಲ್ಲ. ನಾವು ಮೊದಲೇನೋ ಎಲ್ಲರಂತೆ ಸಂಸ್ಥೆಗಳ ಆಶ್ರಯದಲ್ಲಿ ಚುನಾವಣೆಗೆ ನಿಲ್ಲುತ್ತೇವೆ. ಜನರು ತಮ್ಮ ಓಟನ್ನು ಕೊಟ್ಟು ಸದಸ್ಯರನ್ನಾಗಿ ಆರಿಸಿ ಕಳುಹಿಸಿಬಿಡುತ್ತಾರೆ. ಆದರೆ ಹಾಗೆ ಬಂದ ಅನಂತರ ಇಲ್ಲಿ ಸರ್ಕಾರದ ಆಡಳಿತ ನಡೆಸಲು ಕುಳಿತುಕೊಂಡ ಮೇಲೆ ಇದು ಕಾಂಗ್ರೆಸ್ ಏರಿಯಾ—ಇದು ನಾನ್ ಕಾಂಗ್ರೆಸ್ ಏರಿಯಾ ಎಂದು ಭಿನ್ನಭೇದವೆಣಿಸಲಿಕ್ಕೆ ಅವಕಾಶವೇ ಇಲ್ಲ. ಸರ್ಕಾರ ಇಡಿಯ ರಾಜ್ಯಕ್ಕೆ ಹೊಣೆಗಾರವಾಗಿದೆ. ಒಂದು ಪಾರ್ಟಿಗಾಗಿ ಸರ್ಕಾರವಿಲ್ಲ. ಆದುದರಿಂದ ಅಂಥ ಭಿನ್ನಭಾವಗಳನ್ನೆಲ್ಲ ಈ ಸ್ಥಾನಕ್ಕೆ ಬಂದ ಕೂಡಲೇ ಬಿಟ್ಟುಬಿಡಬೇಕಾಗುತ್ತದೆ. ಕಾಂಗ್ರೆಸ್ ಪಾರ್ಟಿ ರಾಜ್ಯಭಾರ ಮಾಡುತ್ತಿದ್ದರೂ ಕಾನ್‌ಸ್ಟಿಟ್ಯೂಷನ್‌ಗೆ ಅನುಸರಿಸಿ ಆಡಳಿತಗಳು ನಡೆಯಬೇಕು.

ಇನ್ನು ಸಹಕಾರ ಬಾಬಿನ ಪರವಾಗಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಆ ಟೀಕೆಗಳಲ್ಲಿ ಕೆಲವು ನಿಜವಾಗಿಯೂ ಮಾನ್ಯತೆಗೆ ಯೋಗ್ಯವಾದಂಥವುಗಳಾಗಿವೆ. ಈ ಇಲಾಖೆ ಇತ್ತೀಚೆಗೆ ಬಹಳವಾಗಿ ಬೆಳೆಯುತ್ತಿದೆ. ಈ ಇಲಾಖೆಯ ಆಡಳಿತ ಕಾರ್ಯವನ್ನು ಬಹಳ ದಕ್ಷತೆಯಿಂದ ನಡೆಸುತ್ತಿದ್ದಂಥ ಒಬ್ಬ ಅಧಿಕಾರಿಗಳು ನಮ್ಮಲ್ಲಿದ್ದರು. ಶ್ರೀ ಬಿ. ಎ. ಪಾಟೀಲ್ ಎಂದರೆ ಅವರು ಬಹಳ ದಕ್ಷರು. ಆದರೆ ನಮ್ಮೆಲ್ಲರ ದುರದೃಷ್ಟವಶಾತ್ ಅವರು ಕಾಲವಾಗಿ ಹೋದರು. ಈ ದಿವಸ ಯಾರು ಆ ಸ್ಥಾನದಲ್ಲಿದ್ದಾರೋ ಅವರೂ ಕೂಡ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಈ ಇಲಾಖೆ ಬಹಳ ವರ್ಷದಿಂದಲೂ ಕೆಲಸಮಾಡಿಕೊಂಡು ಬರುತ್ತಿದೆ. ಈ ಇಲಾಖೆಯಲ್ಲಿ ಕೆಲವು ನ್ಯೂನತೆಗಳಿವೆ. ಕೆಲವು ಕಡೆ ಲೆಕ್ಕಪತ್ರಗಳು ಆಡಿಟ್ ಆಗಿಲ್ಲ. ಕೆಲವು ಕಡೆ ಹಣ ದುರುಪಯೋಗವಾಗಿದೆ. ಅಂಥ ಕೇಸುಗಳ ಬಗ್ಗೆ ಪ್ರಾಸಿಕ್ಯೂಟ್‌ಮಾಡಿದ್ದೇವೆ. ಇನ್ನು ಕೆಲವು ದಿವಸಗಳಲ್ಲೇ ಈ ಇಲಾಖೆಯ ಕೆಲಸಕಾರ್ಯಗಳನ್ನು ಒಂದು ಯೋಗ್ಯರೀತಿಯಲ್ಲಿ ವ್ಯವಸ್ಥೆಮಾಡೋಣ. ಈ ಇಲಾಖೆಯನ್ನು ರೀಆರ್ಗನೈಜ್‌ಮಾಡತಕ್ಕಬಗ್ಗೆ ಕೆಲವು ಏರ್ಪಾಡುಗಳನ್ನಾಗಲೇ ಕೈಗೊಂಡಿದ್ದೇವೆ. ಕೆಲವು ಆಫೀಸರುಗಳಿಗೆ ಮತ್ತು ನೌಕರರಿಗೆ ಈ ಬಾಬಿನಲ್ಲೊಂದು ಹೆಚ್ಚಿನ ಮಾಹಿತಿ ದೊರೆಯುವಂತೆ ಮಾಡಲು ಮೂರು ಕಡೆ ಟ್ರೈನಿಂಗ್ ಸೆಂಟರುಗಳನ್ನು ತೆರೆಯಲಾಗಿದೆ. ವರ್ಷಕ್ಕೆ ಸುಮಾರು 300 ಜನ ಟ್ರೈನಿಂಗ್ ಪಡೆದು ಹೊರಗೆ ಬರಲು ಅವಕಾಶಮಾಡಿದೆ. ಈ ನೌಕರರಲ್ಲಿ ದಕ್ಷತೆ ಹೆಚ್ಚಿಸಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲು ತೀರ್ಮಾನ ಮಾಡಿದ್ದೇವೆ. ಇನ್ನು ತುಮಕೂರಿನ ಸೊಸೈಟಿಯ ವಿಚಾರದ ಬಗ್ಗೆ ಒಂದು ಮಾತು ತಿಳಿಸಬೇಕಾಗಿದೆ. ಈ ದಿವಸ ಅಲ್ಲಿಯ ಕೆಲಸಕಾರ್ಯಗಳು ಸರಿಯಾಗಿ ನಡೆಯುವಂತೆ ಏರ್ಪಾಡನ್ನು ಮಾಡಲಾಗಿದೆಯೆಂಬ ಆಶ್ವಾಸನ ಕೊಡುತ್ತೇನೆ. ಈಗಾಗಲೇ ಏಳೂಕಾಲು ಗಂಟೆಯಾಗಿದೆ. ಇನ್ನು ಉಳಿದಿರತಕ್ಕ ಕೆಲವು ವಿಚಾರಗಳೇನಿವೆ ಅವುಗಳ ಬಗ್ಗೆ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರಕೊಡುವಾಗ ವಿವರವಾಗಿ ತಿಳಿಸಲಾಗುತ್ತದೆ.

ಶ್ರೀ ಎಫ್. ಎಚ್. ಮೊಹಸಿನ್.—ಹೋಂಗಾರ್ಡುಗಳ ವಿಚಾರವೋ ?

Sri S. NIJALINGAPPA.—I will examine it. ಇನ್ನು ಕಡೆಯದಾಗಿ ಈ ದಿವಸ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಎಂತೆಂತಹ ಸಂಪತ್ ಸದಾಮ್ಮೃದ್ಧಿಗಳಿರುತ್ತವೆ ಎಂಬುದನ್ನು ಪ್ರತಿಯೊಬ್ಬ ಮಾನ್ಯಸದಸ್ಯರೂ ಹೋಗಿ ನೋಡಿಕೊಂಡು ಬರತಕ್ಕದ್ದು ಒಳ್ಳೆಯದು. ನಮ್ಮ ದೇಶದ ಸಂಪತ್ ಸಮೃದ್ಧಿ ಈ ದಿವಸ ಒಂದಕ್ಕೆ ಒಂದೂವರೆಯಷ್ಟು ಜಾಸ್ತಿಯಾಗಿದೆ. ದೇಶದಲ್ಲಿ ನಮ್ಮ ನೈಸರ್ಗಿಕ ಸಂಪತ್ತು ಎಲ್ಲೆಲ್ಲಿ ಹೀಗೆ ಎಷ್ಟೆಷ್ಟರಮಟ್ಟಿಗಿದೆಯೆಂಬುದನ್ನು ಪ್ರತಿಯೊಬ್ಬರೂ ನೋಡಿ ಆ ವಿಚಾರಗಳನ್ನು ಗ್ರಹಿಸತಕ್ಕದ್ದು ಬಹಳ ಒಳ್ಳೆಯದು. ಅದರಿಂದ ಬಹಳ ಅನುಕೂಲವಿದೆ. ಆದರೆ ಆ ಒಂದು ಮಹತ್ತ್ವದ ವಿಚಾರದ ಕಡೆಗೆ ಗಮನ ಹರಿಯದೆ ಮಂತ್ರಿಗಳು ಸುಮ್ಮನೆ ಟಿ. ಎ., ಡಿ. ಎ. ಗಾಗಿ ಪದೇ ಪದೇ ತಿರುಗುತ್ತಿದ್ದಾರೆಂದು ಮಾತನಾಡುವುದು ಸರಿಯಲ್ಲ. ಈ ಅಧಿವೇಶನ ಮುಗಿಯುವುದರೊಳಗಾಗಿಯೇ ಈ ಮಾನ್ಯ

(SRI S. NIJALINGAPPA)

ಸಭೆಯು ಹಾಗೂ ಮೇಲ್ಮನೆಯು ಮತ್ತು ಪಾರ್ಲಿಮೆಂಟಿನ ಎಲ್ಲ ಸದಸ್ಯರುಗಳನ್ನೂ ಒಂದೊಂದು ಬ್ಯಾಚ್ ಮಾಡಿ ನಮ್ಮ ರಾಜ್ಯ ಎಷ್ಟು ಸುಂದರವಾಗಿದೆ ಮತ್ತು ಎಲ್ಲೆಲ್ಲಿ ಎಂಥೆಂಥ ಸಂಪತ್ತುಗಳಿಂದ ಕೂಡಿದೆ, ನಮ್ಮ ದೇಶದ ಸಂಪತ್ತು, ಸಂಸ್ಕೃತಿ, ಚಾರಿತ್ರಿಕ ಹಿನ್ನೆಲೆ, ಇವೆಲ್ಲ ಎಂಥ ಪ್ರಭಾವವುಳ್ಳಂಥವುಗಳೆಂಬುದನ್ನು ತಿಳಿಯಲು 5-6 ಬ್ಯಾಚುಗಳ ಮೂಲಕ ಎಲ್ಲರನ್ನೂ ಕರೆದುಕೊಂಡುಹೋಗಿ ಆ ಸ್ಥಳಗಳು ಎಲ್ಲೆಲ್ಲಿರುತ್ತವೆಂಬುದನ್ನು ನೋಡಿಕೊಂಡು ಬರತಕಂಥ ಒಂದು ಏರ್ಪಾಡನ್ನು ಮಾಡಬೇಕೆಂದಿದ್ದೇವೆ. ಎಲ್ಲರೂ ನಮ್ಮ ರಾಜ್ಯ ಎಂಥ ಸಂಪದ್ಯುಕ್ತವಾದ ರಾಜ್ಯ ಎನ್ನುವುದನ್ನು ನೋಡಿ ತಿಳಿದುಕೊಳ್ಳಲಿ. ಹಾಗೆ ಆ ಸ್ಥಳಗಳನ್ನು ನೋಡಿಕೊಂಡು ಬಂದನಂತರ ಈ ರಾಜ್ಯವನ್ನು ಮುಂದಕ್ಕೆ ಹೇಗೆ ಕಟ್ಟಬೇಕೆಂಬುದನ್ನು ನಾವೆಲ್ಲರೂ ಸೇರಿ ಪರಿಶೀಲನೆ ಮಾಡಿ ತೀರ್ಮಾನಕ್ಕೆ ಬಂದು ಅದರಂತೆ ಈ ರಾಜ್ಯವನ್ನು ಕಟ್ಟೋಣ. ಆದರೆ ನಮ್ಮಲ್ಲಿ ಜಗಳಗಳೇನೂ ಇಲ್ಲವೆಂದು ನಾನು ಹೇಳುತ್ತಿಲ್ಲ. ಈ ನಮ್ಮ ಜಗಳಗಳೆಲ್ಲ ಗಂಡ ಹೆಂಡಿರ ಜಗಳದಂತೆ. ಈ ದಿವಸ ಜಗಳವಾಡಿದರೆ ಮತ್ತೆ ನಾಳೆ ಸೇರಿಯೇ ಸೇರಿಕೊಳ್ಳುತ್ತೇವೆ.

ಈಗ ತಾನೆ ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಕಲಿಯುತ್ತಿದ್ದೇವೆ. ನಮಗೆ ಪ್ರಜಾಪ್ರಭುತ್ವ ಹೊಸದು. ಸಹಸ್ರಾರು ವರ್ಷಗಳಿಂದ ಇರಲಿಲ್ಲ. ಅಂಥಾದ್ದು, ಈ ಹೊತ್ತು ಒಂದು ದೇಶ, ಒಂದು ಕಾನೂನು, ಒಬ್ಬ ಅಧ್ಯಕ್ಷ, ಒಂದು ಬಾವುಟವಾಗಿದೆ. ಹೊಸರಾಜ್ಯವನ್ನು ಕಟ್ಟುತ್ತಿದ್ದೇವೆ. ಪ್ರಜಾವರ್ಗಕ್ಕೆ ಅಧಿಕಾರ ಕೊಟ್ಟಿದ್ದೇವೆ. ಆದ್ದರಿಂದ ಮುಖ್ಯವಾಗಿ ಇಂದು ದೇಶವನ್ನು ಹೇಗೆ ಬೆಳೆಸೋಣ, ಹೆಚ್ಚಿಗೆ ಆಹಾರವನ್ನು ಹೇಗೆ ಉತ್ಪತ್ತಿ ಮಾಡೋಣ ಎಂಬುದು ನಮ್ಮ ಉದ್ದೇಶವಾಗಿರಬೇಕು. ನಿಮ್ಮ ಟೀಕೆ ಅದಕ್ಕಾಗಿ ಇರಬೇಕು. ಎಷ್ಟು ಕಟುವಾಗಿಯಾದರೂ ಟೀಕೆಮಾಡಿ. ಅದನ್ನು ಕೇಳುವುದು ನನ್ನ ಜವಾಬ್ದಾರಿ, ನನ್ನ ಹೊಣೆಗಾರಿಕೆ ಮತ್ತು ನನ್ನ ಸ್ನೇಹಿತರ ಹೊಣೆಗಾರಿಕೆ. ಒಟ್ಟಿನಲ್ಲಿ ತಾವೂ ನಾವೂ ಇಬ್ಬರೂ ಒಂದೇ ಕೆಲಸಮಾಡುತ್ತಿದ್ದೇವೆಂದು ಹೇಳಿ ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ ಶ್ರೀಮಾನ್ ಮಲ್ಲಾರಾಧ್ಯರು-ಅವರೀಗ ಇಲ್ಲದ್ದಿದ್ದರೆ ಚೆನ್ನಾಗಿತ್ತು-ಅವರು ಹೇಳಿದರು, 'ಸುಟ್ಟುಹಾಕಿರಿ, ನಿಮ್ಮ statistics ನ್ನು ' ಎಂದು. ಏಕೆಂದರೆ, ಶೇಕಡ 148 ರಷ್ಟು food production ಜಾಸ್ತಿಯಾಗಿದೆಯೆಂದು print ಮಾಡಿದ್ದಾರೆ. ಅಷ್ಟುಮಾಡಿಲ್ಲ. ಇದು ಮಹಾ ತಪ್ಪು ; ಆದ್ದರಿಂದ ಸುಟ್ಟುಹಾಕಿರಿ ಎಂದು ಹೇಳಿದರು. ಈ ವರ್ಷ ತಾನೆ ರಿಟೈರ್ ಆಗಿದ್ದಾರೆ ; ಬುದ್ಧಿವಂತರು ; ಒಳ್ಳೆಯ ವಿದ್ಯಾಭ್ಯಾಸ ಮಾಡಿದವರು; ಹಾಗೂ ಇನ್ನೂ active ಆಗಿರುವವರು—He is physically active—ಇಂಥವರು ಉದ್ವೇಗದಲ್ಲಿ ಸ್ವಲ್ಪ ಮುನ್ನುಗ್ಗಿ ಹೇಳಿದ್ದಾರೆನ್ನಬೇಕು. ಅವರಿಗೆ ಇಷ್ಟು ಹೇಳಬಯಸುತ್ತೇನೆ. ಮೊದಲು 1939 ನೆಯ ಇಸವಿಯನ್ನು basic year ಆಗಿ ಇಟ್ಟುಕೊಂಡಿದ್ದೆವು, ಆಮೇಲೆ 1949 ನೆಯ ಇಸವಿಯನ್ನು ಇಟ್ಟುಕೊಂಡಿತ್ತು. ಈಗ 1952-53 ನೆಯ ಇಸವಿಯನ್ನು ಇಟ್ಟುಕೊಂಡು ಅದರಿಂದ ಅಳೆಯುತ್ತಿದ್ದೇವೆ. ಆ ವರ್ಷದ್ದನ್ನು 100 ಎಂದು ಭಾವಿಸಿಕೊಂಡರೆ ಈ ವರ್ಷದ್ದು 148 ಎಂದು ಹೇಳಬಹುದು. ಇದನ್ನೇನೂ ಸುಡಬೇಕಾಗಿಲ್ಲ ; ಸ್ವಲ್ಪ ಸಾವಧಾನದಿಂದ ಓದಿರಿ. ವಿಷಯುಗಳನ್ನು ಮನನ ಮಾಡಿಕೊಳ್ಳಿ. ಕಷ್ಟಪಟ್ಟು ಅಂಕಿ ಅಂಶಗಳನ್ನು ಶೇಖರಿಸಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಷ್ಟು ರೂಪಾಯಿ ಖರ್ಚಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೂ ಹೇಳುತ್ತೇನೆ, ಸಮುದ್ರದಲ್ಲಿ ಮೀನು ಹಿಡಿಯೋಣ ಎಂದು.

ಹಾಗೆಯೇ 11 ನೆಯ ಪುಟದಲ್ಲಿ Area sown 24,420 ಎಕರೆಗಳೆಂದು ಹೇಳಿದೆ, 16 ನೆಯ ಪುಟದಲ್ಲಿ Total Area under food and non-food crops 22,742 ಎಕರೆಗಳೆಂದು ಹೇಳಿದೆ, total Area under food and non-food crops 22,742 ಎಕರೆಗಳಾದಲ್ಲಿ, Area sown 24,420 ಎಕರೆಗಳು ಹೇಗಾದೀತು ಎಂದು ಟೀಕಿಸಿದರು. ಈ ವ್ಯತ್ಯಾಸಕ್ಕೆ ಕಾರಣ ಇಷ್ಟೆ. ಜಮೀನುಗಳಲ್ಲಿ ಎರಡು ಸಲ ಬೆಳೆಬೆಳೆಯುತ್ತಾರೆ. ಈ ಕಾರಣದಿಂದ 15 ಎಕರೆಗಳು ಬತ್ತದ ಪ್ರದೇಶವಾದರೂ area under food crops 5 ಎಕರೆಗಳೇ ಆಗಬಹುದು. ಮಂಗಳೂರು ಮುಂತಾದ ಕೆಲವು ಕಡೆಗಳಲ್ಲಿ ಎರಡು ಮತ್ತು ಮೂರು ಬೆಳೆಗಳನ್ನೂ ಬೆಳೆಯುತ್ತಾರೆ. ಆದ್ದರಿಂದ ಅಂಕಿಗಳಲ್ಲೇನೂ ತಪ್ಪಿಲ್ಲ. ಅಷ್ಟೊಂದು ಅವಹೇಳನ ಮಾಡಬೇಕಾಗಿಲ್ಲ. ನೋಡಿದರೇನೋ ಯಾರಿಗಾದರೂ ಅನುಮಾನ ಬರುವುದು ಸಹಜ. ಆದರೆ, ವಿಚಾರ ಹೇಗಿದೆಯೆಂದು ಸ್ವಲ್ಪ ತಿಳಿದುಕೊಳ್ಳಲಿ ಎಂದು ನಾನು ಹೇಳ ಬಯಸುತ್ತೇನೆ.

ನನ್ನ ಮಾನ್ಯ ಸಹೋದ್ಯೋಗಿಗಳು ತಮತಮಗೆ ಸಂಬಂಧಪಟ್ಟ ಖಾತೆಗಳ ವಿಚಾರದಲ್ಲಿ ಮಾತನಾಡುವುದು ಬೇರೆ ಇದೆ. ಕಾಲಾವಕಾಶವಿಲ್ಲದಿರುವುದರಿಂದ ಈಗ ಮಾತನಾಡದಿರಬಹುದು. Demands ಸಂಬಂಧದಲ್ಲಿ ಮಾತನಾಡುತ್ತಾರೆ. ತಾವುಗಳೆಲ್ಲಾ ಈವರೆಗೂ ಹೇಳಿದಂತೆ ಅತ್ಯಂತ ಜವಾಬ್ದಾರಿಯಿಂದ ಹೇಳಬೇಕು. ನಾವೂ ಅತ್ಯಂತ ಅಭಿಮಾನದಿಂದ ಕೇಳುತ್ತೇವೆ. ಮತ್ತು ಇಲ್ಲಿನ ಚರ್ಚೆಗಳು ಬರಬರುತ್ತಾ ಮೇಲ್ಮಟ್ಟಕ್ಕೆ ಬರುವಂತೆ ಶ್ರಮಿಸೋಣ.

ಕೊನೆಯದಾಗಿ ನಾವೆಲ್ಲರೂ ವಿಶ್ವಾಸವನ್ನು ಬೆಳೆಸೋಣ. ನಮ್ಮ ರಾಜ್ಯದ ಜನ ಸುಖದಿಂದ ಇರುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡೋಣವೆಂದು ಹೇಳುತ್ತಾ ತಮ್ಮೆಲ್ಲರ ಸಹಕಾರವನ್ನು ಆಶಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now adjourn and meet again at one of the clock tomorrow.

The House adjourned at Twenty-five Minutes past Seven of the Clock to meet again at One of the Clock on Thursday, the 10th April 1958.

WD 920—GPB—900—20-9-1958